बालधन्वि वेङ्कटार्यग्रन्थमाला पञ्चदशमं सुमं.

श्रीमद् द्रमिडोपनिषत्सारसङ्ग्रहः

* * *

श्री बालधन्विकुलकौस्तुभैः, यदुगिरिनित्यवासरसिकैः,
साहित्यरत्नं. आस्थानमहाविद्वान्. शास्त्रकविरत्नं.
साहित्यालङ्कार. सांख्ययोगवेदान्तविद्वान्. सांख्यतीर्थं.

इलैयविल्लि जग्गू वेङ्कटाचार्यस्वामिभिः

विरचितः

तत्पुत्रेण साहित्यवेदान्तविदुषा

इलैयविल्लि जग्गू सुदर्शनाचार्येण

विरचित भाषानुवादसहितः तेनैव सम्पादितः प्रकाशितश्च.

Editor & Publisher :

Ilaiyavilly Jaggu Sudarshanacharya,

Sahitya Vedanta Vidvan

MELKOTE

1961

एतत्कवि-विरचिताः अमुद्रिताः ग्रन्थाः

१ ऋणमोचनस्तोत्रम् पद्यग्रन्थः
२ यदुगिरियतिराजमन्दस्मितविंशतिः (सव्याख्या) ,,
३ पुरुषकारवैभवम् (लक्ष्मीस्तोत्रम्) (सटीकं) ,,
४ सूर्यादिग्रहान्योक्तिः ५ काकान्योक्तिः
६ ऋतुवर्णनम् ७ ग्रन्थिज्वरचरितम्
८ मुक्तकश्लोक-कदम्बम् ,,
९ दिव्यप्रबन्धप्रामाण्यसमर्थनम् ,,
१० दिव्यसूरिचरितानि (गद्यग्रन्थाः)

१) प्रथमसूरित्रयचरितम् २) शठकोपचरितम्
३) भट्टनाथचरितम् ४) भक्तिसारचरितम्
५) भक्तांघ्रिरेणुचरितम् ६) परकालचरितम्
७) कुलशेखरचरितम् ८) पाणसूरिचरितम्
९) श्रीगोदाचरितम् १०) आन्ध्रपूर्णचरितम्
११) श्रीवत्सचिह्नमिश्रचरितम्

११ श्रीवेदान्ताचार्याणामवस्थाद्वयस्थापनम्
१२ श्रीभाष्यस्य प्रपत्त्येकपरत्वस्थापनम्
१३ शारीरकाधिकरणमालिका
१४ यमकिङ्करसंवादव्याख्या
१५ श्रीकृष्णजयन्तीनिर्णयः
१६ गीतार्थसंग्रहव्याख्या [अग्रतः—

वालधन्वि वेङ्कटार्यग्रन्थमाला पञ्चदशमं सुमं.

श्रीमद् द्रामिडोपनिषत्सारसङ्ग्रहः

* * *

श्री वालधन्विकुलकौस्तुभैः, यदुगिरिनित्यवासरसिकैः,
साहित्यरत्नं. आस्थानमहाविद्वान्. शास्त्रकविरत्नं.
साहित्यालङ्कार. सांख्ययोगवेदान्तविद्वान्. सांख्यतीर्थ.

इलैयविल्लि जग्गू वेङ्कटाचार्यस्वामिभिः

विरचितः

तत्पुत्रेण साहित्यवेदान्तविदुषा

इलैयविल्लि जग्गू सुदर्शनाचार्येण

विरचित भाषानुवादसहितः तेनैव सम्पादितः प्रकाशितश्च.

Editor & Publisher:

Ilaiyavilly Jaggu Sudarshanacharya,
Sahitya Vedanta Vidvan

MELKOTE

1961

शालीवाहन शकाब्दाः १८८४ प्रथमावृत्तिः १०००

महीशूर नगरे
साम्राज्यम् वैद्युत मुद्रणालये
मुद्रितम्

श्रीः

श्रीमते रामानुजाय नमः

भूमिका

इह खलु जगति जन्तूनां जन्मजराजीवनभराक्रान्तानामशनवसनमात्रनिर्वृतानां सर्वेषां स्थाने किल चेतः पथमाक्रामति सकलमप्यैहिकं वस्तुजातमिति । महदिदमाश्चर्यस्थानं यत्किल जिहासितसकलविषयाणां भवभयाभितप्तभागधेयानां वैराग्यैकनिधीनामपि मुनीनां मनोरथपथमथनमन्थदण्डायमानं न केवलं कामनाविषयमपि तूत्कण्ठाविषयं वस्त्वेकमस्तीति । यदाह पाकशासनः कालिदासकृते कुमारसंभवे कामस्तवे – "वज्रं तपोवीर्यमहत्सु कुण्ठं त्वं सर्वतोगामि च साधकञ्च" इति ।

तद्वस्तु किमिति जिज्ञासायां जगज्जन्मादिकारणं ब्रह्मैव तदित्यभिहितम् । सद्ब्रह्मात्मादिशब्दैरभिधीयमानं तच्च श्रीमान् परमपुरुषो नारायण एवेति सामान्यविशेषन्यायपर्यवसितार्थप्रदर्शकेन "एको ह वै नारायण आसीन्न ब्रह्मा नेशानः" इत्यादि महोपनिषद्वाक्येन निर्णीतम् ॥

तदेतत्स्मृतिरप्याह –

"आलोड्य सर्वशास्त्राणि विचार्य च पुनः पुनः ।
इदमेकं सुनिष्पन्नं ध्येयो नारायणस्सदा ॥ " इति ।

"श्रोतव्यो मन्तव्य" इति रीत्या श्रुतिवाक्येभ्यश्श्रवणे कृते सर्वशास्त्राणि विमथ्य श्रुत्यनुसारिभिर्युक्तिभिरनुचिन्तने च कृते स एक एव नारायणो ध्येय इति निष्पन्नम् ॥

सकलशास्त्रवैदग्ध्यमुग्धानामपि सर्वसहनिशितधियां विपश्चितामपश्चिमानामपि न प्रज्ञापथमवतरति विषयोऽयमविचाल्यनिश्चयत्वेन । यतश्च तपो माहात्म्यलब्ध स्वधीविभ्रमैर्मुनिवरैस्तत्त्वजातं परस्परव्याहतं नानाविधं प्रतिपादितं स्वोपज्ञेषु विविधेषु शास्त्रेषु ॥ अतश्चोक्तम् –

"शास्त्रज्ञानं बहुक्लेशं बुद्धेश्चलनकारणम् ।
उपदेशाद्धरिं बुद्ध्वा विरमेत्सर्वकर्मसु ॥" इति ।

बहुतरक्लेशसाध्योऽपि, चलनस्वभावाया एव बुद्धेर्महिम्ना संशयबहुल एव तत्त्वनिर्णयो वरीवर्तीति नातिरोहितं विदुषाम् ॥ तत्रापि च परस्परव्याहतव्याहाराणां वचनेषु वनवासिनां मुनीनाम्।

अतश्च भगवन्निर्हेतुककटाक्षसाक्षात्कृतपरावरनिखिलतत्त्वयाथात्म्यज्ञानानां परांकुशपरकालादिदिव्यसूरीणां भगवदनुभवपरीवाहरूपतया स्वयं मुखोद्गतानादिनिधनाविच्छिन्नसंप्रदायश्रुतिनिकरशिरस्समभ्यर्चितार्थनिश्चायकदिव्यप्रबन्धरूपोपदेशमुखेन, भगवतस्सर्वकारणकारणत्वं, स्वरूपरूपगुणविभूत्यादिमत्त्वं, उपायोपेयत्वं सर्वफलप्रदत्वं, सार्वज्ञ्यसर्वशक्त्याश्रितवत्सलत्वस्वामित्वसौशील्यसौलभ्यमहोदारतादिसकलकल्याणगुणाकरत्वं, अखिलहेयप्रत्यनीकतां, सर्वस्वतंत्रतां पुरुषकारभूतया श्रिया सदाध्यासि-

तवक्षस्स्थलतां, "स महात्मा सुदुर्लभः" "क्षणोऽपि ते यद्विरहोऽतिदुस्सहः" इति यथा स्वभक्तवचनं क्षणविरहासहस्वभक्तजनविश्लेषासहिष्णुतां, निर्हेतुककृपामूलस्वव्यवसायफलभूताद्वैपाभिमुख्यादिकैङ्कर्यान्तफलप्रदानसुहितचेतनप्राप्तेरेव पुरुषार्थत्वञ्चाज्ञानान्यथाज्ञानविपरीतज्ञानविधुरं ज्ञात्वा को वा न निश्चायकपदमधिरोहेत् ! उपदेशेनानेन तत्त्वयाथात्म्यज्ञाने सुनिष्पन्ने "कषाये कर्मभिः पक्वे ततो ज्ञानं प्रजायते" इत्युक्तज्ञानसाधनभूतकर्मानुष्ठानेन किमिति भावः । अथवा– निश्चयज्ञानेनैतादृशेन तत्प्रपत्तिमन्तरेण नान्योऽस्त्युपाय इति । तत्प्रपत्तौ कृतायां, सर्वभरे च तस्मिन्विनिक्षिप्ते, किमन्यदस्ति कर्तव्यं कर्मास्य चेतनस्येति ॥

अद्यतनेषूपलभ्यमानाश्चैतादृशोपदेशपराः प्रबन्धाः द्राविडभाषामयचतुस्सहस्रगाथात्वेन सकलाम्नायसारार्थप्रतिपादका दृश्यन्ते । एतत्प्रबन्धप्रवक्तारः प्रपन्नजनप्रमुखाः पराङ्कुशपरकालभक्तनाथादयो दिव्यसूरयः । तेषु प्रपन्नजनकूटस्थेन पराङ्कुशेन शठकोपापरनाम्ना सामवेदसारछान्दोग्योपनिषत्तात्पर्यपर्यालोचनपरं व्यरचि "तिरुवाय्मोळि" नामकं नयनशून्येन्दुचन्द्रसंख्याकं अखण्डब्रह्माण्डगतसर्वभयामितसज्जनभागधेयभूतं अन्यूनानतिरिक्त स्वानुभवपरीवाहरूपं सरससरळसुमनोहरसन्दर्भसन्दब्धसुमधुरपदगुम्फगुम्फितं गाथासहस्रम् ॥

यदेतत्सोपबृंहणैर्वेदैर्निरूप्यपि तदेतदर्थपञ्चकं सोपस्करं

2 §

सुस्पष्टमभिधीयतेऽत्र । यदाह –

"प्राप्यस्य ब्रह्मणो रूपं प्राप्तुश्च प्रत्यगात्मनः ।
प्राप्त्युपायं फलं प्राप्तेस्तथा प्राप्तिविरोधि च ॥
वदन्ति सकला वेदास्सेतिहासपुराणकाः ।
मुनयश्च महात्मानो वेदवेदार्थवेदिनः ॥" इति ।

परमप्राप्यभूतस्य परस्य ब्रह्मणस्स्वरूपं, तादृशपरब्रह्मप्राप्तुर्जीवात्मनस्स्वरूपं, सिद्धोपायभूतस्यैव परस्य ब्रह्मणस्स्वप्राप्तौ साधनस्वरूपोपायस्वरूपं, देशविशेषावच्छिन्नभगवन्नित्यकैङ्कर्यस्य पुरुषार्थतां, पाप्मनां तत्प्राप्तिप्रतिबन्धकताञ्च प्रतिपादयन्ति सर्वे वेदाः । यथावद् ज्ञातुमशक्यतया चापौरुषेयगभीरतरश्रुतिमर्मणां वाल्मीकिपराशरप्रभृतयः पुराणेतिहासाभ्यामुपबृंहयांचक्रुस्सन्दिहानजनमनःकालुष्यनाशनाय तान् । उपबृंहणभूतास्स्मृतयश्च यत्र क्वचन स्खलन्ति निजवर्त्मनः कदाचित् । अत एव जैमिनीये स्मृतिप्रामाण्याधिकरणं प्रवृत्तं किल !

अतश्च भगवन्निर्हेतुककटाक्षसाक्षात्कृतपरावरनिखिलतत्त्वयाथात्म्यज्ञानानां वेदवेदार्थवेदिनां महात्मनां पराङ्कुशादीनां मुनीनां श्रीसूक्तय एवासंदिग्धं सुविशदमुपबृंहयन्ति समस्तं वेदजातम् । मुनयः मननशीलाः भगवद्गुणविग्रहादीनां मानसानुभवनिष्णाताः । महात्मानः " स महात्मा सुदुर्लभः " इत्युक्तज्ञानिनामग्रेसराः । वेदवेदार्थवेदिनः परिमितस्वतपोमाहात्म्यसाक्षात्कृत यत्किञ्चिदाम्नायशाखतां विना "अनन्ता वै वेदाः"

इत्युक्तानन्तशाखसकलवेदवेदांगानि समग्रतया वेदिनः इत्यर्थः। वेदार्थवेदिनः अहं "वेद्मि महात्मानं" इत्युक्तदिशा समग्रवेदप्रतिपाद्यस्य परस्य ब्रह्मणस्स्वरूपरूपगुणविभूत्यादिकान्साकल्येन सुस्पष्टं करबदरसदृक्षं तत्कृपयैव वेदिनः इत्यर्थः ॥

अथवा– मुनयश्चेति च शब्द एवकारार्थे। मुनय एव वदन्तीत्यर्थः। वेदेतिहासपुराणाद्याश्चैतादृशां मुनीनां वाक्यान्येवोपबृंहयन्तीति भावः। यदुक्तमापस्तम्बेन सर्वधर्मसमयज्ञेन "धर्मज्ञसमयः प्रमाणं वेदाश्च" इति। "रामो विग्रहवान् धर्मः" "कृष्णं धर्मं सनातनं" इत्युक्तसिद्धधर्मभूतं परं ब्रह्मप्रत्यक्षसमानाकारं जानन्तीति धर्मज्ञाः परांकुशादयः तेषां समय एव प्रमाणम्। तदनुसारिणो वेदाश्च प्रमाणं इति तदर्थात् ॥

अतश्चैतादृशानां परांकुशादीनां मुनीनामेव श्रीसूक्तयः प्रधानप्रमाणभूता इति ता एवोपाद्रियन्ते सर्वेऽपि ब्रह्मजिज्ञासवः॥

तत्र च समस्तदिव्यसूरीणामवयवित्वेन प्रख्यातस्य परांकुशमुनेः प्रबन्धेषु चतुर्षु प्रधानतमं गाथासहस्रम्। दुरूहभावगर्भितस्यास्य प्रबन्धस्य षट्सहस्रिकाप्रभृतीर्व्याख्याः व्यरचयन्सूरीचार्याः परंपरागतार्थप्रतिपादनपराः। तेषु च अन्वर्थग्रन्थसंख्यापरिमिता "षट्त्रिंशत्सहस्रिका"ख्या व्याख्या व्यरचि भगवद्विषयापरनाम्नी "वडक्कुत्तिरुवीधिप्पिळ्ळै" नाम्नाचार्यवर्येण ॥

बहुतरग्रन्थविस्तृतस्यास्य दुरवगाहतया श्रीमन्तः साहित्य रत्नादि सकलबिरुदाङ्किताः संस्कृतद्राविडोभयवेदान्तपारावारपारदर्शिनोऽस्मत्तातपादा आचार्यवर्याश्च श्रीबालधन्वि जग्गू वेङ्कटाचार्यस्वामिपादाः शास्त्रेऽस्मिन् प्रविविक्षूणामपि सुखग्रहणाय सुसूक्ष्मानपि समग्रानर्थानेतद्ग्रन्थगतान्, मूलगाथासहस्रगतानर्थांश्च सुविशदं पद्यप्रबन्धरूपेण न्यबध्नन् ॥

यथा च पराङ्कुशमुनिरनुभवपरीवाहे निमग्नः किमपि न वेद तथैव पद्यप्रबन्धमेनं पठन् प्रमृष्टस्वपरविवेको विगलितवेद्यान्तरः पराङ्कुशायत एवेति नापरोक्षं ग्रन्थमेनमनुसंदधताम् ॥

ग्रन्थोऽयमधीतभगवद्विषयाणां तत्तत्स्थलगतान्विषयान्संस्मारयन् शिक्षकपदवीमधिरूढ इव गुरुतरमुपकारमारचयति ॥

सरससरलसुमनोहरपद्यरचनानिपुणाश्चैते श्रीमन्तः नूत्नं वृत्तमेकं विरचय्य स्वप्रौढिमानं प्राकाशयन् । यथा— अनादेः कालान्मे दुरितचयमपनुद्योत्तरभवं" (श्लो· २२०) इति, तथा "शठारेस्संश्लेषो मम बहुसुकृतलब्धः पुनरयं" (श्लो· २२२) इति अतिधृत्यां छन्दसि नवीनं वृत्तं श्लोकद्वयेन प्राचीकशन् । वृत्तनाम तु न निर्दिदिशुः । तस्यैच्छिकत्वात् । यदि चाग्रहस्तर्हि निरूपयामः । "वृकक्रीडासास्याश्मननयनगुरुभ्यो रसमिदा" इति ॥

अपिच – श्रीमन्तः "कण्णिनुण्शिरुत्ताम्बु" नामकं श्रीशठकोपविषयकमेकादशपद्यात्मकं मधुरकविप्रबन्धं संस्कृतपद्या-

त्मना रचयामासुः । तत्र "दृढानेके"त्यादि नवमपद्यस्य तृतीयं पादं यावदेव पद्यानि षट्चत्वारिंशदुत्तराष्टशताधिकसहस्रसंख्याके शालिवाह शके (क्रि॰ श॰ 1924) विरचय्य विलिलिखुस्स्व-हस्ताक्षरैरेव । न त्ववशिष्टं सपादपद्यद्वयम् । तच्च न जानीमः किमर्थं नापूरयन्निति । न्यूनतामेतां परिहर्तुकामेन दासेना-नेन तत्सांक्तेयतानर्हमपि सपादपद्यद्वयं विरचितं संयोजितश्च ग्रन्थेन सहामुना । यदि सहृदयाः श्रीगीयुरेतेन तर्हि सफल-स्स्यान्मदुद्यमः ॥

किञ्च– गीर्वाणवाणीपरिचयविधुराणां समेषामुपयोगाय तत्प्रार्थनानुसारमेतेषां तात्पर्यसारं कर्णाटभाषया अनुभाषितुं प्रवृ-त्ताश्श्रीमन्तः दशानां शतानां सारानर्थाननूद्य तावतैव विरेमुः । तदेतदान्तमन्यूनानतिरेकं भाषानुवादमलिखं कृपयैव तेषां । यद्यस्याध्ययनेन संविदं विंदेयुस्तदा कृतकृत्योऽस्मि ॥

ग्रन्थप्रकटन साह्यकारिणामेवाशयमुररीकृत्य श्रीमद्भी रचितं "दिव्यप्रबन्धप्रामाण्यसमर्थन"मप्यनूद्य भाषया मूल-ग्रन्थेन साकं प्रकटचकरवम् । यद्यनेनोद्यमेनोपकृतास्सहृदया भवेयुस्तर्हि धन्यो मदन्यः क्व नु ?

परमं पदमधिरूढाश्च श्रीमन्तस्तातपादाः 'स स्वराड्भवती'ति श्रुत्या स्वाराज्यपदवीमनुभवन्तः स्वरूपाविर्भावसहकृतेन सार्वज्ञेन ग्रंथप्रकाशनमेनमनुमोदन्तः प्रसीदन्तु पुत्रस्य शिष्यस्य दास-स्यास्य चेतनस्येति मुहुर्मुहुस्तच्चरणकमलयोरभ्यर्थये ॥ श्रीमतां

जीवितचरितं च समये प्रकाशयामः ॥

श्रीमतां सकाशे ग्रंथमेनं वर्षत्रयात्प्रागधीतवन्तः प्रतिकृतौ परिदृश्यमानास्सर्वे स्वामिनः ग्रन्थमुद्रापणेन ग्रंथाध्ययनकृतज्ञतां श्रीमत्सु समर्प्य कृतकृत्या बभूवुरिति महदिदं सम्मोदस्थानम् ॥

ग्रन्थस्यास्य प्रकटने प्राधान्येन भारमुद्वहतां श्री उ. वे. केलमंगलं वेङ्कटाचार्यस्वामिनां श्री उ. वे. डेङ्कणीकोटे कडांबि श्रीनिवासैय्यंगार्यस्वामिनां, तथैवैतद्ग्रन्थकालक्षेपगोष्ठीनां च सविधे कृतज्ञतामर्पयामि ॥

ग्रन्थस्यास्य मूलपद्यानि कर्णाटलिप्यामपि मुद्रापयितुं प्रोत्साहितवतां तदर्थमेव साह्यकारिणाश्च उभयवेदान्तप्रवर्तनसभा सदस्यानां सविधे कृतज्ञतापुरस्सरं धन्यवादान् समर्पये ॥

तथैव प्रकटनसाह्यकारिणां सर्वेषां, मुद्रणालयाधिकारिणाश्च सविधे कृतज्ञतामर्पयन्परमपवित्रेऽस्मिन्नध्ययनमहोत्सवसमाप्ति-दिवसे ग्रंथमेनं प्रकटीकुर्वन्नमन्दमानन्दं विन्दन्नुद्यमादस्मा-द्विरमामि ॥

यादवाद्रिः, श्रीमतां बालधन्वि जग्गू वेङ्कटाचार्यस्वामिपादानां अध्ययनमहोत्सव- समाप्तिदिवसः, प्लवसंवत्सर अधिकज्येष्ठ शुक्ल तृतीया सौम्यवासरः, मृगशीर्षभं. १७–५–१९६१	इति विज्ञापयिता भागवतचरणनळिनपरिचरणचञ्चरीकः सहृदयवशंवदः **बालधन्वि जग्गू सुदर्शनाचार्यः** साहित्यवेदान्तविद्वान् प्रकाशकः

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಭೂಮಿಕೆ

ಇಡೀ ಪ್ರಪಂಚದಲ್ಲಿ ಹುಟ್ಟು, ಸಾವು, ಮುದಿತನ, ಜೀವನದಹಂಗು ಇವುಗಳಲ್ಲಿ ಸಿಕ್ಕಿ ತೊಳಲುತ್ತಾ, ಹಿಟ್ಟು ಬಟ್ಟೆಗಳಿಂದ ಮಾತ್ರ ತೃಪ್ತಿ ಹೊಂದುತ್ತಿರುವ ಎಲ್ಲಾ ಜೀವವರ್ಗಕ್ಕೂ ಈ ಲೋಕದ ಸಮಸ್ತವಸ್ತುಗಳಲ್ಲೂ ಆಶೆ ಹುಟ್ಟುವುದು ನ್ಯಾಯುವೇ ಹೌದು. ಆದರೆ— ಐಹಿಕ ವಿಷಯುಗಳಲ್ಲಿ ಜುಗುಪ್ಸೆ ತಾಳಿ, ಸಂಸಾರಭಯದಿಂದ ಪರಿತಪಿಸುತ್ತಾ ವೈರಾಗ್ಯದ ಗಣಿಗಳಾದ ಋಷಿಗಳು ಆಸೆ ಪಡುವುದು ಮಾತ್ರವಲ್ಲದೆ— ಅನುಭವಿಸಿದ ಹೊರತು ಆಗುವುದೇ ಇಲ್ಲವೆಂದು ತವಕಗೊಳ್ಳುವ ವಸ್ತುವೊಂದಿದೆಯೆಂದರೆ ಅದೀಗ ಬಹಳ ಆಶ್ಚರ್ಯವಾದ ಸಂಗತಿ. ಇವನ್ನೇ ಕಾಳಿದಾಸನ ಕುಮಾರಸಂಭವದಲ್ಲಿ ಇಂದ್ರನು ಕಾಮನನ್ನು ಕೊಂಡಾಡಿ "ವಜ್ರಂ ತಪೋ ವೀರ್ಯಮಹತ್ಸು ಕುಂಠಂ ತ್ವಂ ಸರ್ವತೋಗಾಮಿ ಚ ಸಾಧಕಂ ಚ" ಎಂದು ಸೂಚಿಸಿರುವನು.

ಆ ವಸ್ತುವೇ ಈ ಪ್ರಪಂಚದ ಸೃಷ್ಟಿಸ್ಥಿತಿಲಯುಗಳಿಗೆ ಕಾರಣವಾದ ಪರಬ್ರಹ್ಮ. ಇವನ್ನೇ ಸತ್, ಬ್ರಹ್ಮ, ಆತ್ಮ ಮುಂತಾದ ಸಾಮಾನ್ಯ ಶಬ್ದಗಳಿಂದ ಹೇಳಿ, 'ಏಕೋ ಹ ವೈ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನಃ" ಎಂದು ಮಹೋಪನಿಷತ್ತು 'ನಾರಾಯಣನೇ ಆ ಪರಬ್ರಹ್ಮ' ವೆಂದು ವಿಶೇಷ ಶಬ್ದದಿಂದ ನಿಷ್ಕರ್ಷಿಸಿದೆ.

ಇದೇ ಅರ್ಥವನ್ನೇ,

"ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ॥" ಎಂದು

ಸ್ಮೃತಿಯೂ ಹೇಳಿದೆ. — "ಶ್ರೋತವ್ಯೋ ಮಂತವ್ಯಃ" ಎಂಬ ಶ್ರುತಿಯಂತೆ ವೇದವಾಕ್ಯಗಳಿಂದಲೂ, ಮಥನ ಮಾಡಿದ ಎಲ್ಲಾ ಶಾಸ್ತ್ರಗಳಿಂದಲೂ ಪರಬ್ರಹ್ಮ ಸ್ವರೂಪವನ್ನು ಕೇಳಿ ತಿಳಿದು, ಶ್ರುತ್ಯನುಸಾರವಾದ ಯುಕ್ತಿಗಳಿಂದ ಅದನ್ನೇ ಮನನಮಾಡಿದರೆ— 'ನಾರಾಯಣನೊಬ್ಬನೇ ಧ್ಯೇಯು'

ನೆಂಬುದೇ ಈ ಶ್ಲೋಕದ ಅರ್ಥ.

ತಮ್ಮ ತಮ್ಮ ತಪೋಮಾಹಾತ್ಮ್ಯಕ್ಕೆ ಅನುಗುಣವಾಗಿ ತತ್ತ್ವಸಾಕ್ಷಾತ್ಕಾರ ಮಾಡಿರುವ ಋಷಿಗಳು ತಾವು ಪ್ರವರ್ತನೆ ಮಾಡಿದ ಶಾಸ್ತ್ರಗಳಲ್ಲಿ ಭಿನ್ನ ಭಿನ್ನವಾಗಿ ಪರಸ್ಪರ ವಿರುದ್ಧವಾಗಿ ತತ್ತ್ವಗಳನ್ನು ಹೇಳಿರುವರಾದಕಾರಣ, ಮೇಲಿನ ಶೀವರ್ಮಾನವು ಸಕಲಶಾಸ್ತ್ರ ನಿಷ್ಣಾತರಾಗಿ ಸೂಕ್ಷ್ಮಮತಿಗಳಾದ ಮಹಾಪಂಡಿತರಿಗೂ ಮನಸ್ಸಿನಲ್ಲಿ ನೆಲೆ ನಿಲ್ಲಲಾರದು.

ಇವನ್ನೇ— "ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನಕಾರಣಂ |
ಉಪದೇಶಾದ್ಧರಿಂ ಬುದ್ಧ್ವಾ ವಿರಮೇತ್ಸರ್ವ ಕರ್ಮಸು||" ಎಂದು ಹೇಳಿದೆ. ಶಾಸ್ತ್ರಗಳಿಂದ ಜ್ಞಾನಸಂಪಾದನೆ ಬಹಳ ಕ್ಲೇಶ ಸಾಧ್ಯ. ಬುದ್ಧಿಯೋ ಬಲು ಪಲ್ಲಟವಾದುದು. ಆದರಿಂದಲೇ ತತ್ತ್ವನಿರ್ಣಯವೂ ಪಲ್ಲಟವಾಗಿಯೇ ಉಳಿಯುವುದು.

ಆದ ಕಾರಣ ಉಪದೇಶದಿಂದ ಹರಿಯನ್ನು ತಿಳಿದು ಸುಮ್ಮನಾಗಬೇಕು. ಉಪದೇಶಕರು ಯಾರು ? ಭಗವಂತನ ನಿರ್ಹೇತುಕ ಕಟಾಕ್ಷದಿಂದ ನಿಜವಾದ ತತ್ತ್ವವನ್ನು ಅರಿತಿರುವ ನಮ್ಮಾಳ್ವಾರ್ ಮೊದಲಾದ ಆಳ್ವಾರರುಗಳು. ಉಪದೇಶವೋ ? ಅಪೌರುಷೇಯವಾದ ವೇದಗಳ ಸಾರಾರ್ಥಗಳನ್ನು ನಿರ್ಣಯಿಸಿ ಹೇಳತಕ್ಕ ಇವರ ದಿವ್ಯ ಪ್ರಬಂಧಗಳು.

"ಭಗವಂತನೇ ಸರ್ವಕಾರಣಕಾರಣನು. ಇವನಿಗೆ ಸ್ವರೂಪ, ದಿವ್ಯ ಮಂಗಳವಿಗ್ರಹ, ಗುಣಗಳು, ವಿಭೂತಿಗಳಿವೆ. ಇವನೇ ಉಪಾಯ ಮತ್ತು ಫಲ. ಸರ್ವಫಲಪ್ರದನೂ ಇವನೇ. ಇವನೇ ಸರ್ವಜ್ಞ, ಸರ್ವಶಕ್ತ, ಸರ್ವಸ್ವಾಮಿ, ಆಶ್ರಿತವತ್ಸಲ, ಸುಶೀಲ, ಸುಲಭ, ಮಹೋದಾರಿ ; ಇನ್ನೂ ಅನೇಕ ಕಲ್ಯಾಣಗುಣಗಳಿಗೆ ಗಣಿಯಾಗಿರುವವನು. ಇವನಿಗೆ ಹೇಯಸಂಬಂಧವಿಲ್ಲ. ಇವನೇ ಸರ್ವಸ್ವತಂತ್ರ. ಪುರುಷಕಾರ ಮಾಡತಕ್ಕ ಲಕ್ಷ್ಮೀದೇವಿಯು ಎಡೆ ಬಿಡದೆ ಇವನ ಎದೆಯಲ್ಲೇ ನೆಲೆಸಿರುವಳು. "ಸ ಮಹಾತ್ಮಾ ಸುದುರ್ಲಭಃ" "ಕ್ಷಣೇಪಿ ತೇ ಯದ್ವಿರಹೋಽತಿದುಸ್ಸಹಃ" ಎಂಬ ತನ್ನ ಮತ್ತು ಭಕ್ತರ ಮಾತಿನಂತೆ ಭಕ್ತ ಜನರ ವಿಶ್ಲೇಷವನ್ನು ಒಂದು ಕ್ಷಣವೂ ಸಹಿಸಲಾರ. ನಿರ್ಹೇತುಕವಾದ ತನ್ನ ಕೃಪೆಯಿಂದಲೇ ತಾನೇ ಕೃಷಿಮಾಡಿ ಅದ್ವೇಷ ಅಭಿಮುಖ್ಯಗಳಿಂದ ತೊಡಗಿ [illegible] ತಾನೇ ಕೊಟ್ಟು, ಅದರಿಂದ

ಸಂತುಷ್ಟನಾದ ಚೇತನನನ್ನು ತಾನು ಲಭಿಸುತ್ತಾನಲ್ಲವೆ? ಅದೇ ಪುರುಷಾರ್ಥ." ಇವೇ ಮೊದಲಾದ ಅರ್ಥಗಳು ಈ ಪ್ರಬಂಧಗಳಿಂದ ಸ್ಪಷ್ಟವಾಗಿ ತಿಳಿಯತಕ್ಕವು.

ಈ ಪ್ರಬಂಧಗಳನ್ನು ಓದಿದರೆ ಸಾಕು. ಅಂತಹವನು ತತ್ತ್ವನಿರ್ಣಯವನ್ನು ಮಾಡತಕ್ಕ ನ್ಯಾಯಾಧಿಪತಿಯಾಗಬಲ್ಲನು. ಮೇಲೆ ಹೇಳಿದ ತತ್ತ್ವ ನಿರ್ಣಯವನ್ನು ಈ ಉಪದೇಶಗಳಿಂದ ಅರಿತಮೇಲೆ ತತ್ತ್ವಜ್ಞಾನೋದಯಕ್ಕೆ ಮುಖ್ಯವಾದ ಮನಶ್ಶುದ್ಧಿಗೆ ಕಾರಣವಾದ ಕರ್ಮಾನುಷ್ಠಾನಗಳನ್ನೂ ಮತ್ತು— ಭಗವಂತನೇ ಪ್ರಾಪ್ಯನು. ಅವನನ್ನು ಲಭಿಸಲು ಅವನೇ ಉಪಾಯವೆಂದ ಮೇಲೆ ಅವನನ್ನೇ ಶರಣು (ಪ್ರಪತ್ತಿ) ಹೊಂದಬೇಕು. ಎಂಬ ನಿರ್ಣಯವನ್ನೂ ತಿಳಿದು, ಅವನನ್ನೇ ಶರಣ ಹೊಂದಿ ಅವನಲ್ಲೇ ತನ್ನ ಎಲ್ಲಾ ಭಾರವನ್ನೂ ಹೊರಿಸಿ ತಾನು ನಿರ್ಭರನಾಗಿ ನಿರ್ಭಯನಾದ ಮೇಲೆ ಇವನು ಮಾಡಬೇಕಾಗಿ ಉಳಿದಿರುವುದಾದರೂ ಏನು? ಎಂದು ತಾತ್ಪರ್ಯ.

ಈಗ ದೊರಕಿರುವ ಸಕಲ ವೇದ ಸಾರಾರ್ಥಪ್ರತಿಪಾದಕವಾಗಿ ಉಪದೇಶ ರೂಪವಾದ ಪ್ರಬಂಧಗಳು 4000 ಪದ್ಯಗಳಷ್ಟು ತಮಿಳು ಭಾಷೆಯಲ್ಲಿವೆ. ಪ್ರಪನ್ನ ಜನರಲ್ಲಿ ಮುಖ್ಯಸ್ಥರಾದ ನಮ್ಮಾಳ್ವಾರ್, ತಿರುಮಂಗೈಯಾಳ್ವಾರ್, ಪೆರಿಯಾಳ್ವಾರ್ ಮುಂತಾದ ಆಳ್ವಾರರುಗಳು ಈ ಪ್ರಬಂಧಗಳನ್ನು ಪಾಡಿದವರು. ಇವರಲ್ಲಿ ಪ್ರಪನ್ನಜನ ಕೂಟಸ್ಥರೆಂದೆನಿಸುವ ನಮ್ಮಾಳ್ವಾರರು ಸಾಮವೇದೋಪನಿಷತ್ತಾದ ಛಾಂದೋಗ್ಯದ ಸಾರವನ್ನು ಇಳಿಸಿ, "ತಿರುವಾಯ್ಮೊಳಿ" ಯೆಂಬ ಪ್ರಬಂಧವನ್ನು 1102 ಪದ್ಯಗಳಾಗಿ ರಚಿಸಿರುವರು. ಇದು ಸರಸವಾಗಿಯೂ ಸರಳವಾಗಿಯೂ ಮಧುರವಾಗಿಯೂ ಅನುಭವಪರೀವಾಹ ರೂಪವಾಗಿಯೂ, ಇದ್ದು ಈ ಅಖಂಡ ಬ್ರಹ್ಮಾಂಡದಲ್ಲಿರುವ ಸಂಸಾರ ಭಯಭೀತರಾದ ಜನಗಳಿಗೆ ಅದೃಷ್ಟವೇ ಎನ್ನುವಂತಿದೆ.

ಉಪಬೃಂಹಣಗಳಿಂದ ಕೂಡಿರುವ ವೇದಗಳು ಯಾವ ಅರ್ಥವನ್ನು ನಿರ್ಣಯಿಸುವುವೋ ಅದೇ ಅರ್ಥ ಪಂಚಕಗಳನ್ನು ಈ ಪ್ರಬಂಧಗಳು ಸಾಂಗವಾಗಿ, ಸ್ಪಷ್ಟವಾಗಿ ತಿಳಿಸುವುವು. ಇದನ್ನೇ ಸಂಹಿತೆಗಳೂ,

"ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂ ಪ್ರಾಪ್ತೇಸ್ತಥಾ ಪ್ರಾಪ್ತಿವಿರೋಧಿ ಚ ॥

ವದಂತಿ ಸಕಲಾ ವೇದಾಸ್ಸೇತಿಹಾಸಪುರಾಣಕಾಃ ।
ಮುನಯಶ್ಚ ಮಹಾತ್ಮಾನೋ ವೇದವೇದಾರ್ಥವೇದಿನಃ ॥" ಎಂದು ತಿಳಿಸುತ್ತವೆ. ಪರಮಪ್ರಾಪ್ಯನಾದ ಭಗವಂತನ ಸ್ವರೂಪ, ಆ ಪರಬ್ರಹ್ಮವನ್ನು ಸೇರತಕ್ಕ ಜೀವಾತ್ಮನ ಸ್ವರೂಪ, ಭಗವಂತನನ್ನು ಪಡೆಯಲು ಅವನೇ ಉಪಾಯವೆಂಬ ಉಪಾಯ ಸ್ವರೂಪ, ಸ್ಥಾನವಿಶೇಷವಾದ ಮೋಕ್ಷಕ್ಕೆ ಹೋಗಿ ಅಲ್ಲಿ ಭಗವಂತನ ನಿತ್ಯ ಕೈಂಕರ್ಯ ಮಾಡುವುದೇ ಫಲವೆಂಬ ಪುರುಷಾರ್ಥ ಸ್ವರೂಪ, ಭಗವಂತನ ಪ್ರಾಪ್ತಿಗೆ ಪಾಪಗಳು ಪ್ರತಿಬಂಧಕಗಳೆಂಬ ವಿರೋಧಿ ಸ್ವರೂಪ ಇವುಗಳನ್ನು ವೇದಗಳು ತಿಳಿಸುತ್ತವೆ. ಅಪೌರುಷೇಯವಾಗಿಯೂ ಗಂಭೀರ ವಾಗಿಯೂ ಇರುವ ಶ್ರುತಿಗಳ ಮರ್ಮವನ್ನು ಯಥಾವಸ್ಥಿತವಾಗಿ ತಿಳಿಯಲಾ ಗದಿರುವುದರಿಂದ ವಾಲ್ಮೀಕಿ, ಪರಾಶರ ಮುಂತಾದ ಋಷಿಗಳು ಇತಿಹಾಸ ಪುರಾಣಗಳನ್ನು ರಚಿಸಿ ಸಂದೇಹ ಬಾರದಂತೆ ಆ ವೇದಗಳನ್ನು ಉಪಬೃಂಹಣ ಮಾಡಿದರು. (ಪುಷ್ಟೀಕರಿಸಿದರು.)

ಉಪಬೃಂಹಣಗಳಾದ ಸ್ಮೃತಿಗಳೂ ಒಂದೊಂದು ಸಲ ತಮ್ಮ ದಾರಿ ಯಿಂದ ಜಾರುವುವು. ಆದ ಕಾರಣವೇ ಪೂರ್ವ ಮೀಮಾಂಸೆಯಲ್ಲಿ ಸ್ಮೃತಿ ಪ್ರಾಮಾಣ್ಯಾಧಿಕರಣವು ಹೊರಟಿದೆಯಲ್ಲವೆ?

ಆದ ಕಾರಣ ಭಗವಂತನ ನಿರ್ಹೇತುಕ ಕೃಪಾಕಟಾಕ್ಷದಿಂದ ತತ್ತ್ವಗಳ ನ್ನು ಯಥಾವಸ್ಥಿತವಾಗಿ ಅರಿತೂ ಸಾಕ್ಷಾತ್ಕರಿಸಿಯೂ ಮತ್ತು ವೇದ ವೇದಾ ರ್ಥಗಳನ್ನು ಚೆನ್ನಾಗಿ ತಿಳಿದೂ ಇರುವ ಮಹಾತ್ಮರಾದ ನಮ್ಮಾಳ್ವಾರ್ ಮೊದ ಲಾದ ಮುನಿಶ್ರೇಷ್ಠರ ಶ್ರೀಸೂಕ್ತಿಗಳು ನಿಸ್ಸಂಶಯವಾಗಿಯೂ ಸ್ಪಷ್ಟವಾಗಿ ಯೂ ವೇದರಾಶಿಯನ್ನೇ ಉಪಬೃಂಹಣ ಮಾಡುವುವು. 'ಮುನಿ' ಗಳೆಂದರೆ ಮನನ ಶೀಲರು. ಭಗವಂತನ ಗುಣವಿಗ್ರಹಾದಿಗಳ ಮಾನಸಾನುಭವದಲ್ಲಿ ತಲ್ಲೀನರಾದವರು ಎಂದರ್ಥ. 'ಮಹಾತ್ಮ'ರೆಂದರೆ "ಸ ಮಹಾತ್ಮಾ ಸುದು-ರ್ಲಭಃ" ಎಂಬ ಗೀತಾವಚನದಂತೆ ಜ್ಞಾನಿಗಳಲ್ಲಿ ಅಗ್ರೇಸರರೆಂದರ್ಥ.

ವೇದಗಳನ್ನು ತಿಳಿದವರು— ಋಷಿಗಳು ತಮ್ಮ ತಪೋಮಾಹಾತ್ಮ್ಯ ದಿಂದ ಒಂದೊಂದು ಶಾಖೆಯನ್ನು ಮಾತ್ರ ತಿಳಿದಿರುವರು. ಇವರುಗಳು ಭಗ ವಂತನ ನಿರ್ಹೇತುಕಕೃಪೆಯಿಂದಲೇ "ಅನಂತಾ ವೈ ವೇದಾಃ" ಎಂಬ ಅನಂತ ವಾದ ವೇದಶಾಖೆಗಳನ್ನೆಲ್ಲಾ ಪೂರ್ತಿಯಾಗಿ ತಿಳಿದಿರುವರು. ವೇದಾರ್ಥಗಳ

ನ್ನು ತಿಳಿದವರೆಂದರೆ — ಸಮಗ್ರವೇದಗಳಲ್ಲೂ ಪ್ರತಿಪಾದ್ಯನಾದ ಪರಬ್ರಹ್ಮನ ಸ್ವರೂಪಾದಿಗಳನ್ನು ಸ್ಪಷ್ಟವಾಗಿ ಅಂಗೈಲಿರುವ ಎಲಚಿ ಹಣ್ಣಿನಂತೆ ಕಣ್ಣೆದುರಿಗೇ ಕಂಡವರೆಂದರ್ಥ.

"ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ" ಎಂದು ಆಪಸ್ತಂಬ ಋಷಿಗಳು ಅಪ್ಪಣೆ ಕೊಡಿಸಿರುವರು! "ರಾಮೋ ವಿಗ್ರಹವಾನ್ ಧರ್ಮಃ" "ಕೃಷ್ಣಂ ಧರ್ಮಂ" ಎಂಬ ಸಿದ್ಧಧರ್ಮವಾದ ಪರಬ್ರಹ್ಮವನ್ನು ಕಣ್ಣಿನಿಂದ ನೋಡಿದಂತೆ ತಿಳಿದಿರುವವರು ಧರ್ಮಜ್ಞರು. ನಮ್ಮಾಳ್ವಾರ್ ಮೊದಲಾದ ವರು ಅಂತಹವರು.

ಆದಕಾರಣ ನಮ್ಮಾಳ್ವಾರ್ ಮೊದಲಾದವರಂತಹ ಮುನಿಗಳ ಶ್ರೀಸೂಕ್ತಿಗಳು ಪ್ರಧಾನ ಪ್ರಮಾಣವಾದುದರಿಂದ ಬ್ರಹ್ಮಜಿಜ್ಞಾಸುಗಳೆಲ್ಲರೂ ಅವುಗಳನ್ನೇ ಆದರಿಸಿರುವರು.

ಈ ಆಳ್ವಾರರುಗಳಲ್ಲಿ ಮುಖ್ಯರೆಂದು ಹೇಳಲ್ಪಡುವ ನಮ್ಮಾಳ್ವಾರರ ನಾಲ್ಕು ಪ್ರಬಂಧಗಳಲ್ಲಿ "ತಿರುವಾಯ್ಮೊಳಿ" ಮುಖ್ಯವಾದುದು. ಇದರ ಭಾವ ವನ್ನೇ ಅರಿಯಲಾಗದಿರುವುದರಿಂದ ಪೂರ್ವಾಚಾರ್ಯರು ಸಾಂಪ್ರದಾಯಿಕ ವಾದ ಅರ್ಥಗಳನ್ನು ನಿರೂಪಿಸುತ್ತಾ, "ಆರಾಯಿರಪ್ಪಡಿ" ಮುಂತಾದ ಅನೇಕ ವ್ಯಾಖ್ಯಾನಗಳನ್ನು ರಚಿಸಿದರು. ಅವುಗಳಲ್ಲಿ "ಭಗವದ್ವಿಷಯ"ವೆಂಬ ಮೂವ ತ್ತಾರುಸಾವಿರ ಗ್ರಂಥಸಂಖ್ಯೆಯುಳ್ಳ ವ್ಯಾಖ್ಯಾನವನ್ನು "ವಡಕ್ಕುತ್ತಿರುವೀಧಿ ಪ್ಪಿಳ್ಳೈ" "ಶ್ರೀಕೃಷ್ಣಪಾದ"ರೆಂಬ ಆಚಾರ್ಯರು ರಚಿಸಿರುವರು.

ಬಹುವಿಸ್ತಾರವಾದ ಈ ಗ್ರಂಥವನ್ನು ಅಧ್ಯಯನಮಾಡುವುದೇ ಅಸಾಧ್ಯ ವಾಗಿರುವಾಗ ಅಲ್ಲಲ್ಲಿ ಅಡಗಿರುವ ಸೂಕ್ಷ್ಮಾರ್ಥಗಳನ್ನು ತಿಳಿಯಲು ಸಾಧ್ಯ ವಾದೀತೇ? ಆದಕಾರಣ ಶ್ರೀಮದಿತ್ಯಾದಿಗಳಾದ ಸಾಹಿತ್ಯರತ್ನಂ ಶಾಸ್ತ್ರಕವಿ ರತ್ನಂ ಮೊದಲಾದ ಸಮಸ್ತ ಬಿರುದಾಂಕಿತರಾದ ಸಂಸ್ಕೃತದ್ರಾವಿಡೋಭಯ ವೇದಾಂತಪಾರಂಗತರಾದ ನಮಗೆ ಪೂಜ್ಯತಂದೆಯವರೂ ಆಚಾರ್ಯರೂ ಆಗಿ ರುವ ಶ್ರೀಬಾಲಧನ್ವಿ (ಇಳೈಯವಿಲ್ಲಿ) ಜಗ್ಗೂ ವೆಂಕಟಾಚಾರ್ಯಸ್ವಾಮಿಗಳವರು ಈ ದ್ರಾವಿಡವೇದಾಂತ ಶಾಸ್ತ್ರದಲ್ಲಿ ಪ್ರವೇಶಿಸಲಿಚ್ಛೆಯಿರುವವರಿಗೂ ಕೂಡ ಸುಖವಾಗಿ ತಿಳಿಯುವಂತೆ ಈ ಗ್ರಂಥದಲ್ಲಿಯ ಅತ್ಯಂತ ಸೂಕ್ಷ್ಮವಾದ ರಹ ಸ್ಯಾರ್ಥಗಳೆಲ್ಲವನ್ನೂ, ಮತ್ತು ಮೂಲತಿರುವಾಯ್ಮೊಳಿಯ ಅರ್ಥಗಳನ್ನೂ

ಸ್ಪಷ್ಟವಾಗಿ ತಿಳಿಯುವಂತೆ ಪದ್ಯಪ್ರಬಂಧವನ್ನಾಗಿ ರಚಿಸಿದರು. ಅದೇ ಈ "ದ್ರಮಿಡೋಪನಿಷತ್ಸಾರಸಂಗ್ರಹ".

ಅನುಭವಪ್ರವಾಹದಲ್ಲಿ ಮುಳುಗಿರುವ ನಮ್ಮಾಳ್ವಾರರು ಹೇಗೆ ಮತ್ತೇನನ್ನೂ ಅರಿಯರೋ— ಹಾಗೆಯೇ ಈ ಗ್ರಂಥವನ್ನು ಓದುತ್ತಿದ್ದರೆ — ತಾನು ಮತ್ತೊಬ್ಬನೆಂಬ ಭೇದವನ್ನೇ ಅರಿಯದೆ ನಮ್ಮಾಳ್ವಾರರಂತೆಯೇ ಆಗುವನು. ಭಗವದ್ವಿಷಯವನ್ನು ಓದಿರುವವರಿಗೆ ಈ ಗ್ರಂಥವು ಉಪಾಧ್ಯಾಯರಂತೆ ಅಲ್ಲಲ್ಲಿರುವ ವಿಷಯಗಳನ್ನು ಜ್ಞಾಪಕಕ್ಕೆ ತಂದು ಕೊಡುತ್ತಾ, ಬಹಳ ಹೆಚ್ಚಿನ ಉಪಕಾರ ಮಾಡುತ್ತದೆ.

ಸರಸ ಸರಳ ಪದ್ಯರಚನಾನಿಪುಣರಾದ ಶ್ರೀಮದಿತ್ಯಾದಿಗಳವರು 220, 222 ಈ ಎರಡು ಶ್ಲೋಕಗಳಲ್ಲಿ ಅತಿಧೃತಿಛಂದಸ್ಸಿನ ಹೊಸದಾದ ವೃತ್ತವೊಂದನ್ನು ರಚಿಸಿ ತಮ್ಮ ಪ್ರೌಢಿಮೆಯನ್ನೂ ಪ್ರಾವೀಣ್ಯವನ್ನೂ ತೋರಿರುವರು. ವೃತ್ತದ ಹೆಸರನ್ನು ಮಾತ್ರ ಐಚ್ಛಿಕವಾದ ಕಾರಣ ನಮೂದಿಸಲಿಲ್ಲ. ಹೇಳಿಯೇ ತೀರಬೇಕೆಂಬ ಹಠವಿರುವ ಪಕ್ಷಕ್ಕೆ— "ವೃಕಕ್ರೀಡಾ ಸಾ ಸ್ಯಾದ್ಯಮನನಯನ ಗುರುಭ್ಯೋರಸಭಿದಾ" ಎಂದು ಅದರ ಲಕ್ಷಣವನ್ನೂ ಹೆಸರನ್ನೂ ನಾನು ತಿಳಿಸುವೆನು.

ಮತ್ತು ಶ್ರೀಯುವರು "ಕಣ್ಣಿನುಣ್ ಶಿರುತ್ತಾಂಬು" ಎಂಬ ನಮ್ಮಾಳ್ವಾರ್ ವಿಷಯಕವಾದ ಹನ್ನೊಂದು ಪದ್ಯದ ಮಧುರಕವಿಯಾಳ್ವಾರರ ಪ್ರಬಂಧವನ್ನು ಸಂಸ್ಕೃತಪದ್ಯಗಳಾಗಿ ರಚಿಸಿರುವರು. ಅದರಲ್ಲಿ "ದೃಢಾನೇಕ" ಎಂಬ ಒಂಭತ್ತನೇ ಶ್ಲೋಕ ಮೂರನೇ ಪಾದದವರೆಗೆ ಮಾತ್ರ ರಚಿಸಿ ಕ್ರಿ. ಶ. 1924 ರಲ್ಲೇ ಬರೆದಿಟ್ಟಿರುವರು. ಮಿಕ್ಕ ಎರಡೂಕಾಲು ಶ್ಲೋಕಗಳನ್ನು ಮಾತ್ರ ರಚಿಸಿ ಬರೆದಿಲ್ಲ. ಕಾರಣವೇನೋ ತಿಳಿಯೆವು. ಈ ನ್ಯೂನತೆಯನ್ನು ಪರಿಹರಿಸಲು ದಾಸನಾದ ನಾನು ಅವುಗಳ ಜೊತೆಗೆ ಸೇರಿಸಲು ಯೋಗ್ಯವಾಗಿಲ್ಲದಿದ್ದರೂ, ಆ ಎರಡೂಕಾಲು ಶ್ಲೋಕಗಳನ್ನು ರಚಿಸಿ ಇದರ ಜೊತೆಗೆ ಸೇರಿಸಿರುವೆನು. ಸಹೃದಯರು ಸಂತೋಷಗೊಳ್ಳುವರಾದರೆ ನನ್ನ ಪ್ರಯತ್ನ ಸಫಲವಾದೀತು.

ಸಂಸ್ಕೃತ ಭಾಷೆಯ ಪರಿಚಯವಿಲ್ಲದವರು ಇದರಿಂದ ಪ್ರಯೋಜನ ಪಡೆಯಲು ಕನ್ನಡದಲ್ಲಿ ಅನುವಾದ ಮಾಡಬೇಕೆಂದು ಕೆಲವರು ಪ್ರಾರ್ಥಿಸಿದಂತೆ ಶ್ರೀಯುವರು ಹತ್ತು ಶತಕಗಳ ಸಾರಾಂಶವನ್ನು ಮಾತ್ರ ಅನುವದಿಸಿ ನಿಲ್ಲಿಸಿದ್ದ

ರು. ಇದನ್ನು ಅನ್ಯೂನಾನತಿರಿಕ್ತವಾಗಿ ಕೊನೆಯವರೆಗೂ ಎಲ್ಲವನ್ನೂ ಅವರ ಕೃಪೆಯಿಂದಲೇ ದಾಸನು ಅನುವದಿಸಿರುವನು. ಇದನ್ನು ಓದಿ ಜ್ಞಾನಲಾಭ ಪಡೆಯುವುದಾದರೆ ಕೃತಕೃತ್ಯನಾಗುವೆನು.

ಈ ಗ್ರಂಥಪ್ರಕಟನಕ್ಕೆ ಸಹಾಯಮಾಡಿದ ಮಹನೀಯರ ಅಭಿಪ್ರಾಯದಂತೆ ಶ್ರೀಯವರು ರಚಿಸಿರುವ "ದಿವ್ಯಪ್ರಬಂಧಪ್ರಾಮಾಣ್ಯಸಮರ್ಥನಂ" ಎಂಬ ಗ್ರಂಥವನ್ನೂ ಅನುವದಿಸಿ ಮೂಲದೊಡನೆ ಪ್ರಕಟಿಸಿರುವೆನು. ಈ ಪ್ರಯತ್ನದಿಂದ ಸಹೃದಯರಿಗೆ ಉಪಕಾರವಾಗುವುದಾದರೆ ನನಗಿಂತಲೂ ಧನ್ಯನಾರು !

"ಸ ಸ್ವರಾಡ್ಭವತಿ" ಎಂಬ ಶ್ರುತಿಯಂತೆ ಪರಮಪದವನ್ನೇರಿ ಸ್ವಾರಾಜ್ಯ ಪದವಿಯನ್ನನುಭವಿಸುತ್ತಿರುವ ನಮ್ಮ ಪೂಜ್ಯ ತಂದೆಯವರು ಸ್ವರೂಪಾವಿರ್ಭಾವದೊಡನೆಯೇ ಸೇರಿಕೊಂಡಿರುವ ಸರ್ವಜ್ಞತ್ವದಿಂದ ಈ ಗ್ರಂಥಪ್ರಕಾಶನವನ್ನು ಅನುಮೋದಿಸಿ ಆನಂದಿಸಿ ಪುತ್ರನೂ ಶಿಷ್ಯನೂ ದಾಸನೂ ಆದ ಈ ಚೇತನನ ಮೇಲೆ ದಯೆ ಗೈಯಲಿ. ಇದೊಂದೇ ಅವರಡಿದಾವರೆಗಳಲ್ಲಿ ಪ್ರಾರ್ಥನೆ.

ಶ್ರೀಯುತರ ಸನ್ನಿಧಾನದಲ್ಲಿ ಮೂರುವರ್ಷಗಳ ಕೆಳಗೆ ಈ ಗ್ರಂಥವನ್ನು ಕಾಲಕ್ಷೇಪ ಮಾಡಿದ ಈ ಫೋಟೋದೊಳಗಿರುವ ಸ್ವಾಮಿಗಳೆಲ್ಲರೂ ಸೇರಿ ಶ್ರೀಯವರಲ್ಲಿ ತಮ್ಮ ಕೃತಜ್ಞತೆಯನ್ನು ತೋರಿಸಲು, ಈ ಗ್ರಂಥವನ್ನು ಮುದ್ರಿಸಲು ಸಹಾಯಮಾಡಿ ಕೃತಕೃತ್ಯರಾದುದು ಬಹಳ ಸಂತೋಷದ ಸಂಗತಿ. ಶ್ರೀಯುತರ ಜೀವನ ಚರಿತೆಯನ್ನು ಸಮಯದಲ್ಲಿ ಪ್ರಕಾಶಪಡಿಸುತ್ತೇವೆ.

ಈ ಗ್ರಂಥಪ್ರಕಾಶನಕ್ಕೆ ಪ್ರಧಾನವಾಗಿ ನಿಂತು ಹೊರೆಹೊತ್ತಿರುವ ಶ್ರೀ ಉ|| ವೇ|| ಕೆಲಮಂಗಲಂ ವೆಂಕಟಾಚಾರ್ಯಸ್ವಾಮಿಗಳವರ ಮತ್ತು ಶ್ರೀ ಉ|| ವೇ|| ಡೆಂಕಣೀಕೋಟೆ ಕಡಾಂಬಿ ಶ್ರೀನಿವಾಸೈಯ್ಯಂಗಾರ್ಯಸ್ವಾಮಿಗಳವರ ಮತ್ತು ಕಾಲಕ್ಷೇಪ ಗೋಷ್ಠೀಸ್ವಾಮಿಗಳವರ ಸನ್ನಿಧಾನದಲ್ಲಿ ನನ್ನ ಅಪಾರವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈ ಗ್ರಂಥದ ಮೂಲಶ್ಲೋಕಗಳನ್ನು ಕನ್ನಡಲಿಪಿಯಲ್ಲಿಯೂ ಮುದ್ರಿಸಬೇಕೆಂದು ಪ್ರೋತ್ಸಾಹಿಸಿ ಸಹಾಯ ಮಾಡಿದ ಶ್ರೀಮದುಭಯವೇದಾಂತ ಪ್ರವರ್ತನ ಸಭಾ ಸದಸ್ಯವರ್ಗದಲ್ಲಿ ಕೃತಜ್ಞತಾ ಪೂರ್ವಕವಾದ ಧನ್ಯವಾದಗಳನ್ನರ್ಪಿಸುತ್ತೇನೆ.

§

ಈ ಗ್ರಂಥಪ್ರಕಾಶನಕ್ಕೆ ಸಹಾಯಕರಾದ ಇತರ ಮಹನೀಯರೆಲ್ಲರಿಗೂ ಮತ್ತು ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಸಾಮ್ರಾಜ್ಯಂ ಮುದ್ರಣಾಲಯಾಧಿಕಾರಿಗಳಿಗೂ ನನ್ನ ಕೃತಜ್ಞತೆಯನ್ನರ್ಪಿಸುತ್ತಾ, ಪರಮಪವಿತ್ರವಾದ ಈ ಅಧ್ಯಯನಮಹೋತ್ಸವ ಸಮಾಪ್ತಿದಿವಸದಲ್ಲಿ ಈ ಗ್ರಂಥವನ್ನು ಪ್ರಕಟಿಸುತ್ತಾ ಅಮಂದಾನಂದದೊಡನೆ ಈ ಮಾತು ಮುಗಿಸುವೆನು.

ಯಾದವಾದ್ರಿ:
ಶ್ರೀಮದಿತ್ಯಾದಿಗಳಾದಸಾಹಿತ್ಯರತ್ನಂ
ಬಾಲಧನ್ವಿ (ಇಳೈಯವಿಲ್ಲಿ) ಜಗ್ಗೂ
ವೆಂಕಟಾಚಾರ್ಯಸ್ವಾಮಿಗಳವರ
ಅಧ್ಯಯನ ಮಹೋತ್ಸವ ಸಮಾಪ್ತಿ
ದಿವಸ- ಶ್ರೀಪ್ಲವಸಂವತ್ಸರದ
ಅಧಿಕಜ್ಯೇಷ್ಠ ಶುಕ್ಲ ತೃತೀಯಾ
ಬುಧವಾರ ಮೃಗಶಿರಾನಕ್ಷತ್ರ
17-5-1961

ಇಂತು ಭಾಗವತ ಪಾದಸೇವಕ,
ಸಹೃದಯ ವಿಧೇಯ,
ಬಾಲಧನ್ವಿ (ಇಳೈಯವಿಲ್ಲಿ)
ಜಗ್ಗೂ ಸುದರ್ಶನಾಚಾರ್ಯ
ಸಾಹಿತ್ಯ ವೇದಾಂತ ವಿದ್ವಾನ್
ಗ್ರಂಥ ಪ್ರಕಾಶಕ

श्रीः

तिरुनारायणपुरम्
२६–४–१९६१

श्रीमते रामानुजाय नमः

सांख्यतीर्थाः, साहित्यालङ्कार-सांख्ययोग-वेदान्तविद्वांसः, साहित्यरत्नं, शास्त्रकविरत्नं, इत्यादिबिरुदावलिभूषिताः, कीर्तिशेषाः, श्रीमन्तः, बालधन्वि-जग्गु वेङ्कटाचार्यस्वामिनः, प्रपन्नकुलकूटस्थेन परांकुशमुनिना भगवन्निर्हेतुककृपाकटाक्षपात्रेणानुगृहीतायाः तिरुवाय्मोळिनाम्न्याः द्राविड़भाषामयसहस्रगीतेर्व्याख्यायां षट्त्रिंशत्सहस्रिकाख्यायां श्रीकृष्णपादसूरिभिरनुगृहीतायां भगवद्विषयापरनाम्न्यां प्रतिपाद्यमानान् सूक्ष्मान्समग्रान् विषयान् मूलभूतायास्सहस्रगीतेस्तात्पर्यार्थान्सारतमानपि क्रोडीकृत्य सुखग्रहणाय गीर्वाणवाण्या श्लोकरूपेण सरलसुमनोहरं प्रबन्धमातेनुः ॥

तत्पुत्रश्चायुष्मान् श्रीमांश्च बालधन्वि जग्गु सुदर्शनाचार्यः तत्सकाशादेवाधीत - साहित्यवेदान्त - भगवद्विषय - रहस्यग्रन्थादिकः कर्णाटभाषया भावार्थमनूद्य ग्रन्थमेनं मुद्राप्य प्रकटयिष्यत्यचिरेणैवेति महान्प्रमोदः ॥

"उपेयुषामपि दिवं सन्निबन्धविधायिनां ।
आस्त एव निरातंकं कान्तं काव्यमयं वपुः ॥"

इत्युक्तरीत्या काव्यमयकान्तवपुषा विश्वव्यापकानां महानुभावानां तेषां कीर्तिः ग्रन्थस्यास्य प्रकटनेन दिगन्तव्यापिनी भूयादित्याशास्महे ॥

श्रीयदुगिरियतिराजमठः
यादवाद्रिः (मेल्कोटे)

श्रीयतिराजः

श्रीः

॥श्रीमद्द्रमिडोपनिषत्तात्पर्यसंग्रहग्रन्थमुद्रणसाह्यकारिणां नामानि॥

ಈ ಗ್ರಂಥ ಮುದ್ರಣಕ್ಕೆ ಸಹಾಯ ಮಾಡಿದ ಮಹನೀಯರು

* * * *
* * *

१) श्रीमान् पं० दीक्षितजीमहाराजमहोदयाः, मुम्बई.

२) श्रीमान् पं० रामनारायणाचारी वेदान्ती, बिहार.

३) श्रीमती सारगोण्ड माणिक्यम्माळ्, हैदराबाद.

4) ಶ್ರೀ ಉಭಯ ವೇದಾಂತ ಪ್ರವರ್ತನಸಭಾ, ಬೆಂಗಳೂರು.

5) ಶ್ರೀ ಉ. ವೇ. ಮರದೂರು ಕೆ. ವೆಂಕಟಾಚಾರ್ಯರು

6) ಶ್ರೀ ಉ. ವೇ. ಕಡಾಂಬಿ ಶ್ರೀನಿವಾಸೈಯ್ಯಂಗಾರ್ಯರು, ಡೆಂಕಣೀಕೋಟೆ

7) ಶ್ರೀ ಉ. ವೇ. ಕೆ. ನಾರಾಯಣಸ್ವಾಮಯ್ಯಂಗಾರ್ಯರು, ಅಡ್ವೋಕೇಟ್
ಹೊಸೂರು

8) ಶ್ರೀ ಉ. ವೇ. ಆಯಿ. ಅಳಶಿಂಗಾಚಾರ್ಯರು, ಪ್ರೊಪ್ರೈಟರ್,
ನರಸಿಂಹ ಟ್ರಾನ್ಸ್‌ಪೋರ್ಟ್ಸ್, ಡೆಂಕಣೀಕೋಟೆ

9) ಶ್ರೀ ಉ ವೇ. ಎ ನಾರಾಯಣೈಯ್ಯಂಗಾರ್ಯರು ಜಮೀನ್ದಾರ್
ಆನೆಕಲ್

10) ಶ್ರೀ ಉ. ವೇ. ಎ. ಸೀತಾರಾಮಯ್ಯಂಗಾರ್ಯರು, ಹೆಡ್‌ಮಾಸ್ಟರ್
ವಣಕನಹಳ್ಳಿ

11) ಶ್ರೀ ಉ. ವೇ. ಎನ್. ರಾಮಾನುಜೈಯ್ಯಂಗಾರ್ಯರು,
ಮಿಲಿಟರಿ ಪೆನ್ಷನರ್, ಆನೆಕಲ್

12) ಶ್ರೀ ಉ. ವೇ. ಮರದೂರು ಕೆ. ವಿ. ಕೃಷ್ಣಸ್ವಾಮಿ, ಕೆಲಮಂಗಲಂ

13) ಶ್ರೀ ಉ. ವೇ. ಆರ್. ರಮೇಶೈಯ್ಯಂಗಾರ್ಯರು, ಸ್ಕೂಲ್ ಇನ್ಸ್‌ಪೆಕ್ಟರು
ನಾಗಮಂಗಲ

14) ಶ್ರೀ ಉ. ವೇ. ಹೆಚ್. ವೆಂಕಟಾಚಾರ್ಯರು, ಅರ್ಚಕರು, ಹೊಸೂರು
15) ಶ್ರೀ ಉ. ವೇ. ಟಿ. ಆರ್. ಶೇಷಾದ್ರ್ಯಯ್ಯಂಗಾರ್ಯರು, ಕರ್ಣಂ. ಯು. ಹೊಸಳ್ಳಿ
16) ಶ್ರೀ ಉ. ವೇ. ರಂಗೈಯ್ಯಂಗಾರ್ಯರು, ರಿ|| ಮಾಸ್ಟರ್ ಡೆಂಕಣೀಕೋಟೆ
17) ಶ್ರೀ ಉ. ವೇ. ಆಯಿ. ವೆಂಕಟಾಚಾರ್ಯರು. ಜಮೀನ್ದಾರ್ ಡೆಂಕಣೀಕೋಟೆ
18) ಶ್ರೀ ಉ. ವೇ. ಸಿ. ಶಾಮಾಚಾರ್ಯರು, ರಿ|| ಹೆಡ್‌ಮಾಸ್ಟರ್ ಆನೆಕಲ್
19) ಶ್ರೀ ಉ. ವೇ. ಎ. ವಿ. ಶ್ರೀನಿವಾಸಾಚಾರ್ಯರು. ಜಮೀನ್ದಾರ್ ಆನೆಕಲ್
20) ಶ್ರೀ ಉ. ವೇ. ಕೆ. ರಾಮಸ್ವಾಮಯ್ಯಂಗಾರ್ಯರು, ಜಮೀನ್ದಾರ್ ಆನೆಕಲ್
21) ಶ್ರೀ ಉ. ವೇ. ಶ್ರೀನಿವಾಸಭಟ್ಟರು, ಅರ್ಚಕರು ಆನೆಕಲ್
22) ಶ್ರೀ ಉ. ವೇ. ಸಿ. ರಾಜಗೋಪಾಲಾಚಾರ್ಯರು. ಕೃಷ್ಣಬೇಕ್ರಿ ಆನೆಕಲ್
23) ಶ್ರೀ ಉ. ವೇ. ಎಸ್. ತಿರುಮಲಾಚಾರ್ಯರು, ಮಾತಗೊಂಡಪಳ್ಳಿ
24) ಶ್ರೀ ಉ. ವೇ. ಪಿ. ಬಿ. ಶ್ರೀನಿವಾಸೈಯ್ಯಂಗಾರ್ಯರು ಹೆಡ್‌ಮಾಸ್ಟರ್ ತಳ್ಳಿ
25) ಶ್ರೀ ಉ. ವೇ. ಕೆ. ನಾರಾಯಣಾಚಾರ್ಯರು, ತೆಲುಗು ಪಂಡಿತ್ ತಳ್ಳಿ
26) ಶ್ರೀ ಉ. ವೇ. ಆರ್. ರಾಘವೈಯ್ಯಂಗಾರ್ಯರು. ಶ್ಯಾನುಭೋಗ್ ಎರ್. ಘಟ್ಟ
27) ಶ್ರೀ ಉ. ವೇ. ಆರ್. ಕೃಷ್ಣಸ್ವಾಮಯ್ಯಂಗಾರ್ಯರು, ಟೀಚರ್ ಎರ್. ಘಟ್ಟ
28) ಶ್ರೀ ಉ ವೇ. ರಾಮಸ್ವಾಮಯ್ಯಂಗಾರ್ಯರು, ಟೀಚರ್ ಮಾತನೆಲ್ಲೂರು
29) ಶ್ರೀ ಉ ವೇ ಡಿ. ಸುಂದರರಾಜರ್. ವಿಲ್ಸನ್‌ಗಾರ್ಡನ್. ಬೆಂಗಳೂರು
30) ಶ್ರೀ ಉ. ವೇ. ಎಂ. ಸುಂದರರಾಜರ್, ಕೆನರಾಬ್ಯಾಂಕ್. ಬೆಂಗಳೂರು
31) ಶ್ರೀ ಉ. ವೇ. ಎಸ್. ನಾರಾಯಣಭಟ್ಟರು, ಹೆಮ್ಮರಗಾಲ್
32) ಶ್ರೀ ಉ. ವೇ. ಕಂದಾಡೆ ವೆಂಕಟರಂಗಾಚಾರ್ಯರು
33) ಶ್ರೀ ಉ. ವೇ. ವೈ. ಜಿ. ಕೃಷ್ಣಸ್ವಾಮಯ್ಯಂಗಾರ್ಯರು, ಬೆಂಗಳೂರು
34) ಶ್ರೀ ಉ. ವೇ. ಮಕರಂ ಆಳಶಿಂಗ್ರಾಚಾರ್ಯರು, ಹೈಸ್ಕೂಲ್ ಮುಖ್ಯೋಪಾಧ್ಯಾಯರು, ಚಾಮರಾಜನಗರ

ಕಾಲಕ್ಷೇಪ ಗೋಷ್ಠಿಯಲ್ಲಿ ಕಂಗೊಳಿಸುವ ಮಹನೀಯರು

ಕುಳಿತಿರುವವರು : ಚಿತ್ರದ ಬಲದಿಂದ ಎಡಕ್ಕೆ


1) ಶ್ರೀ ಉ. ವೇ. ಆರ್. ನಾರಾಯಣಯ್ಯಂಗಾರ್ಯರು
2) ಶ್ರೀ ಉ. ವೇ. ಕೆಲಮಂಗಲಂ ವೆಂಕಟಾಚಾರ್ಯರವರು
3) ಶ್ರೀ ಉ ವೇ. ಜಗ್ಗು ನರಸಿಂಹಾಚಾರ್ಯರು
4) ಚಿ|| ಶಲ್ವಪಿಳ್ಳೈ
5) ಶ್ರೀ ಉ. ವೇ. ಆಚಾರ್ಯರು
ಇಳ್ಳೈಯವಿಲ್ಲಿ ಜಗ್ಗು ವೆಂಕಟಾಚಾರ್ಯ ಸ್ವಾಮಿಗಳವರು
6) ಶ್ರೀ ಉ. ವೇ. ಜಗ್ಗು ಸುದರ್ಶನಾಚಾರ್ಯರು
7) ಶ್ರೀ ಉ. ವೇ. ಕಡಾಂಬಿ ಶ್ರೀನಿವಾಸೈಯ್ಯಂಗಾರ್ಯರು
8) ಶ್ರೀ ಉ. ವೇ. ವೆಂಕಟರಂಗಾಚಾರ್ಯರು

ನಿಂತಿರುವವರು :

1) ಶ್ರೀ ಉ. ವೇ. ಸೀತಾರಾಮಯ್ಯಂಗಾರ್ಯರು
2) ಶ್ರೀ ಉ. ವೇ. ಅಡ್ವೋಕೇಟ್
ನಾರಾಯಣಸ್ವಾಮಯ್ಯಂಗಾರ್ಯರು
3) ಶ್ರೀ ಉ. ವೇ. ರಂಗೈಯ್ಯಂಗಾರ್ಯರು
4) ಶ್ರೀ ಉ. ವೇ ಆಯಿ ಅಳಶಿಂಗ್ರಾಚಾರ್ಯರು

* * * *
* * *

ಶ್ರೀ ದ್ರಮಿಡೋಪನಿಷತ್ಸಾರ ಸಂಗ್ರಹ ಕಾಲಕ್ಷೇಪ ಗೋಷ್ಠಿ



श्री द्रमिडोपनिषत्सारसंग्रह–कालक्षेपगोष्ठी

ಶುದ್ಧಿ ಪತ್ರಿಕೆ

*

ಹೆಚ್ಚಿಗೆ ಸೇರಿಸಿಕೊಳ್ಳಬೇಕಾದುದು :

ಪುಟ (೧) ಸಾಲು 9 इति ಅನಂತರ— स हि महीयान् कामो यः किल विष्णुरिव विश्वव्यापी सर्वसाधकश्च ।

ಪುಟ (೧೦) ಸಾಲು 11 ಸಂಗತಿ ಅನಂತರ— ವಿಷ್ಣುವಂತೆ ವಿಶ್ವವ್ಯಾಪಿಯಾಗಿಯೂ ಸರ್ವ ಸಾಧಕನೂ ಆದ ಕಾಮನು (ಆಶೆಯು) ಮೋಹಿಸಿದವನಲ್ಲವೇ ?

ಪುಟ (೧೩) ಸಾಲು 3 ಎಂದರ್ಥ ಅನಂತರ— ಅಥವಾ "ಮುನಿಗಳೇ ಹೇಳುವವರು" ಎಂದರ್ಥ. "ಚ" ಎಂಬುದಕ್ಕೆ "ಏವ" ಎಂಬ ಅವಧಾರಣ ಅರ್ಥ. ವೇದೇತಿಹಾಸ ಪುರಾಣಾದಿಗಳೆಲ್ಲವೂ ಇಂತಹ ಮುನಿಗಳ ವಾಕ್ಯಗಳನ್ನೇ ಪುಷ್ಟೀಕರಿಸುವುವು ಎಂದು ತಾತ್ಪರ್ಯ. ಹೀಗೆ ಪ್ರಬಂಧಗಳಿಗೆ ಪ್ರಾಧಾನ್ಯವನ್ನೂ ವೇದಕ್ಕೇ ಅಪ್ರಾಧಾನ್ಯವನ್ನೂ ಹೇಳಬಹುದೆ? ನಾವೇನು ಮಾಡುವ ?

ಪುಟ (೧೩) ಸಾಲು 8 ವರು ಅನಂತರ— ಅವರ ಮಾತೇ ಮುಖ್ಯವಾದ ಪ್ರಮಾಣ. ಅದಕ್ಕನುಸಾರವಾದ ವೇದಗಳೂ ಪ್ರಮಾಣವಾಗಬಲ್ಲುವು. ಎಂದು ಆ ಸೂತ್ರದ ಅರ್ಥ.

ಪುಟ ೧೭ ಸಾಲು 23 ಹೇಳಿದವರು ಅನಂತರ— "ಸುದರ್ಶನಾದಿ ನಿತ್ಯಸೂರಿಗಳು ಒಂದೊಂದು ವಿಧವಾಗಿ ಭಗವಂತನನ್ನು ಅನುಭವಿಸುವರು. ಆ ಎಲ್ಲಾ ವಿಧವಾದ ಅನುಭವಗಳನ್ನೂ ಒಂದನ್ನೂ ಬಿಡದೆ ನಾನೊಬ್ಬನೇ ಅನುಭವಿಸುತ್ತಿರುವೆನು." ಎನ್ನುವರು.

ಪುಟ ೬೯ ಸಾಲು 16 ದವರು ಅನಂತರ— ಭಗವನ್ನಿರ್ಹೇತುಕ ಕಟಾಕ್ಷಲಬ್ಧ ದಿವ್ಯಜ್ಞಾನರಾದ ನಮ್ಮಾಳ್ವಾರ್. ಪಾಡಿದವರೂ ಅವರೇ. ಕೇಳಿದವರು

ಪುಟ	ಸಾಲು	ಅಶುದ್ಧ	ಶುದ್ಧ	ಪುಟ	ಸಾಲು	ಅಶುದ್ಧ	ಶುದ್ಧ
(೨)	16	ताना	तेनाना	(೧೨)	24	ವರು–	ವರುಎಂದರೆ
(೩)	9	ति । त	ति त		27	ವರು.	ವವರು.
(೬)	14	२२०	२२७	(೧೩)	5	ಳು	ಳೀ
	15	२२२	२२९		5	ವರು	ವರಲ್ಲಾ!
(೧೧)	7	ಳನ್ನೂ	ಳಂದೇನು	(೧೪)	9	220	227
	8	ಮತ್ತು	ಅಥವಾ		10	222	229

ಪುಟ	ಸಾಲು	ಅಶುದ್ಧ	ಶುದ್ಧ	ಪುಟ	ಸಾಲು	ಅಶುದ್ಧ	ಶುದ್ಧ
೪	9	ಶುಂ	ಶು	೫೬	5	ನ್ನೂ	ನ್ನು
೫	11	ರೆ	ರ	೬೭	8	मं	त्रं
೬	22	वान्	ता		14	या	का
೨೬	13	ತುಂಬಾ ಬಡವ		೬೮	18	तर	त
		ನಾಗಿದ್ದು	(ಅಧಿಕ)	೭೦	16	ನ್ನು	ನು
೨೭	20	की	के	೭೫	4	बोध	बोधय
೨೮	13	ರಾ	ವಾ	೮೦	6	तें	तें:
	16	ಪ	ತ	೮೧	2	कुर्या	कुर्यां सपर्या
	19	ನನು	ನ ಆನು	೯೨	12	लै	लैय
೩೨	7	ಸಂ	ನಂ		15	ಳ್ಳೆ	ಳ್ಳೆಯು
೩೪	12	हृ्ब	दृढ	೯೩	6	त्त	त्ता
೪೦	17	यथा	यदा		9	वा	मा

ಪುಟ	ಸಾಲು	ಅಶುದ್ಧ	ಶುದ್ಧ	ಪುಟ	ಸಾಲು	ಅಶುದ್ಧ	ಶುದ್ಧ
೯೩	10	हि्व	ह्वि	೧೨೫	15	ಕ್ರ್ಯಾ	ಕ್ರ್ಯಾ
	14	ಕ್ಯೊ	ಕ್ಯ		16	ದ	ದಃ
೯೪	21	ರಿಂ	ರಾ	೧೨೭	12	ರಾಸ	ರಾಹ
೯೬	1	ಹ್ರ	ಹೃ		15	ಚ್ಛ್ರ	ರ್ಛ
೯೭	7	ಪಿರು	ಸು	೧೩೦	10	ಸ್ಸು	ಸು
	11	दिवे	वेदि	೧೩೫	2	ತ್ರ್ಯೈ	ತ್ರೈ
೧೦೦	14	ವಾರ್ತ	ತಾ	೧೩೭	7	ರಹ	ರವುಹ
೧೦೨	15	ದ್ಧೃ	ದೃ		11	ಹುಂ	ಟ್ಟುಂ
೧೦೫	1	ತ್ತುಂಬು	ತ್ತುಸ್ಬು		12	ಯಾ	ಯಾಂ
೧೦೬	20	ವತಿ	ಮಾತಿ	೧೩೯	1	षं	शं
೧೦೮	7	ನೇ	ನ	೧೪೨	4	ति । रु	ति रु
೧೧೦	4	ಮುಪ	ಮುದ	೧೪೫	3	नया	तया
	16	ಮುನಿ	ಮುನಿಃ		7	तवा	तावा
೧೧೧	6	ಗಾತ್ಸ	ಗಾತ್ತ್ಸ		16	ति । भा	ति भा
೧೧೨	16	ಕ್ರೋಶ್ರ			19	इति ।	इति,
			ಕ್ರೋಶಂಶ್ರ	೧೫೦	20	ತ್ರೂ	ತ್ರು
೧೧೪	4	ದ್ಧೃ	ದೃ		25	ಸು	ಪಿರು
೧೧೫	13	ಯಥಾ	ಯದಾ	೧೫೧	19	ತಕ್ಕಂ	ತವೇದಕ್ಕಂ
೧೨೦	14	ವಿ ಹಿ	ನಿ ಹಿ	೧೫೨	22	ಳ	ಳು
೧೨೧	4	ಶ್ಚಯಂ	ಶ್ಚಿತಂ	೧೫೪	22	ದ್ದಾ	ದ್ಧ
೧೨೩	3	ಸ್ಸೇ	ಶ್ಚೇ		23	ಗೆ	ಗೇ

श्रीः

परवासुदेवपरिचर्यया सदा
परवानुपैति परमां मुदं यः ।
शरणं व्रजामि करुणाकरं गुरुं
वरवेङ्कटार्यमनिशं तमादरात् ॥

— श्री नीलार्यः

श्रीः

श्रीमते रामानुजाय नमः　　　　श्रीमते शठकोपाय नमः



श्रीमद् द्रमिडोपनिषत्सारसङ्ग्रहः

ಶ್ರೀಮದ್ ದ್ರಮಿಡೋಪನಿಷತ್ಸಾರಸಂಗ್ರಹ

प्रपन्नकूटस्थपरांकुशादीन्सूरीन्गुरून्नाथयतीशपूर्वान् ।
प्रणम्य कुर्वे द्रमिडश्रुतीनां सारार्थसंक्षेपमिहाद्यपद्यैः ॥१॥

ಪ್ರಪನ್ನಜನಕೂಟಸ್ಥರಾದ ನಮ್ಮಾಳ್ವಾರ್ ಮೊದಲಾದ ಆಳ್ವಾರುಗಳನ್ನೂ, ನಾಥಮುನಿ, ರಾಮಾನುಜಾಚಾರ್ಯರು ಮುಂತಾದ ಆಚಾರ್ಯರುಗಳನ್ನೂ ನಮಸ್ಕರಿಸಿ ದ್ರಮಿಡೋಪನಿಷತ್ತಾದ "ತಿರುವಾಯ್ಮೊಳಿ"ಯ ಸಾರಾರ್ಥದ ಸಂಕ್ಷೇಪವನ್ನು ಶ್ಲೋಕರೂಪವಾಗಿ ರಚಿಸುವೆನು.

❀ ❀ ❀ ❀ ❀

1

उपोद्घात सारः

कर्तुश्शठरिपोस्तस्य प्रबन्धस्य च तत्कृतौ ।
प्रतिपाद्यार्थजातस्य महिमात्रानुवर्ण्यते ॥२॥

श्रीकृष्णपादगुरुभिराद्योपोद्घातकेस्फुटम् ।
द्वितीयेतु द्वयार्थत्वं तृतीये भरतस्य या ॥३॥

निष्ठा रामे चतुर्धा सा हरौ सूरेः कृतिष्वपि ।
तत्राद्यायां दशा सा हि या मातुर्वचनश्रुतौ ॥४॥

चित्रकूटप्रयाणे या सा द्वितीयप्रबन्धगा ।
नन्दिग्रामस्थितौ यातु सा तृतीयकृतौ मता ॥५॥

पुनरागत्य राज्यस्थे रामे सातु चतुर्थगा ।
उपोद्घातत्रयेऽप्येवं प्रमेयोऽर्थो निरूपितः ॥६॥

ಪ್ರಥಮೋಪೋದ್ಘಾತದಲ್ಲಿ ತಿರುವಾಯ್ಮೊಳಿ ಪ್ರಬಂಧ, ಅದರ ಕರ್ತೃ ವಾದ ನಮ್ಮಾಳ್ವಾರ್, ಈ ಪ್ರಬಂಧದಲ್ಲಿ ಪ್ರತಿಪಾದ್ಯವಾದ ಅರ್ಥ. ಇವುಗಳ ಮಹಿಮೆಯನ್ನು ಕೊಂಡಾಡಿದ್ದಾರೆ. ಎರಡನೆಯದರಲ್ಲಿ ತಿರುವಾಯ್ಮೊಳಿ ದ್ವಯಾರ್ಥಪ್ರತಿಪಾದಕವೆಂದೂ, ಆದುದರಿಂದಲೇ ಇದು ದೀರ್ಘ ಶರಣಾಗತಿ ಯೆಂದೂ ನಿರೂಪಿಸಿದಾರೆ. ಮೂರನೇದರಲ್ಲಿ ಆಳ್ವಾರ್ರವರ ಭರತನಿಷ್ಠೆ ಪ್ರತಿ ಪಾದಿತವಾಗಿದೆ. ಸೋದರಮಾವನ ಮನೆಯಿಂದ ಹಿಂತಿರುಗಿಬಂದ ಭರತ ನನ್ನು ನೋಡಿ ಕೈಕೇಯಿ 'ರಾಜ್ಞ!' ಎಂದಾಗ ಆದ ಸ್ಥಿತಿಯು ತಿರುವಿರುತ್ತ ಪ್ರಬಂಧದಿಂದಲೂ, ತಿರುವಾಶಿರಿಯ ಪ್ರಬಂಧದಿಂದ ಚಿತ್ರಕೂಟಪ್ರಯಾಣ ಸ್ಥಿತಿಯೂ, ಪೆರಿಯತಿರುವಂದಾದಿಯಲ್ಲಿ ನಂದಿಗ್ರಾಮದಲ್ಲಿದ್ದ ಸ್ಥಿತಿಯೂ, ತಿರುವಾಯ್ಮೊಳಿಯಲ್ಲಿ ಶ್ರೀರಾಮಚಂದ್ರನು ರಾವಣಸಂಹಾರವಾದ ಅಯೋ ಧ್ಯೆಯಲ್ಲಿ ಪಟ್ಟಾಭಿಷಿಕ್ತನಾದ ಮೇಲೆ ಅವನಸೇವೆ ಮಾಡುತ್ತಿದ್ದ ಸ್ಥಿತಿಯೂ

ಈ ರೀತಿ ನಾಲ್ಕು ಪ್ರಬಂಧಗಳಿಂದ ನಾಲ್ಕು ದಶೆಗಳು ತಿಳಿದುಬರುತ್ತವೆಂದು ವಿವರಿಸಿದ್ದಾರೆ.

दशानां शतकानां प्रधानार्थाः

श्रीभर्तुः कैङ्कर्यं पुरुषार्थस्स च परार्थ एव स्यात् ।
हरिभक्तपादसेवापर्यवसितमेव तच्च निष्कृष्टम् ॥७॥

ऐश्वर्यं कैवल्यं द्वितयं त्याज्यं विरोधित्वात् ।
तादृग्विरोधनिरसनकारी मधुहा स एव हरिरीशः ॥८॥

इत्याह कारिसूनुःक्रमशोऽर्थान्पञ्चभिश्शतकैः ।
अथ षष्ठे प्रतिबन्धकनिरसनशीलं वृणोति शरणतया ॥९॥

शरणवरणेकृतेऽपि श्रीशे स्वप्रकृतिबन्धनं पश्यन् ।
अवसीदति निर्वेदाच्छठकोपस्सप्तमे शतके ॥१०॥

बन्धस्य हेतुर्ममता स्वबन्धुष्वित्येव मत्वा शठकोपसूरिः
त्यक्त्वाथसङ्गं सकलेषु विष्णौ न्यवेदयत्सङ्गहतिं स्वकीयां ॥११॥

एवं प्रपन्नेऽपि मुनौ शठारौ दृष्ट्वा विलम्बं बहुशङ्कमाने ।
नारायणोऽस्मीति नुनोद शङ्कां शीले न्यमज्जन्मुनिरस्य हृष्टः ॥१२॥

बाह्याश्लेषत्वरां दृष्ट्वा शठारातेश्श्रियः पतिः ।
स्वनित्यसेवां प्रददौ मार्गदर्शनपूर्वकम् ॥१३॥

ಒಂದನೇ ಶತಕ ಒಂದನೇ ದಶಕ ಒಂದನೇ ಪಾಶುರದಲ್ಲಿ 'ಅರ್ವ ತುಯ ರರು ಶುಡರಡಿತೊಳುತೆಳೆನ್ಮನನೇ' 'ಎಲೈ ಮನಸ್ಸೇ! ಆ ಶ್ರಿಯಃ ಪತಿಯ ತೇಜೋಮಯವಾದ ಪಾದಾರವಿಂದಗಳಲ್ಲಿ ಸಕಲವಿಧವಾದ ಶೇಷವೃತ್ತಿಯನ್ನು

ಮಾಡಿ ಉಜ್ಜೀವಿಸು' ಎಂದು ಹೇಳಿರುವುದರಿಂದ 'ಸರ್ವೇಶ್ವರನ ಪಾದಾರವಿಂದ ಕೈಂಕರ್ಯವೇ ಪುರುಷಾರ್ಥ' ಎಂದು ಹೇಳಲ್ಪಟ್ಟಿತು. ಎರಡನೇ ಶತಕ ಒಂಭತ್ತನೇ ದಶಕ ನಾಲ್ಕನೇ ಪಾಶುರದಲ್ಲಿ 'ಎನಕ್ಕೇ ಆಳ್ಚೆಯ್ಯೆಕ್ಕಾಲತ್ತುಮೆನ್ನು' 'ಇತರರಿಗೆ ನೀನಾಳಾಗಬೇಡ; ನನಗೂ ಆಳಾಗಿ ನಿನಗೂ ಆಳಾಗಿರಬೇಡ; ಯಾವಾಗಲೂ ನನಗೇ ಆಳಾಗಿರು' ಎಂದು ಹೇಳಿರುವುದರಿಂದ, ನೀನು ಮಾಡುವ ಸೇವೆಯಿಂದ ನಿನಗೂ ಸಂತೋಷವುಂಟಾದರೂ ಅದು ಪುರುಷಾರ್ಥವಲ್ಲ. ಆ ಸೇವೆಯಿಂದ ನನಗುಂಟಾಗುವ ಸಂತೋಷವೇ ಪುರುಷಾರ್ಥವೆಂದು, ಪರಾರ್ಥ ಕೈಂಕರ್ಯವೇ ಪುರುಷಾರ್ಥವೆಂದು ನಿಷ್ಕರ್ಷಿಸಲ್ಪಟ್ಟಿತು. ಮೂರನೇ ಶತಕದ 'ಪಯಿಲುಂಶುಂಡರೊಳ್' ಎಂಬ ಏಳನೇ ದಶಕದಲ್ಲಿ 'ನೀನು ಮಾಡುವ ಸೇವೆಯಿಂದ ಭಗವಂತನಿಗೆ ಉಂಟಾಗುವ ಸಂತೋಷಮಾತ್ರವೇ ಪುರುಷಾರ್ಥವಲ್ಲ. ಭಗವದ್ಭಕ್ತರಿಗೆ ನೀನು ಮಾಡುವ ಸೇವೆಯಿಂದುಂಟಾಗುವ ಭಗವಂತನ ಸಂತೋಷವೇ ಪುರುಷಾರ್ಥ' ವೆಂದು ಹೇಳಿರುವುದರಿಂದ ಭಾಗವತ ಕೈಂಕರ್ಯವೇ ಮುಖ್ಯಪುರುಷಾರ್ಥವೆಂದು ನಿರ್ಣಯಿಸಲ್ಪಟ್ಟಿತು.

ನಾಲ್ಕನೇ ಶತಕದ 'ಒರುನಾಯಹ ಮಾಯ್' ಎಂಬ ಒಂದನೇ ದಶಕದಲ್ಲಿ ಒಂದರಿಂದ ಎಂಟು ಪಾಶುರಗಳಲ್ಲಿ '೬೦-೭೦ ಸಾವಿರವರುಷಗಳಕಾಲ ಈ ಸಮಸ್ತ ಭೂಮಂಡಲವನ್ನೂ ಏಕಚ್ಛತ್ರಾಧಿಪತ್ಯದಿಂದ ಆಳಿದವರೂ, ರಾಜ್ಯಭ್ರಷ್ಟರಾಗಿ ತಿರಿದು ತಿನ್ನಲು ಕತ್ತಲೆಯಲ್ಲಿ ಅಲೆದು ಕರಿನಾಯಿಗಳಿಂದ ಕಾಲು ಕಚ್ಚಿಸಿಕೊಂಡು ಕಷ್ಟಪಡುವರು. ಆದ್ದರಿಂದ ನಿತ್ಯಶ್ರೀಕನಾದ ನಾರಾಯಣನ ಪಾದಾರವಿಂದಗಳನ್ನು ನೆನೆದು ಉಜ್ಜೀವಿಸಿರಿ.' ಎಂದು ರಾಜ್ಯದ ಕಷ್ಟಗಳನ್ನೂ ಐಶ್ವರ್ಯದ ನಶ್ವರತೆಯನ್ನೂ ಹೇಳಿ, ೯ನೇ ಪಾಶುರದಲ್ಲಿ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂಬಂತೆ ಸ್ವರ್ಗದಲ್ಲಿರುವವನು ಪುಣ್ಯ ಮುಗಿದ ಮೇಲೆ ಭೂಮಿಯಲ್ಲಿ ಪುನಃ ಹುಟ್ಟಬೇಕಾದ್ದರಿಂದಲೂ, ಸ್ವರ್ಗದಲ್ಲಿರುವಾಗಲೂ ಕೂಡ ಇನ್ನೇನು ಪುಣ್ಯ ಮುಗಿಯಿತಲ್ಲಾ! ಎಂದು ಕೊರಗುತ್ತಿರುವುದರಿಂದಲೂ, ಸ್ವರ್ಗಾದಿ ಲೋಕಾಂತರಗಳಲ್ಲಿಯ ಐಶ್ವರ್ಯವೂ ಅನಿತ್ಯವಾದುದರಿಂದ ಅವುಗಳನ್ನು ಬಿಟ್ಟು ತಿರುನಾರಾಯಣನ ಪಾದಾರವಿಂದಗಳನ್ನೇ ಉಪಾಯವಾಗಿ ನಂಬಿ ಆಶ್ರಯಿಸಿರಿ ಎಂದು ಹೇಳಿ 'ಕುರುಹ' ಎಂಬ ಹತ್ತನೇ ಪಾಶುರದಲ್ಲಿ ಭಗವದನುಭವವಿಲ್ಲದೆ ಕೇವಲ ಪ್ರಕೃತಿಸಂಬಂಧವುಳ್ಳ ತನ್ನ

ಆತ್ಮವನ್ನೇ ಯಾವದಾತ್ಮಭಾವಿಯಾಗಿ ಅನುಭವಿಸುವ ಕೈವಲ್ಯವೆಂಬ ಮೋಕ್ಷವೂ ಕೂಡ ಅತ್ಯಲ್ಪಸುಖವಾದ್ದರಿಂದ ಅದೂ ತ್ಯಾಜ್ಯವೇ ಎಂದು ಹೇಳಿ, ಭಗವಂತನೇ ಪರಮಪ್ರಾಪ್ಯನೂ ಉಪಾಯನೂ ಆದ್ದರಿಂದ ತದ್ವಿರುದ್ಧವಾದ ಐಶ್ವರ್ಯ ಕೈವಲ್ಯಗಳು ಸುತರಾಂ ತ್ಯಾಜ್ಯಗಳೆಂದು ತೀರ್ಮಾನಿಸಲ್ಪಟ್ಟಿತು.

ಐದನೇ ಶತಕ ಒಂದನೇ ದಶಕ "ಕೈಯ್ಯಾರ್ ಶಕ್ಕರ" ದಲ್ಲಿ ಅನಾದಿ ಕಾಲದಿಂದಲೂ ನಾನು ಮಾಡಿದ ದೋಷಗಳನ್ನೆಲ್ಲಾ ನೋಡದೆ, ನನ್ನಲ್ಲಿ ಗುಣ ಲೇಶವಿಲ್ಲದಿದ್ದಾಗ್ಯೂ, ನನ್ನ ಅಹೃದಯವಾದ ಉಕ್ತಿಯನ್ನೇ ಸಹೃದಯವನ್ನಾಗಿಸಿಕೊಂಡು, ಅವನ ಕೈಂಕರ್ಯವೇ ಪುರುಷಾರ್ಥವೆಂಬ ಜ್ಞಾನವನ್ನು ತನ್ನ ನಿಷ್ಕಾರಣವಾದ ಕರುಣೆಯಿಂದಲೇ ಕೊಟ್ಟು, ಪರೋಪದೇಶವನ್ನೂ ಮಾಡುವಂತೆ ಮಾಡಿ, ನನ್ನ ಹೃದಯವನ್ನು ಬಿಟ್ಟು ಬೇರೊಂದು ಕಡೆಯನ್ನು ಕಣ್ಣೆತ್ತಿಯೂ ನೋಡಲಾರೆನೆಂದು ಹೇಳಿರುವುದರಿಂದ ಅವನ ಕೃಪೆಗೆ ಯಾವ ಪ್ರತಿಬಂಧಕವಿದ್ದರೂ ಅದನ್ನು ಅವನೇ ಪರಿಹರಿಸುತ್ತಾನೆಂಬ ಅರ್ಥವು ಸಿದ್ಧಿಸುವುದು.

ಆರನೇ ಶತಕ ಹತ್ತನೆಯ ದಶಕ "ಉಲಹಮುಣ್ಡ"ದಲ್ಲಿ ೧೦ ನೇ ಪಾಶುರದಲ್ಲಿ ಅವನ ಪಾದಾರವಿಂದವನ್ನು ಹೊಂದಬೇಕಾದರೆ ಅವನ ಪಾದಾರವಿಂದಗಳೇ ಉಪಾಯವೆಂಬ ಸಿದ್ಧೋಪಾಯವರಣರೂಪ ಪ್ರಪತ್ತಿಯನ್ನು ಲಕ್ಷ್ಮೀಪುರುಷಕಾರಪೂರ್ವಕವಾಗಿ ಶ್ರೀವೇಂಕಟಾಚಲಪತಿಯಲ್ಲಿ ಸಲ್ಲಿಸುತ್ತಾರೆ.

ಏಳನೇ ಶತಕ "ಉಣ್ಣಿಲಾವಿಯ" ಎಂಬ ೧ ನೇ ದಶಕದಲ್ಲಿ ಹಿಂದೆ ತಾವು ನಾಲ್ಕುಸಲ ಪ್ರಪತ್ತಿಮಾಡಿದಾಗ್ಯೂ ಅಂತಶ್ಶತ್ರುಗಳಾದ ಪಂಚೇಂದ್ರಿಯಗಳಿಗೆ ಸಿಲುಕಿ ಬಾಧೆಪಡುತ್ತಿರುವುದನ್ನು ಕಂಡು ನನ್ನನ್ನು ಹೀಗೆ ಬಾಧೆಪಡಿಸುವುದು ನ್ಯಾಯವಲ್ಲವೆಂದು ಹೇಳಿ ಖಿನ್ನರಾಗುತ್ತಾರೆ.

ಎಂಟನೇ ಶತಕ "ನಂಗಳ್ ವರಿವಳೈ" ಎಂಬ ಎರಡನೇ ದಶಕದಲ್ಲಿ ಮಹಾವಿಶ್ವಾಸ ಪೂರ್ವಕವಾಗಿ ತಾವು ಸಿದ್ಧೋಪಾಯನಾದ ಭಗವಂತನಲ್ಲಿ ಪ್ರಪತ್ತಿಮಾಡಿದಾಗ್ಯೂ, ಇನ್ನೂ ಫಲವಾದ ಮೋಕ್ಷವು ಬಾರದೇ ಇರುವುದಕ್ಕೆ ಕಾರಣ, ತಮಗೆ ಬಂಧುಗಳಲ್ಲಿರುವ ಆಸೆ, (ಬಂಧ) ಬಿಡಲಿಲ್ಲವಾದುದೇ ಇರಬಹುದೆಂದು ಯೋಚಿಸಿ, ತಾಯಿ ಮೊದಲಾದ ಬಂಧುವರ್ಗದಲ್ಲಿ ನನಗೆ ಪ್ರೀತಿ ಬಿಟ್ಟುಹೋಯಿತೆಂದು ಭಗವಂತನಲ್ಲಿ ವಿಜ್ಞಾಪಿಸುತ್ತಾರೆ.

ಒಂಭತ್ತನೇ ಶತಕ "ಓರಾಯಿ ರಮಾರ್" ಎಂಬ ಮೂರನೇ ದಶಕದಲ್ಲಿ

ಭಗವಂತನು ಆಳ್ವಾರ್ ರವರ ಆರ್ತಿಯನ್ನು ನೋಡಿ ಸಹಿಸಲಾರದೆ "ಫಲಕ್ಕಾಗಿ ನೀವೇಕೆ ಇಷ್ಟು ಕಷ್ಟಪಡುವಿರಿ? ಈ ಕಷ್ಟ ನನ್ನದಲ್ಲವೇ? 'ಶ್ರಿಯಃಪತಿಯು ನಾರಾಯಣಶಬ್ದವಾಚ್ಯನು. ನಾನು ನಾರಶಬ್ದವಾಚ್ಯನು.' ಎಂದು ತಿಳಿದವ ನಿಗೇನು ಕೊರತೆ?" ಎಂದು ಭಗವಂತನು ಹೇಳಿದುದನ್ನು ಕೇಳಿ ಅವನ ಸೌಶೀಲ್ಯಗುಣದಲ್ಲಿ ಮುಳುಗುತ್ತಾರೆ.

ಹತ್ತನೇ ಶತಕ "ಶೂಳ್ ವಿಶುಮ್ಬು" ಎಂಬ ಒಂಭತ್ತನೇ ದಶಕದಲ್ಲಿ ಭಗವಂತನು ಆಳ್ವಾರ್ ರವರಿಗೆ ಅರ್ಚಿರಾದಿ ಮಾರ್ಗವನ್ನೂ, ಆತಿವಾಹಿಕರು ಇವರಿಗೆ ಮಾಡುವ ಸತ್ಕಾರವನ್ನೂ, ದಿವ್ಯ ವೈಕುಂಠನಗರವನ್ನೂ, ಅಲ್ಲಿರುವ ದಿವ್ಯಾಸ್ಥಾನಮಂಟಪರತ್ನವನ್ನೂ, ಅಲ್ಲಿ ತಾನು ಪತ್ನೀಪರಿಜನಾದಿಗಳೊಡನೆ ಕೂಡಿರುವುದನ್ನೂ, ಆ ನಿತ್ಯಸೂರಿಗಳೊಡನೆ ಆಳ್ವಾರ್ ರವರು ಸೇರುವುದನ್ನೂ ತೋರಿಸಿ ಕೊಟ್ಟದ್ದನ್ನು ಹೇಳುತ್ತಾರೆ.

ಹತ್ತನೇ ಶತಕ "ಮುನಿಯೇ ನಾನ್ಮುಹನೇ" ಎಂಬ ೧೦ ನೇ ದಶಕದಲ್ಲಿ ಆಳ್ವಾರ್ ಭಗವಂತನು ನಿತ್ಯಾನಂದನಾಗಿರುವುದನ್ನೂ ತಾವು ಈ ನಶ್ವರವಾಗಿ ಹೇಯವಾದ ಶರೀರದೊಡನೆಯೇ ಇರುವುದನ್ನೂ ನೋಡಿ, ಅವನ ಬಾಹ್ಯಾನುಭವದಲ್ಲಿ ತ್ವರೆಯುಳ್ಳವರಾಗಿ ಕಾಳ್ಕಿಚ್ಚಿನಲ್ಲಿ ಸಿಕ್ಕಿದವನಂತೆ ಆರ್ತಧ್ವನಿಯಿಂದ ಕೂಗಿಕೊಳ್ಳಲು, ಅದನ್ನು ಕೇಳಿ ಅವರಿಗಿಂತಲೂ ಹೆಚ್ಚಾದ ಆರ್ತಿಯೊಡನೆ ಕೂಡಿದ ಭಗವಂತನು ಗರುಡಾರೂಢನಾಗಿ ಬಂದು ದರ್ಶನಕೊಟ್ಟು, ತನ್ನ ನಿತ್ಯ ಸೇವೆಯನ್ನೂ ಕೊಟ್ಟು, ವ್ಯಾಪಕವಾದ ತತ್ತ್ವತ್ರಯಗಳಿಗಿಂತಲೂ ದೊಡ್ಡದಾದ ತಮ್ಮ ಆಸೆಯನ್ನು ಪೂರ್ತಿಮಾಡಿದನೆಂದು ಹೇಳಿ ಪ್ರಬಂಧವನ್ನು ಮುಗಿಸುತ್ತಾರೆ.

प्रथमशतकार्थाः

परत्वभजनीयता सुलभता क्षमाशीलवान्

सुराधसुखरूपताजवगुणैः क्रमात्संयुतः ।

शठद्विषमभोजयत्प्रथमके शते स्वं हरिः

तथाखिलतदङ्गकैर्मिळितमेव निर्हेतुकं ॥१४॥

ಮೊದಲನೇ ಶತಕದಲ್ಲಿ ೧ ನೇ ದಶಕದಲ್ಲಿ ಭಗವಂತನ 'ಪರತ್ವ' ವನ್ನೂ 2ನೆಯು ದರಲ್ಲಿ 'ಅವನಲ್ಲಿ ಭಕ್ತಿಪ್ರಪತ್ತಿಗಳನ್ನು ಮಾಡಿರಿ' ಎಂದೂ, 3 ನೆಯದರಲ್ಲಿ ಅವನ ಸೌಲಭ್ಯವನ್ನೂ 4 ನೇದರಲ್ಲಿ ಅವನ 'ಕ್ಷಮಾಗುಣ' ವನ್ನೂ, 5 ನೆಯ ದರಲ್ಲಿ ಅವನ 'ಸೌಶೀಲ್ಯ'ವನ್ನೂ, 6 ನೇದರಲ್ಲಿ ಅವನು 'ಸುಖಾರಾಧ್ಯ'ನೆಂದೂ 7 ರಲ್ಲಿ ಅವನು 'ಸುಖರೂಪ' ನೆಂದೂ, 8 ರಲ್ಲಿ ಅವನು 'ಋಜುಸ್ವಭಾವ' ದವನೆಂದೂ, 9 ರಲ್ಲಿ ಅವನು ತನ್ನೊಡನೆ ಮಾಡಿದ ಸರ್ವಾಂಗಸಂಶ್ಲೇಷವನ್ನೂ 10 ರಲ್ಲಿ ಇದೆಲ್ಲವನ್ನೂ ನನ್ನಲ್ಲಿ ನಿರ್ಹೇತುಕವಾಗಿಯೇ ಅವನು ಮಾಡಿದ ನೆಂದೂ, ಸಾರಾಂಶವನ್ನು ನಿರೂಪಿಸಿದಾರೆ.

उयर्वर १ शतक १ दशकार्थः

समस्तकल्याणगुणान्स्वकीयान्स्वरूपरूपे द्विविधां विभूतिम् ।
प्रदर्श्य निर्हेतुकमन्वगृह्णाद्यस्तं नमस्कृत्य मनस्सुजीव्याः ॥१५॥

हेयासहत्वात्सुगुणाकरत्वाद्विलक्षणं सर्वचितोऽचितश्च ।
सर्वान्तरत्वात्सकलप्रवृत्तिनिवृत्तिसत्तादिषु मूलभूतम् ॥१६॥

ब्रह्मेन्द्ररुद्रादिशरीरकत्वात्सृष्ट्यादिकार्याण्यपि कारयन्तम् ।
अण्डेष्विवाणुष्वपि सञ्चरन्तं दृढश्रुतिप्रोक्तमितीदृशन्तम् ॥१७॥

ಶ್ರಿಯಃಪತಿಯಾದ ಸರ್ವೇಶ್ವರನು ಈ ಆಳ್ವಾರ್ ಅವರಿಗೆ ನಿರ್ಹೇತುಕ ವಾಗಿ ತನ್ನ ಸ್ವರೂಪವನ್ನೂ, ದಿವ್ಯಮಂಗಳವಿಗ್ರಹವನ್ನೂ, ಕಲ್ಯಾಣಗುಣ ಗಣಗಳನ್ನೂ ನಿತ್ಯವಿಭೂತಿಯನ್ನೂ ಲೀಲಾವಿಭೂತಿಯನ್ನೂ, ತನ್ನ ಸ್ವಾಧೀ ನವಾದ ತ್ರಿವಿಧಚೇತನಾಚೇತನ ಸ್ವರೂಪಸ್ಥಿತಿ ಪ್ರವೃತ್ತಿಕತ್ವವನ್ನೂ ಜ್ಞಾನಸಾಕ್ಷಾತ್ಕಾರ ವಿಷಯವಾಗಿ ಮಾಡಿದನು ಮತ್ತು ಬ್ರಹ್ಮರುದ್ರಾಂತ ರ್ಯಾಮಿಯಾಗಿದ್ದು ಸೃಷ್ಟಿಸಂಹಾರಗಳನ್ನು ಮಾಡತಕ್ಕವನಾಗಿಯೂ ರಕ್ಷಣಕಾರ್ಯವನ್ನು ಸ್ವತಃ ತಾನೇ ನಿಂತು ಮಾಡತಕ್ಕವನಾಗಿಯೂ, ಜಲಪರ

ಮಾಣುಗಳಲ್ಲಿಯೂ, ಅದರೊಳಗಿರುವ ಸೂಕ್ಷ್ಮವಾದ ಜೀವವರ್ಗದಲ್ಲಿಯೂ ಕೂಡ ಒಂದು ಬ್ರಹ್ಮಾಂಡದೊಳಗೆ ಒಬ್ಬ ಪುರುಷಸಿದ್ಧಂತೆ ವಿಸ್ತಾರವಾಗಿ ವ್ಯಾಪಿಸುತ್ತಿರುವನಾಗಿಯೂ, ಮೇಲೆ ಹೇಳಿದಂತೆಯೇ ದೃಢವಾದ ಶ್ರುತಿ ಪ್ರಮಾಣವೇದ್ಯನಾದ ತನ್ನನ್ನು ಜ್ಞಾನ ಸಾಕ್ಷಾತ್ಕಾರ ವಿಷಯನಾಗುವಂತೆ ಯೂಮಾಡಿದ. ಇದೆಲ್ಲವನ್ನೂ ಸಾಕ್ಷಾತ್ಕರಿಸಿ ಅವನ ಪರತ್ವವನ್ನು ಅನುಭವಿಸಿ ತಮ್ಮ ಮನಸ್ಸನ್ನು ಕುರಿತು ಅಂತಹ ಸರ್ವೇಶ್ವರನ ಸಕಲವಿಧವಾದ ಕೈಂಕರ್ಯ ವನ್ನೂ ಮಾಡಿ ಉಜ್ಜೀವಿಸು ಎಂದು ಹೇಳುತ್ತಾರೆ.

वीडुमिन् १. २.

त्यक्त्वा सर्वं भजत हरिमित्यूचिवान्कारिसूनुः
दृष्ट्वान्येषां व्यसनममितं दुस्सहं मन्यमानः ।
विद्युल्लेखाचपलमखिलं देहभोग्यादिकं तत्
हित्वा तस्मिन्नहमिति ममेत्यादि बुद्धिं दयालुः ॥१८॥

ಆಳ್ವಾರ್ ರವರು ತಾವು ಸವಿಭೂತಿಕನಾದ ಸರ್ವೇಶ್ವರನನ್ನು ಸಾಕ್ಷಾತ್ಕರಿಸಿದಂತೆ, ಎಲ್ಲಾ ಚೇತನರಿಗೂ ಅವನನ್ನು ಅನುಭವಿಸುವ ಯೋಗ್ಯತೆಯಿದ್ದಾಗ್ಯೂ, ಸಂಸಾರದಲ್ಲಿ ಸಿಲುಕಿ ಕಷ್ಟಪಡುವುದನ್ನು ನೋಡಿ, ತಮ್ಮ ನಿರ್ಹೇತುಕವಾದ ದಯೆಯಿಂದ ಅವರಿಗೆ ಹಿತವನ್ನುಪದೇಶಿಸುತ್ತಾರೆ. ಸರ್ವೇಶ್ವರನನ್ನು ಹೊರತು ಮತ್ತೆಲ್ಲಾ ಪ್ರಾಕೃತವಾದ ಶಬ್ದಾದಿ ಭೋಗಗಳನ್ನೂ ಪ್ರಕೃತಿಸಂಬಂಧವಿಲ್ಲದ ಆತ್ಮಾನುಭವವನ್ನೂ ಬಿಟ್ಟು, ಭಗವಂತನಲ್ಲೇ ಶರಣಾಗತರಾಗಿರಿ. ಅನಾದಿ ಕಾಲದಿಂದನುಭವಿಸಿದ ಸುಖಬಿಡಲು ಸಾಧ್ಯವೇ? ಸಾಧ್ಯ. ಮಿಂಚಿಗಿಂತಲೂ ಕ್ಷಣಿಕವಾದ ಭೋಗಗಳನ್ನೂ ಅಸ್ಥಿರವೆಂದು ಭಾವಿಸಿದರೆ ಸಾಕು. ಮತ್ತೆ ಅದಕ್ಕೂ ಮೂಲಭೂತವಾದ 'ನಾನು' 'ನನ್ನದು' ಎಂಬ ಅಹಂಕಾರ ಮಮಕಾರಗಳನ್ನು ಬಿಟ್ಟರೆ ಮತ್ತೂ ಸುಲಭಸಾಧ್ಯ; ಎಂದು ಪರೋಪದೇಶ ಮಾಡುತ್ತಾರೆ.

पत्तुडै १. ३.

परत्वभजनीयते भगवतः क्रमाद्बोधिते
तथापि नहि युज्यते भजनमेषदुर्दर्शनः ।
इतीदमतिशंकितं परिहरन्मुनिर्बोधय-
त्यतीव सुलभं हरिं ह्यवतरन्तमात्मेच्छया ॥१९॥

व्रजभुवि नवनीतस्तेयवार्ता प्रसङ्गे
प्रतिगृहमपविद्धो वल्लवीभिस्स्वमन्थैः ।
मुहुरपि विनिबद्धो रज्जुभिर्नन्दसूनुः
किमु न सुलभ एषो ह्यस्मदिच्छानुसारी ॥२०॥

ಆಳ್ವಾರ್ ರವರೇ! ನೀವು ಉಪದೇಶಿಸುವ ಸರ್ವೇಶ್ವರನು ಪರತತ್ವ ವಾದ್ದರಿಂದ ಪರಮಪ್ರಾಪ್ಯನೇ ಅಹುದು. ಭಜನೀಯನೂ ಆಹುದು. ಆದರೆ ಕಣ್ಣಿಗೆ ಕಾಣಿಸುವುದಿಲ್ಲವಲ್ಲಾ! ಹೇಗೆ ಅವನನ್ನು ಭಜಿಸುವುದು? ಎಂದರೆ- ಅವನು ಕೃಷ್ಣಾವತಾರಮಾಡಿ ಮನೆ ಮನೆಯಲ್ಲಿ ಬೆಣ್ಣೆ ಕದ್ದಾಗ ಗೋಪಿಗಳ ಕಡೆಗೋಲಿನಿಂದ ಪೆಟ್ಟುತಿಂದು, ತಾಯಿಯಿಂದ ಕಟ್ಟಿಹಾಕಲ್ಪಟ್ಟು, ಅದನ್ನು ಬಿಡಿಸಿಕೊಳ್ಳಲಾರದೆ ಅಳುತ್ತಿದ್ದವನು ಅತ್ಯಂತ ಸುಲಭನಲ್ಲವೆ? ಎಂದು ಅವನ ಸೌಲಭ್ಯವನ್ನು ಬೋಧಿಸುತ್ತಾರೆ.

अञ्जिरैय १. ४.

अनन्यशेषत्वमुखैस्तु षड्भिर्गुणैस्समानो मुनिरेषलक्ष्म्याः ।
वियोगिनी काचिदिहैव भूत्वा दूतान्शकुन्तान्प्रहिणोति तस्मै ॥२१॥

दोषानदृष्ट्वा मम सङ्गतो मया दृष्ट्वा ततस्तान्प्रविहाय मां गतः ।
विज्ञाप्य तं तस्य गुणं क्षमाभिधं समानयध्वं तमिहेति सन्दिशन् ॥२२॥

3

ಪರಿಶುದ್ಧಜೀವಾತ್ಮರುಗಳಿಗೆ ಅನನ್ಯಾರ್ಹಶೇಷತ್ವ, ಅನನ್ಯ ಶರಣತ್ವ, ಅನನ್ಯ ಭೋಗ್ಯತ್ವ, ಸಂಶ್ಲೇಷೇಸತಿ ಶರೀರಧಾರಣ, ವಿಶ್ಲೇಷೇಸತಿ ಶರೀರ ಧಾರಣಾಭಾವ, ತತ್ಸತ್ತಾಧೀನಸತ್ತಾಕತ್ವರೂಪವಾದ ಆರು ಧರ್ಮಗಳಿಂದ ಲಕ್ಷ್ಮೀಯಸಾದೃಶ್ಯವಿದೆ. ಆಳ್ವಾರ್‌ರವರು ಭಗವಂತನ ವಿಶ್ಲೇಷವನ್ನು ಸಹಿಸ ಲಾರದೆ ಲಕ್ಷ್ಮಿಯಂತೆ ತಾವೂ ನಾಯಕಿಯ ಸ್ಥಿತಿಯನ್ನು ಪಡೆದು ವಿರಹವ್ಯಥೆ ಯಿಂದ ನಿಂತಕಡೆ ನಿಲ್ಲಲಾರದೆ ಉದ್ಯಾನವನಕ್ಕೆ ಹೋಗಿ ಅಲ್ಲಿರುವ ಪಕ್ಷಿಗಳನ್ನು ಭಗವಂತನಿಗೆ ದೂತರನ್ನಾಗಿ ಕಳುಹಿಸುತ್ತಾರೆ. "ಮೊದಲು ನನ್ನ ದೋಷ ಗಳನ್ನು ನೋಡದೆ ಅವನು ನನ್ನೊಡನೆ ಸೇರಿದನು. ನನ್ನ ದೋಷವನ್ನು ಕಂಡಮೇಲೆ ನನ್ನನ್ನು ಅಗಲಿ ಹೋದ. ಅವನ ಕ್ಷಮಾಗುಣವನ್ನು ಅವನಿಗೆ ತಿಳಿಸಿ ನನ್ನ ಅಪರಾಧವನ್ನು ಮನ್ನಿಸುವಂತೆ ಹೇಳಿ ಅವನನ್ನು ಕರೆತನ್ನಿ" ರೆಂದು ಹೇಳಿ ಕಳುಹಿಸುತ್ತಾರೆ.

वळवेऴुलहु १. ५.

निरस्तनिखिलाशुभं परतमं गुणैस्सर्वतो
हरिं तमनुचिन्तयन् स्वमपि सर्वहेयाकरं ।
न दूषयितुमुत्सहे तमहमित्यसौ कारिजः
जिहासुरभवद्धरिं तदनु तेन संयोजितः ॥२३॥

ದೂತರನ್ನು ಕಳುಹಿಸಿದರೂ ಅವನು ಬಾರದಿರಲು– "ಓಹೋ! ಭಗ ವಂತನು ದೋಷವಿಲ್ಲದವನು. ಒಳ್ಳೆಯ ಗುಣಗಳಿಂದ ಪರಿಪೂರ್ಣನು. ನಾನು ಅತ್ಯಂತ ಅಶುಚಿ, ಗುಣಲೇಶವೂ ಇಲ್ಲದವನು. ನನ್ನ ಸಂಬಂಧದಿಂದ ಅವನನ್ನು ಕೆಡಿಸಲಾರೆ. ಆದುದರಿಂದ ಅವನನ್ನು ನಾನು ನೆನೆಸಿ ಕೆಡಿಸುವು ದಿಲ್ಲ" ವೆಂದು ಆಳ್ವಾರ್ ರವರು ಭಗವಂತನನ್ನಗಲುವ ಯೋಚನೆ ಮಾಡಲು, ಅವನು "ಆಳ್ವಾರ್ ರವರೇ ನೀವು ನನ್ನನ್ನು ಬಿಡಬೇಡಿ. ನಿಮ್ಮ ದೋಷವೆಲ್ಲಾ ನನಗೆ ಭೋಗ್ಯವಾಗಿವೆ." ಎಂದು ಹೇಳಿ ತನ್ನೊಡನೆ ಸೇರಿಸಿಕೊಳ್ಳುತ್ತಾನೆ.

परिवदिल १. ६.

परत्वभजनीयतासुलभतादिपूर्णोऽप्यसौ
भवेद्यदि दुरर्चनः कथमिवायमाश्रीयताम् ।
इतीह न हि चिन्त्यतां दलसुमाम्बुधूमैरयम्
वशो भवति दर्शितैस्सकलकामपूर्णोग्रतः ॥२४॥

ಭಗವಂತನು ಸರ್ವಸ್ಮಾತ್ಪರನಾದುದರಿಂದಲೇ ಪ್ರಾಪ್ಯನೂ ಆಹುದು. ಭಕ್ತಿಪ್ರಸತ್ತಿಗಳಿಂದ ಆಶ್ರಯಣೀಯನೂ ಆಹುದು. ಸುಲಭನೂ ಆಹುದು. ನಮ್ಮ ಅಪರಾಧಗಳನ್ನೆಲ್ಲಾ ಮನ್ನಿಸತಕ್ಕವನೂ ಆಹುದು. ಸೌಶೀಲ್ಯಗುಣವುಳ್ಳವನೂ ಅಹುದು. ಆದರೂ ಅವನನ್ನು ಆರಾಧಿಸಿ ಮೆಚ್ಚಿಸುವುದಕ್ಕಾಗುತ್ತದೆಯೇ? ಎಂದು ಯೋಚಿಸಬೇಡಿ. ಒಂದು ದಳ ತುಳಸೀ; ಅಥವಾ ಯಾವುದಾದರೂ ಒಂದು ಹೂವು; ಒಂದು ತಂಬಿಗೆ ತಣ್ಣೀರು; ಸ್ವಲ್ಪ ಹೊಗೆ ಇವುಗಳಿಂದಲೇ ತೃಪ್ತನಾಗುತ್ತಾನೆ. ಅವನು ಅವಾಪ್ತ ಸಮಸ್ತ ಕಾಮನಾದುದರಿಂದಲೂ, ಅಲ್ಪಸಂತೋಷಿಯಾದುದರಿಂದಲೂ, ಅವನನ್ನು ಸುಖವಾಗಿ ಆರಾಧಿಸಬಹುದು. ಎಂದು ಭಗವಂತನ ಸುಖಾರಾಧ್ಯತ್ವವನ್ನು ಎಲ್ಲರಿಗೂ ತಿಳಿಸುವರು.

पिरवित्तुयरर १. ७.

श्रियोभर्ता शेषीशुभगुणगणैर्मञ्जुलतमः
महानन्दस्थानं श्रितजनमहानन्दजनकः ।
अतोविष्णोस्सेवापय इव सितायुक्तमतुलम्
सुखं तस्मात्सर्वे भजत हरिमित्याह शठजित् ॥२५॥

तस्मादैश्वर्यकैवल्ये त्यक्त्वा नश्वरदभ्रके ।
नित्यापरिच्छिन्नसुखस्सेव्यो नारायणो हि वः ॥२६॥

ಭಗವಂತನು ಶ್ರಿಯಃಪತಿ; ಸರ್ವಶೇಷಿ; ಮಂಗಳ ಗುಣಾಕರನು; ಆನಂದಸ್ವರೂಪನು; ಆಶ್ರಿತರಿಗೆ ತನ್ನ ಆನಂದಕ್ಕೆ ಸಮನಾದ ಆನಂದವನ್ನು ಕೊಡತಕ್ಕವನು. ಆದುದರಿಂದಲೇ ಸಕ್ಕರೆ ಸೇರಿಸಿದ ಹಾಲಿನಂತೆ ಬಹಳ ಭೋಗ್ಯನಾದವನು. ಆದಕಾರಣ ಐಶ್ವರ್ಯ ಕೈವಲ್ಯಗಳನ್ನು ನಶ್ವರವೆಂದೂ ಅಲ್ಪವೆಂದೂ ತಿಳಿದು ಅವುಗಳನ್ನು ತ್ಯಜಿಸಿ ಭಗವಂತನನ್ನೇ ಭಜಿಸಿರಿ. ಎಂದು ಉಪದೇಶಿಸುತ್ತಾರೆ.

ओडुम्बुळ्ळेरि १. ८.

त्रिविधकरणैर्भिन्नाकारा नराः कुटिलास्स्मृताः
तदनुसरणाद्देव श्श्रीमान्भवेदृजुरेव नः।
त्रिविधकरणैरेकाकारो ऋजुर्हरिरुच्यते
स इह दशके विष्णोर्दिव्यो गुणः प्रतिपाद्यते ॥२७॥

ಜನಗಳೆಲ್ಲರೂ ಮನೋವಾಕ್ಕಾಯಗಳಲ್ಲಿ ಬೇರೆ ಬೇರೆ ವಿಧವಾಗಿದ್ದಾರೆ. ಭಗವಂತನು ಅಂತಹವರೊಡನೆ ತ್ರಿವಿಧ ಕರಣಗಳಿಂದಲೂ ಏಕರೂಪನಾಗಿ ಕಲೆತಿರುತ್ತಾನೆಂದು ಅವನ ಆರ್ಜವಗುಣವನ್ನು ಅನುಭವಿಸಿ ಹೇಳುವರು.

इवैयुमवैयुं १. ९.

सर्वेन्द्रियैरवयवैश्च यथेच्छमेषः
संश्लेषमाप्य पुरुषेण परेण हृष्यन्।
एकैकधा ह्यनुभवन्ति सुदर्शनाद्या-
स्तं सर्वधा ह्यनुभवाम्यहमित्यवोचत् ॥२८॥

ಭಗವಂತನು ಆಳ್ವಾರ್ ರವರಿಗೆ ಸ್ವಲ್ಪ ದೂರದಲ್ಲಿದ್ದು ಮೆಲ್ಲಮೆಲ್ಲನೆ ಹತ್ತಿರಕ್ಕೆ ಬಂದು ಮೆಲ್ಲನೆ ತೊಡೆಯ ಮೇಲೆ ಕುಳಿತು, ತೋಳುಗಳ ಮೇಲೇರಿ ನಾಲಿಗೆಯಲ್ಲೂ ಹಣೆಯಲ್ಲೂ ತಲೆಯ ಮೇಲೂ ಕುಳಿತುಕೊಂಡದ್ದನ್ನು ಅನುಭವಿಸಿ ಹೇಳಿದರು.

पोरुमानीळ् १. १०.

सर्वांगसंश्लेषसुखं महच्च स्वस्मिंश्च तद्धेतुदरिद्रतां च ।
सन्यग्विचिन्त्येत्थमुदाजहार निर्हेतुकैवास्य दया मुरारेः ॥२९॥

ಭಗವಂತನು ತನ್ನ ಸರ್ವಾಂಗಸಂಶ್ಲೇಷವನ್ನು ನನಗೆ ಕೊಟ್ಟದಕ್ಕೆ ನನ್ನಲ್ಲಿ ಯಾವಕಾರಣವೂ ಕಾಣಲಿಲ್ಲ. ಮತ್ತೇನೆಂದರೆ ಏನೂಕಾರಣವಿಲ್ಲದೆಯೇ ತನ್ನ ನಿರ್ಹೇತುಕವಾದ ಸ್ವಾಭಾವಿಕ ಕೃಪೆಯಿಂದಲೇ ಹೀಗೆ ಮಾಡಿದನೆಂದು ಅವನ ಕೃಪೆಯ ನಿರ್ಹೇತುಕತ್ವವನ್ನು ಎಲ್ಲರಿಗೂ ತಿಳಿಸುವರು.

वायुन्तिरैयुहळुं २. १.

परत्वं सौलभ्यं वपुषि च गुणान्वीक्ष्य निखिलान्
मनोदृष्ट्या बाह्यानुभवकुतुकीनालभततम् ।
ततः खेदात्तस्मात्पतिविरहिणी कापि तरुणी
विवेशोद्यानं तद्रणरणकतस्तत्र च सतः ॥३०॥

बककुररसमुद्रान् वातमेघेन्दुलेखा-
स्तिमिरजलधिकुल्या दीपकीलान्विलोक्य ।
स्वमिव हरिवियुक्तान्मन्यमानातुशोकात्
त्यज मम सविधं त्वं मेति कृष्णं ययाचे ॥३१॥

ಭಗವಂತನ ಪರತ್ವಸೌಲಭ್ಯಗಳನ್ನೂ ದಿವ್ಯಮಂಗಳ ವಿಗ್ರಹಗಳನ್ನೂ ಮಾನಸಿಕವಾಗಿ ಅನುಭವಿಸಿ ಬಾಹ್ಯಸಂಶ್ಲೇಷ ದೊರೆಯದೆ ದುಃಖಾತಿಶಯ ದಿಂದ ಒಬ್ಬ ವಿರಹಿಣಿಯಾಗಿ ಸಂಶ್ಲೇಷತ್ವರೆಯಿಂದ ಉದ್ಯಾನಕ್ಕೆ ತೆರಳಲು ಅಲ್ಲಿರುವ ಕೊಕ್ಕರೆ, ಕುರರಪಕ್ಷಿ, ಸಮುದ್ರ, ಗಾಳಿ, ಮೋಡ, ಚಂದ್ರಕಲೆ, ಅಂಧಕಾರ, ಉಪ್ಪಿನ ಕಾಲುವೆ, ದೀಪಜ್ವಾಲೆ ಇವುಗಳನ್ನೆಲ್ಲಾ ನೋಡಿ ತನ್ನಂತೆ

ಯೇ ಇವೂ ಭಗವಂತನನ್ನಗಲಿವೆಯೆಂದು ತಿಳಿದು, ಕೃಷ್ಣಾ! ನನ್ನೊಡೆಯನ್ನು ಬಿಟ್ಟಗಲಬೇಡವೆಂದು ಮೊರೆಯಿಟ್ಟರು.

तिण्णन्वीडु २. २.

गुणवद्वस्तुवियोगस्तनुते तापं प्रसिद्धमिदम् ।
यत्किंचित्सुखहेतोर्विश्लेषो वस्तुनश्च तनुते तम् ॥३२॥

एवं स्थिते गुणानां कल्याणानां निधेरसंख्यानां ।
स्मृतिमात्रादानन्दं ददतोऽमितमीश्वरस्य किमु वाच्यम् ॥३३॥

स्वविश्लेषाद्दुःखं महदनुभवन्तं शठरिपुं
विलोक्यायं श्रीशः परमकृपया दर्शनमदात् ।
ततो हर्षाद्दुःखं क्वचिदपि विलीनं समवयन्
निदानं श्रीशेऽस्मिन् गुण इति तथैवेश्वर इति ॥३४॥

निश्चित्यैवं कारिसूनुर्जनेभ्यस्सर्वेशत्वं बोधयत्यत्रमौनी ।
आदावुक्तं तस्य सर्वेश्वरत्वं भूयश्चोक्तौ पौनरुक्त्यं भवेन्नो ॥३५॥

परत्वे परत्वं श्रुतिच्छाययोक्तं पुरस्तात्स्वदृष्टं शठद्वेषिणा हि ।
इदानीं पुराणोक्तरीत्यावतारे परत्वं परेषामुपादिक्षदत्र ॥३६॥

तस्यैकं गुणमादरेण सततं सम्भावयन्नप्ययं
नोतृप्योत्सतथैनमाकलयितुं शक्तो हि सर्वेश्वरः ।
किंचेशो पुनरर्थितैत्र न भवेद्दोषोऽत एकं सदो-
पास्यं प्राप्यमपीति बोधयति नस्सर्वश्रुतीनां शिरः ॥३७॥

ಅಲ್ಪಸುಖಕ್ಕೆ ಕಾರಣವಾದ ವಸ್ತುವನ್ನಗಲಿದರೆ ಅದಕ್ಕೆ ತಕ್ಕ ದುಃಖ.

ಹೀಗಿರಲು ಸಮಸ್ತ ಕಲ್ಯಾಣಗುಣ ಪರಿಪೂರ್ಣನಾಗಿಯೂ, ನೆನೆಸಿದ ಮಾತ್ರಕ್ಕೇ ಅಮಿತಾನಂದವನ್ನೂ ಕೊಡತಕ್ಕ ಭಗವಂತನ ವಿಷಯ ಹೇಳಬೇಕಾದ್ದೇ ಇಲ್ಲ. ಆಳ್ವಾರ್ ರವರ ದುಃಖವನ್ನು ನೋಡಲಾರದೆ ಭಗವಂತನು ದರ್ಶನ ಕೊಟ್ಟ. ದುಃಖವನ್ನೇ ಕಾಣದವರಂತೆ ಆನಂದಿತರಾಗಿ ಅವನ ಸ್ವಭಾವವೇ ಹೀಗೆಂದೂ ಅವನು ಸರ್ವೇಶ್ವರನೆಂದೂ ಪರೋಪದೇಶ ಮಾಡುತ್ತಾರೆ. "ಉಯರ್ವರ" ಎಂಬಲ್ಲಿ ಶ್ರುತಿಚ್ಛಾಯೆಯನ್ನನುಸರಿಸಿ ಪರತ್ವೇ ಪರತ್ವವನ್ನು ಹೇಳಿದರು. ಇಲ್ಲಿ ಪುರಾಣಗಳ ರೀತಿಯಲ್ಲಿ ಅವತಾರದಲ್ಲಿ ಪರತ್ವವನ್ನು ಉಪದೇಶ ಮಾಡುತ್ತಾರೆ. ಭಗವಂತನ ಒಂದೇ ಒಂದು ಗುಣವನ್ನು ತೆಗೆದು ಕೊಂಡರೂ ಅಪರಿಚ್ಛಿನ್ನವಾಗಿಯೂ ನವಂ ನವವಾಗಿಯೂ ಇರುವುದರಿಂದ ಪುನರುಕ್ತಿ ದೋಷ ತಾಗಲಾರದು. ಆದ್ದರಿಂದಲೇ ಅದೊಂದೇ ವಸ್ತು ಉಪಾಸ್ಯವೂ ಪ್ರಾಪ್ಯವೂ ಆಗಿದೆಯೆಂದು ಉಪನಿಷತ್ತುಗಳು ಬೋಧಿಸುವುವು.

ऊनिल्वाळियिरे २. ३.

आद्ये द्वितीयशतकस्य वियोगदु:ख
कारेस्सुतस्य भगवानवलोक्य खिन्नः ।
तद्धर्तुकाम उपगम्य ददौ सुभोगं
तस्य प्रकारमिह बोधयति स्वचित्तम् ॥३८॥

वियोगदु:खानुभवे सहायानाकांक्षतायं किल तिर्यगादीन् ।
संश्लेषमोदानुभवे सहायानाकांक्षते सूरिजनानिदानीं ॥३९॥

मध्ये प्रसङ्गादीशस्य परत्वं प्रतिपादितम् ।
अन्वयाद्व्यतिरेकाच्च द्वितीये दशके पुनः ॥४०॥

೨ ನೇ ಶತಕ ೧ ನೇ ದಶಕದಲ್ಲಿ ಭಗವಂತನು ಆಳ್ವಾರ್ ರವರ ವಿಶ್ಲೇಷ ವ್ಯಸನವನ್ನು ಕಂಡು ಸಹಿಸಲಾರದೆ ಸಂಶ್ಲೇಷಸೌಖ್ಯವನ್ನು ದಯಪಾಲಿಸಿದ

ಕ್ರಮವನ್ನು ತಮ್ಮ ಮನಸ್ಸಿಗೆ ತಿಳಿಸುವರು. ತಾವು ವಿಯೋಗ ದುಃಖವನ್ನನು ಭವಿಸುವಾಗ ತಿರ್ಯಕ್ಕುಗಳನ್ನೆಲ್ಲಾ ಸಹಾಯವಾಗಿ ಅಪೇಕ್ಷಿಸಿದರು. ಈಗ ಆನಂದವನ್ನನುಭವಿಸುವಾಗ ನಿತ್ಯಸೂರಿಗಳನ್ನೆಲ್ಲಾ ಸಹಾಯವಾಗಿ ಅಪೇಕ್ಷಿ ಸುವರು. ಇವೆರಡರ ಮಧ್ಯೆ ಇರುವ ದಶಕದಲ್ಲಿ ಪ್ರಸಂಗಾತ್ ಅನ್ಯವ್ಯಾವ್ಯ ರೇಕಗಳಿಂದ ಭಗವಂತನ ಪರತ್ವವನ್ನು ನಿರೂಪಿಸಿದರು.

आडियाडि २. ४.

सकलविधरसानां भोग्यतां तत्र भोक्तुम्
भगवति सहकारा नत्र लोके विचिन्वन् ।
अलभत न तु तस्मान्नित्यसूरीन् सहायान्
अकलित भवगन्धान् कारिसूनुर्ययाचे ॥४१॥

प्रकृतिनिगलितत्वात्तत्क्षणं तानलब्ध्वा
मितिरहितविषादात्कापि भूत्वा वियुक्ता ।
निगदितुमपि वाचा स्वामवस्थामशक्ता
कथयति भगवन्तं मातृवाचातिदैन्यात् ॥४२॥

विभवालाभात्प्रथमः प्रतिकृत्यनवाप्तितस्तदनु ।
विश्लेषस्तु तृतीयस्तदीयगोष्ठ्या अलाभाद्धि ॥४३॥

"ಸರ್ವಗಂಧಸ್ಸರ್ವರಸಃ" ಎಂಬಂತೆ ಭಗವಂತನು ಸರ್ವರಸನು. ಲೋಕದಲ್ಲಿರುವ ಎಲ್ಲಾ ರಸಗಳಲ್ಲೂ ಯಾವ ಯಾವ ಭೋಗ್ಯತೆ ಇದೆಯೋ ಅದನ್ನೆಲ್ಲಾ ಭಗವಂತನಲ್ಲಿ ಅನುಭವಿಸಲು, ಅಪಾರವಾದ ನೀರಿನ ಪ್ರವಾಹದಲ್ಲಿ ಒಬ್ಬರನ್ನೊಬ್ಬರು ಹಿಡಿದುಕೊಂಡು ದಾಟುವಂತೆ, ಸಹಾಯಕ್ಕೆ ಈ ಲೀಲಾ ವಿಭೂತಿಯಲ್ಲಿ ಯಾರಾದರೂ ಸಿಗುವರೇ? ಎಂದು ನೋಡಿದರು. ಯಾರೂ

ಸಿಗಲಿಲ್ಲ. ನಿತ್ಯಸೂರಿಗಳನ್ನು ಸಹಾಯವಾಗಿ ಅಪೇಕ್ಷಿಸಿದರು. ಪ್ರಕೃತಿ ಸಂಬಂಧದಿಂದ ಆ ಕ್ಷಣವೇ ಆ ನಿತ್ಯಸೂರಿಗಳು ಸಹಾಯಕ್ಕೆ ದೊರಕದಿರಲು ಮಿತಿಮೀರಿದ ದುಃಖದಿಂದ ವಿರಹಿಣಿಯಾಗಿ ತನ್ನ ಕಷ್ಟವನ್ನು ತನ್ನ ಬಾಯಿಂದಲೂ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ. ಇಂತಹ ಮಗಳ ಸ್ಥಿತಿಯನ್ನು ನೋಡಿ ತಾಯಿಯು ಪರಿತಪಿಸುವುದನ್ನು ಈ ದಶಕದಲ್ಲಿ ಹೇಳುತ್ತಾರೆ. ೧ ನೇ ಶತಕ ೪ ನೇ ದಶಕದಲ್ಲಿ ವಿಭವಾವತಾರದ ವಿಶ್ಲೇಷದಿಂದಲೂ, ೨. ೧ ರಲ್ಲಿ ಅರ್ಚಾವತಾರದ ವಿಶ್ಲೇಷದಿಂದಲೂ, ಇಲ್ಲಿ ಭಾಗವತಗೋಷ್ಠಿಯ ವಿಶ್ಲೇಷದಿಂದಲೂ ಕ್ಲೇಶಪಡುತ್ತಾರೆ.

अन्दामत्तन्बु २. ५.

ग्राहग्रस्तगजेन्द्रदुःखसदृशं दुःखं मुनेर्वीक्ष्य सः
श्रीमान् दिव्यविभूषणैः प्रहरणैर्दिव्याङ्गकैस्सद्गुणैः ।
आरूढो गरुडं समेत्य रभसाल्लज्जावशस्त्वं हरिः
निन्दन् भोजयति स हर्षविवशस्तं वक्ति भोगं मुनिः ॥४४॥

ಮೊಸಳೆಯ ಬಾಯಲ್ಲಿ ಸಿಕ್ಕಿ ನರಳುತ್ತಿದ್ದ ಗಜೇಂದ್ರನಂತೆ ತಾವು ದುಃಖಪಟ್ಟು ಕೂಗಿಕೊಳ್ಳುತ್ತಿರುವುದನ್ನು ಕಂಡು ತಾಳಲಾರದೆ ಭಗವಂತನು ತನ್ನ ದಿವ್ಯಾವಯವಗಳು, ದಿವ್ಯಾಭರಣಗಳು ದಿವ್ಯಾಯುಧಗಳು, ದಿವ್ಯ ಗುಣಗಳೊಂದಿಗೆ ಗರುಡಾರೂಢನಾಗಿ ಬಹುತ್ವರೆಯಿಂದ ಬಂದು, "ಅಯ್ಯೋ! ಹೀಗೆ ಮಾಡಿದೆನಲ್ಲಾ !!" ಎಂದು ನಾಚಿಕೊಂಡು ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಾ ತಮಗೆ ಕೊಟ್ಟ ಅನುಭವವನ್ನು ಆನಂದಪರವಶರಾಗಿ ಹೇಳುವರು.

वैहुन्दा २. ६.

मत्संश्लेषाज्जनिता प्रीतिः कृष्णस्य मस्तकातिगता ।
प्रवहति मत्सम्बन्धिषु न तु मय्येवेति वक्त्यत्र ॥४५॥

चतुर्थे जनितं दुःखं पर्यहार्षीत्स पञ्चमे ।
तत्संश्लेषज आनन्दष्षष्ठे कृष्णस्य कथ्यते ॥४६॥

प्रथमे जनितं दुःखं तृतीये त्वहरद्धरिः ।
तत्र तत्सङ्गजं सौख्यं मुनेरेवेति कीर्तितम् ॥४७॥

मुनेः प्रीतिर्भगवति तदीयाननुधावति ।
प्रीतिर्भगवतश्चापि मुनावन्वेति तच्छ्रितान् ॥४८॥

तत्प्रीतिर्नैव सिध्येत्तु तदीयप्रीतिमन्तरा ।
लोके शास्त्रेऽपि च प्रीतेस्स्वभावोऽयं निगद्यते ॥४९॥

ಭಗವಂತನಿಗೆ ನನ್ನ ಸಂಶ್ಲೇಷದಿಂದುಂಟಾದ ಸಂತೋಷವು ಮೇರೆ ಮೀರಿ ನನ್ನಲ್ಲಿ ಮಾತ್ರವಲ್ಲದೆ ನನ್ನ ಸಂಬಂಧಿ ಸಂಬಂಧಿಗಳೆಲ್ಲರಲ್ಲೂ ಪ್ರವಹಿಸುತ್ತಿದೆ ಯೆಂದು ಹೇಳುತ್ತಾರೆ. ೨. ೪ ರಲ್ಲುಂಟಾದ ಆಳ್ವಾರ್ ರವರ ದುಃಖವನ್ನು ಭಗವಂತನು ೨. ೫ ರಲ್ಲಿ ಹೋಗಲಾಡಿಸಿದನು. ಇಲ್ಲಿ ೨. ೬ ರಲ್ಲಿ ಆಳ್ವಾರ್ ರವರ ಸಂಶ್ಲೇಷದಿಂದ ಭಗವಂತನಿಗುಂಟಾದ ಆನಂದವನ್ನು ಹೇಳುತ್ತಾರೆ. ೨. ೧ ರಲ್ಲಿ ಆಳ್ವಾರ್ ರವರಿಗುಂಟಾದ ದುಃಖವನ್ನು ೨. ೩ ರಲ್ಲಿ ನಿವೃತ್ತಿ ಮಾಡಿದನು. ಅಲ್ಲಿ ಭಗವಂತನ ಸಂಶ್ಲೇಷದಿಂದ ಆಳ್ವಾರ್ ರವರಿಗುಂಟಾದ ಆನಂದವು ಹೇಳಲ್ಪಡುತ್ತೆ. ಆಳ್ವಾರ್ ರವರಿಗೆ ಭಗವಂತನಲ್ಲಿರುವ ಪ್ರೀತಿ ಭಾಗವತರಲ್ಲಿ ನೆಲೆ ನಿಲ್ಲುತ್ತೆ. ಭಗವಂತನಿಗೆ ಆಳ್ವಾರ್ ರವರಲ್ಲಿರುವ ಪ್ರೀತಿ ಅವರ ಸಂಬಂಧಿ ಸಂಬಂಧಿಗಳಲ್ಲೂ ಪ್ರವಹಿಸುವುದು. ಒಬ್ಬರಲ್ಲಿರುವ ಪ್ರೀತಿ ಯು ಅವರ ಸಂಬಂಧಿ ಸಂಬಂಧಿಗಳಲ್ಲಿ ಪ್ರವಹಿಸಿದರೇನೇ ನಿಜವಾದ ಪ್ರೀತಿ ಯೆನಿಸಿಕೊಳ್ಳುವುದು. ಇದು ಲೋಕ ಶಾಸ್ತ್ರಗಳೆರಡರಲ್ಲೂ ಸಿದ್ಧವಾದ ವಿಷಯ ವಲ್ಲವೇ ?

केशवन्तमर् २. ७.

शठारातौ प्रीतिर्भगवत इयत्ता विरहिता
नदीवोत्कूला तन्मुनिचरणसम्बन्धिजनतां ।
सुदूरादभ्येतीत्यकथददथ द्वादशहरेः
समाख्यास्तद्दास्यस्थिरभवनसिद्ध्यै मुनिरयम् ॥५०॥

ಭಗವಂತನ ಎಲ್ಲೆ ಮೀರಿದ ಪ್ರೀತಿಯು ನನ್ನಲ್ಲಿ ಮಾತ್ರವಲ್ಲದೆ ದಡವನ್ನು ಮೀರಿ ಬರುವ ನದಿಯಂತೆ ನನ್ನ ಸಂಬಂಧಿ ಸಂಬಂಧಿಗಳೆಲ್ಲರಲ್ಲೂ ಇನ್ನೂ ಮುಂದೆ ಮುಂದೆಯೂ ಪ್ರವಹಿಸುತ್ತಿದೆ. ಎಂದು ಹೇಳಿ ಭಗವಂತನ ದಾಸ್ಯ ಸಿದ್ಧಿಗಾಗಿ ಅವನ ಕೇಶವಾದಿ ದ್ವಾದಶ ನಾಮಗಳನ್ನು ಕೊಂಡಾಡುತ್ತಾರೆ.

अणैवदु २. ८.

ज्ञात्वा शठारिस्स्वजनेषु संगं कृष्णस्य लोकं स्वजनं विधातुं ।
मोक्षप्रदत्वं ह्युपदिश्य तस्य भजन्तु सर्वे तमिति ब्रवीति ॥५१॥

अद्वेषं चाभिमुख्यं रुचिमपि जनयित्वात्मनि श्रीधरो मे
मय्यन्यव्यापृतेऽपि स्वयमजहदिमं मां मदीयेषु संगं ।
कृत्वा व्यामुग्धचित्तः परममपि पदं दित्सति श्रीसहायः
तस्माद्यूयं च सर्वे भजत हरिमिति प्राह सर्वान् शठारिः ॥५२॥

उपदेशो तु निरर्थे तेषु प्रवणेषु विषयेषु
स्वानुभवभ्रंशवशात्खिद्यन्नित्येव चिन्तयामास ॥५३॥

इमे तु सर्वे प्रकृतौ निबद्धा अहं च तेष्वन्यतमस्तथापि ।
इयन्तु तस्यैव कृपा यदेनानबोधयं हर्षमिति प्रपेदे ॥५४॥

ಹೀಗೆ ಭಗವಂತನ ಪ್ರೀತಿಯು ಸಂಬಂಧಿ ಸಂಬಂಧಿಗಳಲ್ಲಿಯೂ ಪ್ರವಹಿಸುವುದನ್ನು ನೋಡಿ ಆಳ್ವಾರ್ ರವರು ಈ ಪ್ರಪಂಚವನ್ನೇ ತನ್ನವರನ್ನಾಗಿಸಿಕೊಳ್ಳಲು, "ನನಗೆ ಅದ್ವೇಷ, ಆಭಿಮುಖ್ಯ, ರುಚಿ ಮುಂತಾದ್ದನ್ನೆಲ್ಲಾ ತಾನೇ ಉಂಟುಮಾಡಿ, ಈಗ ನಾನು ವಿಷಯಾಂತರ ಪ್ರವಣನಾಗಿದ್ದರೂ ತಾನಾಗಿ ಮೇಲೆ ಬಿದ್ದು, ನನ್ನಲ್ಲೂ ನನ್ನವರಲ್ಲೂ ಪ್ರೀತಿಮಾಡಿ ಮುಗ್ಧಚಿತ್ತನಾಗಿ ಲಕ್ಷ್ಮೀಸಮೇತನಾಗಿ ಬಂದು ನನಗೆ ಪರಮಪದವನ್ನು ಕೊಡಲು ಹಾತೊರೆಯುತ್ತಿದಾನೆ. ಅವನು ಮೋಕ್ಷಪ್ರದ. ಆದ್ದರಿಂದ ಎಲ್ಲರೂ ಅವನನ್ನೇ ಆಶ್ರಯಿಸಿರಿ." ಎಂದು ಪರೋಪದೇಶ ಮಾಡಿದರು. ಅವರೆಲ್ಲಾ ವಿಷಯಾಂತರ ಪ್ರವಣರಾದ್ದರಿಂದ ಇವರ ಉಪದೇಶ ವ್ಯರ್ಥವಾಯಿತು. ನನ್ನ ಅನುಭವವೂ ಹೋಯಿತಲ್ಲಾ ಎಂದು ಶೋಕಿಸಿದರು. ನಾನೂ ಇವರಂತೆಯೇ ಪ್ರಕೃತಿ ಬದ್ಧನು. ಹೀಗಿರಲು ನನ್ನನ್ನು ಮಾತ್ರ ಇವರಿಗೆ ಉಪದೇಶ ಮಾಡುವ ಸ್ಥಿತಿಯಲ್ಲಿಟ್ಟು ಅನುಗ್ರಹಿಸಿದನಲ್ಲಾ! ಏನುಕೃಪೆ!! ಎಂದು ಹಿರಿಹಿಗ್ಗುತ್ತಾರೆ.

एम्मावीडु २. ९.

तत्सूरिवश्यं पदमस्य सूरेः प्रदर्श्य च प्राह गृहाण चेति ।
यद्यस्मदर्थं प्रददासि तन्मे मा भूत्त्वदर्थं यदि तन्ममास्तु ॥५५॥

कारिसूनुरिति प्राप्ये निश्चकर्ष परार्थतां ।
द्वितीयशतकस्यास्य नवमे दशके मुनिः ॥५६॥

ಭಗವಂತನು ಆಳ್ವಾರ್ ರವರೇ! ಇಗೋ!! ಪರಮಪದ!!! ನೋಡಿ ನಿಮಗಾಗಿ ವಿಾಸಲು; ಕೊಡುವೆನು ಎಂದ. "ಸರಿ; ಒಳ್ಳೆಯದು; ನಿನ್ನ ಸಂತೋಷಾರ್ಥವಾಗಿ ಕೊಟ್ಟರೆ – ಬೇಕು. ನನಗಾಗಿ ಎಂದು ಕೊಟ್ಟರೆ ಅದು ಬೇಡಲೇ ಬೇಡ." ಎಂದು ಹೇಳಿ ಭಗವಂತನ ಮುಖೋಲ್ಲಾಸಕ್ಕಾಗಿ ಆದರೆ ಆದೀಗ ಪುರುಷಾರ್ಥವೆಂದು ಪ್ರಾಪ್ಯನಿಷ್ಕರ್ಷವನ್ನು ಮಾಡಿದರು.

किळरोळि २. १०.

प्राप्यं निष्कृष्य चैवं मुनिमतिरभसात्प्रार्थयानं सपर्यां
देहेनैवामुनेति प्रविदितहृदयः प्राह शौरिश्शठारिं ।
त्वत्सेवायै विविक्तं स्थलमिदमभजं भोग्यभूतं वनाद्रेः
प्रस्थं सेवस्व मां त्वं भवदभिलषितं पूरितं स्याद्यथेति ॥५७॥

तच्छ्रुत्वा तं वनाद्रिं तदधिपमथ तत्पार्श्वगं शैलमेवा-
थाध्वानं तस्य चाद्रेर्गमनमतिमथो भावयन्तो भवन्तः ।
सिंहाद्रिस्वामिपादौ परिचरितुमलं सम्भवन्तीति सूरिः
सर्वेषामानृशंस्यादुपदिशति हितं श्रीनगर्याः पतिर्नः ॥५८॥

ಈ ರೀತಿ ಪ್ರಾಪ್ಯ ನಿಷ್ಕರ್ಷವನ್ನು ಮಾಡಿ ಈ ಶರೀರದೊಡನೆಯೇ ಕೈಂಕರ್ಯವನ್ನು ಅತಿತ್ವರೆಯಿಂದ ಪ್ರಾರ್ಥಿಸುವ ಆಳ್ವಾರ್‌ರವರ ಹೃದಯವನ್ನು ತಿಳಿದು, ಸರ್ವೇಶ್ವರನು "ನೀವು ಸರ್ವಕೈಂಕರ್ಯವನ್ನು ಮಾಡುವುದಕ್ಕಾಗಿ ಏಕಾಂತವಾದ ಈ ವನಾದ್ರಿ (ತಿರುಮಾಲಿರುಂ ಶೋಲೈ ಮಲೈ) ಯಲ್ಲಿ ನಿಂತಿದೇನೆ. ನಿಮ್ಮ ಇಷ್ಟಪೂರ್ತಿ ಮಾಡಿಕೊಳ್ಳಿ." ಎಂದ. ಅದನ್ನು ಕೇಳಿ ಆಳ್ವಾರ್‌ರವರು "ಆ ವನಾದ್ರಿ, ಅಲ್ಲಿಯ ಭಗವಂತ, ಪಕ್ಕದ ಬೆಟ್ಟಗಳು, ವನಾದ್ರಿಯ ದಾರಿ, ವನಾದ್ರಿಗೆ ಯಾತ್ರೆ, ಇವುಗಳನ್ನೆಲ್ಲಾ ನೀವು ಭಾವಿಸಿರಿ. ಆ ವನಾದ್ರಿನಾಥನ (ಸುಂದರಬಾಹುವಿನ) ಪಾದಸೇವೆ ಮಾಡಲು ಸಮರ್ಥರಾಗುವಿರಿ." ಎಂದು ಪರೋಪದೇಶ ಮಾಡಿದರು.

मुडिच्चोदि ३. १.

वनगिरिमनुभूय श्रीशठारिः प्रहृष्यन्
गिरिपरिसररूढं कल्पवृक्षं सुशाखं ।

कुसुमफलसुपूर्णं वीक्ष्य तस्यांगभूषा-
सुघटिततरतां तामन्वभूद्ज्ञानदृष्ट्या ॥५९॥

अतिशयितज्ञानानामपि देवानां सुदुर्ज्ञेयः ।
वृणुतेयं तेनैष द्रष्टव्यस्सर्वथाचेति ॥६०॥

ವನಾದ್ರಿಯನ್ನನುಭವಿಸಿ ಆನಂದಿಸಿ ವನಗಿರಿಯಲ್ಲಿ ಬೆಳೆದಿರುವ ಕಲ್ಪವೃಕ್ಷದಂತೆ ಸರ್ವಫಲಪ್ರದನಾದ ಆ ಸುಂದರಬಾಹುವನ್ನು ಮಾನಸಿಕವಾಗಿ ಅನುಭವಿಸಿ, ಅವನ ದಿವ್ಯಾವಯವಗಳಿಗೂ ದಿವ್ಯಾಭರಣಗಳಿಗೂ ಇರುವ ಅನ್ಯಾದೃಶವಾದ ಹೊಂದಾಣಿಕೆಯನ್ನು ಅನುಭವಿಸುತ್ತಾರೆ. ಜ್ಞಾನ ಶಕ್ತಿಗಳಿಂದ ಮೇಲಾದ ದೇವತೆಗಳಿಗೂ ಕೂಡ ಕಾಣಲರಿಯನಾದ ಭಗವಂತನು ತಾನಾಗಿ ಇಷ್ಟಪಟ್ಟು ಯಾವನಿಗೆ ಕಾಣಿಸಿಕೊಳ್ಳುವನೋ ಅವನು ಅಲ್ಪನಾಗಿ, ಅಜ್ಞನಾಗಿ ಅಶಕ್ತನಾಗಿದ್ದರೂ ಆ ಭಗವಂತನನ್ನು ನೋಡಬಹುದೇ ಹೊರತು ಎಷ್ಟೇ ಮಿಗಿಲಾದ ಜ್ಞಾನಶಕ್ತಿಗಳಿದ್ದರೂ ಸ್ವಶಕ್ತಿಯಿಂದ ಅವನನ್ನು ನೋಡಲಾಗುವುದಿಲ್ಲ. ಎಂದು "ನಾಯಮಾತ್ಮಾ" ಎಂಬ ಶ್ರುತಿಯ ತಾತ್ಪರ್ಯವನ್ನು ವಿವರಿಸಿದರು.

मुन्नीर् ज्ञालं ३. २.

शठारिस्सौन्दर्यं वनगिरिपतेर्यवदपि त-
द्यथावद्ज्ञातुं नाशकदपि ततः खिन्नहृदयः ।
मदीयानां दोषो भवति करणानामिति जगौ
हरिस्तन्नेत्युक्त्वा विषयगत एवेति जगदे ॥६१॥

कदाप्यस्पृष्टसंसारास्सूरयोऽप्येवमेव हि ।
व्यामुह्यन्ति न ते दोष इति देवस्समादधे ॥६२॥

ವನಾದ್ರಿನಾಥನ ಸೌಂದರ್ಯವನ್ನು ಪೂರ್ತಿಯಾಗಿ ತಿಳಿಯಲೂ, ಅನುಭವಿಸಲೂ ಆಗದೆ ಇದು ನನ್ನ ಇಂದ್ರಿಯಗಳ ದೋಷವೆಂದು ದುಃಖಿಸಿದರು. ಆಗ ಭಗವಂತನು "ಆಳ್ವಾರ್ ರವರೇ! ಇದು ಕರಣಗತವಾದ ದೋಷವಲ್ಲ. ವಿಷಯಗತವಾದದ್ದು. ನಿತ್ಯಸೂರಿಗಳೂ ಕೂಡ ಹೀಗೆಯೇ ನನ್ನನ್ನು ಪೂರ್ಣವಾಗಿ ಅನುಭವಿಸಲಾರರು. ವಸ್ತು ಅಪರಿಚ್ಛಿನ್ನವಾದದ್ದರಿಂದ ಇದು ನಿಮ್ಮ ದೋಷವಲ್ಲ" ವೆಂದು ಸಮಾಧಾನ ಹೇಳಿದನು.

ओकिविल् कालं ३. ३.

सृष्ट्यादिव्यापृतैस्स्वैरवतरणमुखैश्चेष्टितैस्तत्र दिव्यैः
एवं रूपैरुपायैर्वशयितुमिह मां पर्यकार्षीत्प्रयत्नान् ।
भ्रष्टस्सर्वेभ्य एभ्यः प्रकृतिनिगरितः किं नु कुर्यां सपर्यां
नष्टोऽहं सर्वथेति व्यलपदतिशुचा कारिसूनुश्शठारिः ॥६२॥

अत्राहं वेङ्कटाद्रौ तव सकलविधं किंकरत्वं ग्रहीतुं
पूर्वं सिद्धोऽस्मि सेवामिह मम तनुते नित्यवर्गोपि नित्यं ।
तस्मादागत्य सेवामिह कुरु लषितामित्यवोचन्मुरारिः
तच्छ्रुत्वा तां ययाचेह्युपधिविरहितां नित्यसिद्धां शठारिः ॥६४॥

देशकालदशाभिश्चानवच्छिन्नामविच्छिदां ।
सेवां सर्वविधां सूरिराचकांक्षे मनोरथैः ॥६५॥

"ಭಗವಂತನು ನನ್ನನ್ನು ವಶಪಡಿಸಿ ಕೊಳ್ಳಲು ಸೃಷ್ಟ್ಯಾದಿಗಳನ್ನೂ ಅವತಾರಾದಿಗಳನ್ನೂ ಅದರಲ್ಲಿಯ ದಿವ್ಯ ಚೇಷ್ಟಿತಗಳನ್ನೂ ಮಾಡಿ, ನೋಡಿದನು. ನಾನು ಇವೆಲ್ಲವನ್ನೂ ತಪ್ಪಿದೆ. ಈ ರೀತಿ ಪ್ರಕೃತಿಬದ್ಧನಾಗಿ ಸರ್ವಥಾ ಕೆಟ್ಟೆನಲ್ಲಾ!" ಎಂದು ಆಳ್ವಾರ್ ರವರು ಬಹಳ ಶೋಕದಿಂದ ಗೋಳಿಟ್ಟರು.

ಅದಕ್ಕೆ ಭಗವಂತನು "ಆಳ್ವಾರ್ ರವರೇ! ನಿಮಗಾಗಿ ನಾನು ಮೊದಲೇ ತಿರುಪತಿ (ವೆಂಕಟಾಚಲ) ಯಲ್ಲಿ ನಿಂತು ಕಾದಿದ್ದೇನೆ. ಅಲ್ಲಿ ಬಂದು ನಿಮಗೆ ಆಶೆಯಾದ ಎಲ್ಲಾ ವಿಧವಾದ ಕೈಂಕರ್ಯಗಳನ್ನೂ ಮಾಡಿ." ಎಂದನು. ಆಗ ಇವರು ಚೇತನನಿಗೆ ನಿನ್ನ ನಿತ್ಯ ಕೈಂಕರ್ಯವು ಸ್ವರೂಪಸಿದ್ಧವಾದುದು. ಆದ್ದರಿಂದ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲೂ ಸ್ವಲ್ಪವೂ ಬಿಡುವಿಲ್ಲದಂತೆ ಸರ್ವವಿಧ ಕೈಂಕರ್ಯಗಳನ್ನೂ ನಿನಗೆ ಮಾಡಬೇಕೆಂದು ಪ್ರಾರ್ಥಿಸಿದರು.

पुहलुनल् ३. ४.

सर्वावस्थोचिताशेषशेषवृत्तिरतौ मुनौ ।
तस्यानुकूलं सर्वात्मभावं प्रादर्शयद्धरिः ॥६६॥

एकस्यां हारयष्टौ विविधमणिवरान्योजयन्पूरुषो यः
तद्वत्सोऽयं शठारिर्हरिगुणतनुभूत्यायुधालंक्रियाश्च ।
देवीस्सूरीन् पदं तत्सकलमपि समं योजयित्वानुभूय
स्वान्तस्सन्तोषपोषं कथयति वचसा स्वैरसम्मूर्छितेन ॥६७॥

ಇವರು ಪ್ರಾರ್ಥಿಸಿದಂತೆ ಸರ್ವವಿಧಕೈಂಕರ್ಯಕ್ಕೂ ಅನುಕೂಲವಾಗುವಂತೆ ಭಗವಂತನು ತನ್ನ ಸರ್ವಾತ್ಮಕತ್ವವನ್ನು ತೋರಿಸಿಕೊಟ್ಟ. ಆಗ ಇವರು ನಾನಾವಿಧವಾದ ಶ್ರೇಷ್ಠರತ್ನಗಳನ್ನು ಒಂದೇ ಸರದಲ್ಲಿ ಅಚ್ಚುಕಟ್ಟಾಗಿ ಚೆಲುವಾಗಿ ಪೋಣಿಸುವವನಂತೆ, ಭಗವಂತನನ್ನೂ ಅವನ ದಿವ್ಯಮಂಗಳ ವಿಗ್ರಹ, ಗುಣಗಳು, ವಿಭೂತಿ, ಆಯುಧಗಳು, ಆಭರಣಗಳು, ದಿವ್ಯಮಹಿಷಿಗಳು, ನಿತ್ಯಸೂರಿಗಳು, ಪರಮಪದ ಇವೆಲ್ಲವನ್ನೂ ಕ್ರಮವಾಗಿ ಒಟ್ಟಿಗೆ ಸೇರಿಸಿ ಅನುಭವಿಸಿ ಬಹಳವಾಗಿ ಆನಂದಿಸುತ್ತಾರೆ.

मोय्मां पूंपोलिल् ३. ५.

सर्वप्रकारैरनुभूयशौरिमानन्ददुग्धाम्बुधिमग्नमूर्तिः ।

एवं विधानन्दभुजः प्रशस्य तच्छून्यजन्तून्विनिनिन्द सूरिः ॥६८॥

ತಾವು ಅಪೇಕ್ಷಿಸಿದಂತೆ ಸರ್ವವಿಧದಿಂದಲೂ ಭಗವಂತನನ್ನನುಭವಿಸಿ ಆನಂದಸಾಗರದಲ್ಲಿ ಮುಳುಗಿದರು. ಹೀಗೆ ತಮ್ಮಂತೆಯೇ ಆನಂದಿಸುವವರನ್ನು ಸ್ತುತಿಸಿ ಈ ವಿಧವಾದ ಆನಂದಾನುಭವವಿಲ್ಲದ ಪ್ರಾಣಿಗಳನ್ನೆಲ್ಲಾ ನಿಂದಿಸುವರು.

शेय्यतामरै ३. ६.

पूर्वं विनिन्द्य भगवद्विमुखान् शठारिः
तत्रापि हेतुमवलोक्य सुदुर्लभत्वं ।
अर्चावतारसुलभत्वममुष्य तेभ्यः
कारुण्यतस्समुपदिश्य पुनर्विषण्णः ॥६९॥

ಭಗವದ್ವಿಮುಖರನ್ನು ನಿಂದಿಸಿದರು. ಅದಕ್ಕೆ ಅವರುಗಳು "ನಾವು ಹೀಗಾಗುವುದಕ್ಕೆ ಭಗವಂತನು ದುರ್ಲಭನಾಗಿರುವುದೇ ಕಾರಣವಲ್ಲವೇ?" ಎಂದರು. "ಇಲ್ಲ. ಅವನು ಅರ್ಚಾವತಾರದಲ್ಲಿ ಬಹಳ ಸುಲಭನಾಗಿದಾನೆ." ಎಂದು ದಯೆಯಿಂದುಪದೇಶಿಸಿ ಮತ್ತೆ ದುಃಖಿತರಾದರು.

पयिलुं शुडरोळि ३. ७.

अर्चासौलभ्यकाष्ठामुपदिशति मुनौ स्वांघ्रिरेखासदक्षान्
सिद्धोपायस्वसीम्नस्स्वचरणशरणान्दर्शयामास शौरिः ।
तान्दृष्ट्वा जन्मवृत्तश्रुतमुखरहितानप्ययं वक्ति मान्यान्
स्वात्मानं तत्तदंघ्रिप्रवणजनगणस्वैरकृत्योपयोज्यम् ॥७०॥

Funding: IKS/Tattva Heritage. Digitization: Sarayu Trust/eGangotri

"ಸೌಲಭ್ಯಗುಣ ನೆಲೆ ನಿಂತಿರುವುದು ಅರ್ಚಾವತಾರದಲ್ಲಿ." ಎಂದರು. ಆಗ ಭಗವಂತನು ತನ್ನ ಪಾದರೇಖಾಸದೃಶರಾದ, ಸಿದ್ಧೋಪಾಯನಾದ ತನಗೆ ಸೀಮಾಭೂಮಿಯಾದ, ತನ್ನನ್ನೇ ಉಪಾಯೋಪೇಯವಾಗಿ ನಂಬಿರುವ ಭಾಗವತ ಶ್ರೇಷ್ಠರನ್ನೂ ತೋರಿಸಿ ಕೊಟ್ಟನು. ಅವರನ್ನೆಲ್ಲಾ ದರ್ಶಿಸಿದರು. "ಜನ್ಮ, ಆಚಾರ, ಶಾಸ್ತ್ರರಹಿತರಾಗಿದ್ದಾಗ್ಯೂ ಅವರೆಲ್ಲರೂ ನನಗೆ ಸ್ವಾಮಿಗಳು. ಅವರ ಭೃತ್ಯ ಭೃತ್ಯ ಭೃತ್ಯರೆಲ್ಲರೂ ನನ್ನನ್ನು ಹೇಗೆ ಬೇಕಾದರೂ ವಿನಿಯೋಗಿಸಿಕೊಳ್ಳಬಹುದಾದಂತಹ ದಾಸನು ನಾನು." ಎಂದರು.

मुडियाले ३. ८.

दुर्भिक्षेऽत्यन्तरिक्तो गृहपतिरिव तैः पुत्रकैः क्रोशमानैः
अन्योन्याहारलिप्साकृतमतिभिरयं कारिसूनुस्स्वकीयैः ।
अन्योन्यव्याप्रतीच्छैर्विविधकरणकैर्भोक्तुमाक्रोशतीशं
तार्तीयस्याष्टमेऽस्मिन्दशक अतितरामाशया पीड्यमानः ॥೭೧॥

ದೊಡ್ಡ ಸಂಸಾರಿಯಾಗಿದ್ದು ತುಂಬಾ ಬಡವನಾಗಿದ್ದು ತುಂಬಾ ಬಡವನಾದವನ ಮಕ್ಕಳುಗಳು, ಕ್ಷಾಮಕಾಲದಲ್ಲಿ ಪರಸ್ಪರರ ಆಹಾರವನ್ನು ಕಿತ್ತುಡುತ್ತಾ, ಆಹಾರಕ್ಕಾಗಿ ಹೇಗೆ ಹಾ ಹಾಕಾರಪಟ್ಟು ಕೂಗಿಕೊಳ್ಳುವುವೋ ಹಾಗೆ ಆಳ್ವಾರರ ಸರ್ವೇಂದ್ರಿಯಗಳೂ ಆಳ್ವಾರರನ್ನು ಬಿಟ್ಟು ಸ್ವತಂತ್ರವಾಗಿ ಭಗವಂತನನ್ನು ತಾನೇ ಅನುಭವಿಸಬೇಕು; ತಾನೇ ಅನುಭವಿಸಬೇಕು. ಎಂದು ತ್ವರಾತಿಶಯದಿಂದ ತಾವೇ ತಾವಾಗಿ ಅನುಭವಿಸಲು ಹಾ ತೊರೆಯುತ್ತವೆ.

शोवाल् विरोधं ३. ९.

आक्रोशकं भगवतस्त्वमिवात्र लोके
चिन्वन् सहायमनवाप्य तदीयहानिं ।
सम्यग्विचिन्त्यदयया हितमेष तेभ्यः
प्रादिक्षदस्मृतनिजव्यसनश्शठारिः ॥೭೨॥

मर्त्यस्य हेयभरितस्य नुतिं विहाय
कल्याणदिव्यगुणसंघसुधार्णवस्य ।
स्तोत्रे नियुज्य रसनां भवतां मुरारेः
धन्या भवन्तु सततं मनुजा भवन्तः ॥७३॥

ತನ್ನಂತೆ ಭಗವಂತನನ್ನು ಕೂಗಿಕೊಳ್ಳುವವರು ಈ ಪ್ರಪಂಚದಲ್ಲಿ ಯಾರು? ಎಂದು ನೋಡಿದರು. ಯಾರೂ ಅಂತಹವರು ಇವರಿಗೆ ಸಹಾಯಕ್ಕಾಗಿ ಬರುವವರು ಕಾಣಲಿಲ್ಲ. "ಅಯ್ಯೋ! ಹೀಗೆ ನಷ್ಟವನ್ನನುಭವಿಸುತ್ತಿವೆಯಲ್ಲಾ!" ಎಂದು ಕೊರಗಿ, ತನ್ನ ಕಷ್ಟವನ್ನೆಲ್ಲಾ ಮರೆತು, "ಮನುಷ್ಯರಿರಾ! ನಮ್ಮಂತೆಯೇ ಹೇಯಾಸ್ಪದನಾದ ಮನುಷ್ಯಸಾಮಾನ್ಯನನ್ನು ಸ್ತೋತ್ರ ಮಾಡಬೇಡಿ. ಹೇಯಪ್ರತಿಭಟನೂ ಸಕಲ ಕಲ್ಯಾಣಗುಣಾಕರನೂ ಆದ ಆ ಭಗವಂತನನ್ನು ಸ್ತೋತ್ರಮಾಡಿ ಉಜ್ಜೀವಿಸಿರಿ." ಎಂದು ಅವರಿಗೆ ಪರೋಪದೇಶ ಮಾಡುತ್ತಾರೆ.

शन्मं पलपल . ३. १०.

स्वस्येतरस्तुतिविधावधिकारहानि-
मुक्त्वाद्य वक्ति भगवद्गुणसत्कवित्वं ।
नानावतारगुणचेष्टितदोषहानि-
भूषायुधांगसुभगत्वसुखेषु सम्यक् ॥७४॥

आस्वाद्य दग्धनिखिलप्रतिबन्धसंघः
कोऽन्योऽस्ति मत्सदृश इत्यपि चाह सूरिः ।
एवं तृतीयशतकी कथितोऽर्थवर्गः
पूर्णः क्रमेण दशभिर्दशकैः प्रतीतः ॥७५॥

ನಾನು ಇತರರನ್ನು ಪಾಡುವವನಲ್ಲ. ನಾನೀಗ ಅದ್ವಿತೀಯನಾದ

ಭಗವಂತನ ಸತ್ಕವಿ. ನನ್ನ ಸಮಸ್ತ ಪ್ರತಿಬಂಧಕಗಳೂ ತೊಲಗಿ ಹೋದುವು ನನಗೆ ಸಮನಾರು? ಏನೇನು ಪಾಡುವೆನು? ಗೊತ್ತೇ? ಆ ಭಗವಂತನ ಅನೇಕಾವತಾರಗಳು, ದಿವ್ಯಮಂಗಳ ವಿಗ್ರಹ, ಅವನ ಕಲ್ಯಾಣಗುಣಗಳು ದಿವ್ಯ ಚೇಷ್ಟಿತಗಳು, ಹೇಯ ಪ್ರತಿಭಟತ್ವ, ಆಭರಣಗಳು, ಆಯುಧಗಳು ದಿವ್ಯಾವಯವಗಳು ಇವೆಲ್ಲವನ್ನೂ ಪಾಡುವೆನು. ಇವೆಲ್ಲದರಿಂದಲೂ ಅವನ ನನ್ನ ಮನಮೋಹಕನಾಗಿದಾನೆಂದರು. ಹೀಗೆ ಅವನನ್ನನುಭವಿಸಿ ನನ್ನ ಸಮಸ್ತ ಪ್ರತಿಬಂಧಕಗಳೂ ತೊಲಗಿರುವಾಗ ನನಗಾರು ಸಾಟಿ? ಎನ್ನುವರು.

ओरुनायहमाय् ४· १·

राज्यस्वर्गादिभोगो भिदुर इति दृढं निश्चितः केवलात्मा
शुद्धो नित्योप्यणुत्वात्परिमितसुखवान्सूरिभोग्यात्परस्मात् ।
तस्मात्ते द्वे विहाय द्वयमनुकथितौ यादवाद्रीशपादौ
स्मृत्वा लब्धेऽवकाशे जनिफलमतुलं प्राप्नुतेत्याह सूरिः ॥७६॥

ಇಡೀ ಚತುಸ್ಸಮುದ್ರ ಮಧ್ಯಸ್ಥರಾದ ಭೂಮಂಡಲವನ್ನೇ ಅನೇಕ ಕಾಲ ಏಕಚ್ಛತ್ರಾಧಿಪತ್ಯದಿಂದ ಆಳಿದ ದೊರೆಗಳೂ, ಶತ್ರುದಾಯಾದಿಗಳಿಗೆ ರಾಜ್ಯವನ್ನು ಸೂರೆಗೊಟ್ಟು ತಿರಿದು ತಿನ್ನುವರು. ಸ್ವರ್ಗಾದಿಸುಖಗಳೂ "ಸ್ವರ್ಗೇಪಿ ಪಾಪಭೀತಸ್ಯ" ಎಂಬಂತೆ ದುಃಖಮಿಶ್ರಿತವಾಗಿಯೇ ಇರುವುವು. ಆದ್ದರಿಂದ ಈ ಚತುರ್ದಶಭುವನಗಳ ಐಶ್ವರ್ಯವೂ ನಶ್ವರ. ಕೈವಲ್ಯವು ನಿತ್ಯ ನಾದ ಪರಿಶುದ್ಧಾತ್ಮನ ಅನುಭವರೂಪವಾದ ನಿತ್ಯ ಮೋಕ್ಷವಾದರೂ, ಅಣು ಸ್ವರೂಪನ ಅನುಭವವಾದ್ದರಿಂದ ವಿಭುವಾದ ಪರಬ್ರಹ್ಮನನುಭವಕ್ಕಿಂತಲೂ ಅಲ್ಪವಾದ ಸುಖ. ಆದುದರಿಂದ ಅಸ್ಥಿರವಾಗಿಯೂ ಅಲ್ಪವಾಗಿಯೂ ಇರುವ ಐಶ್ವರ್ಯ ಕೈವಲ್ಯಗಳನ್ನು ಬಿಟ್ಟು, ದ್ವಯಮಂತ್ರಪ್ರತಿಪಾದ್ಯನಾದ ಶ್ರೀ ಯಾದ ವಾದ್ರೀಶನಾದ ತಿರುನಾರಾಯಣನ ಪಾದಾರವಿಂದಗಳನ್ನು ಅವಕಾಶ ದೊರೆ ತಾಗ ನೆನೆದು ಜನ್ಮ ಸಾರ್ಥಕ ಪಡಿಸಿಕೊಳ್ಳಿರಿ. ಎಂದು ಪರೋಪದೇಶ ಮಾಡಿದಾರೆ.

पालनाय् ४. २.

स्वस्योपदेशे विफले त्रिवारं स्वीयानुभूतेर्विशदत्वहेतौ ।
हृष्यन्नपि प्राक्तनवासनातस्तस्यापदानानि पुरातनानि ॥७७॥

अद्यैव भोक्तुमुदयुङ्क्त न चोपलेभे
तस्माच्च कान्तवियुता तरुणी बभूव ।
मोहंगता च जननी तु जगाद तस्या-
स्तां तां दशामतिशुचा परिदूयमाना ॥७८॥

ತಮ್ಮ ಅನುಭವವು ಮಿತಿಮೀರಿದಾಗ, ತಮ್ಮಂತೆಯೇ ಎಲ್ಲರೂ ಉಜ್ಜೀವಿಸಲಿ ಎಂದು ೧-೨. ೩-೯. ೪-೧. ಈ ಮೂರು ಸಲ ಪರೋಪದೇಶ ಮಾಡಿದರು. ಅದು ವ್ಯರ್ಥವಾಯಿತು. ತಮ್ಮ ಸಂಸ್ಕಾರದಂತೆ ಆ ಭಗವಂತನ ದಿವ್ಯ ಪುರಾತನ ಚರಿತಗಳನ್ನು ಈಗಲೇ ಅನುಭವಿಸಬೇಕೆಂದು ಆಸೆಪಟ್ಟರು. ಅದೂ ದೊರಕಲಿಲ್ಲ. ಆಗ ದುಃಖಾತಿಶಯದಿಂದ ಪತಿವಿಯುಕ್ತೆಯಾದ ಕಾಂತೆಯಾಗಿ ದುಃಖವಿಮ್ಮಡಿಸಿ ಮೋಹಂಗತೆಯಾದಳು. ತಾಯಿಯಾದವಳು ಆ ಮಗಳ ಅವಸ್ಥೆಯನ್ನು ನೋಡಲಾರದೆ ಬಹಳ ದುಃಖದಿಂದ ಅವಳ ಸ್ಥಿತಿಯನ್ನು ಬಣ್ಣಿಸುವಳು. ಇದನ್ನೀಗ ಈ ದಶಕದಲ್ಲಿ ಹೇಳುವರು.

कोवैवायाळ् ४. ३.

कालान्तरीयाण्यवतारवृत्तान्यद्यानुभोक्तुं व्यवसायमस्य ।
ज्ञात्वा हरिस्तादृशदुर्लभत्वात्प्रीतिं स्वकीयां प्रकटीचकार ॥७९॥

ततोऽनुभूय प्रणयित्वमेष तदेव वक्त्यत्र मुनिस्तृतीये ।
बालस्तु चन्द्राहरणाय शोचन्यथा निवर्त्येत फलप्रदानात् ॥८०॥

तथात्मनि प्रीतिगुणानुभूत्या समाहितोऽभून्मुनिरत्न भूयः ।
दृष्टं श्रुतं वर्ष्म वचश्च तस्य विस्रम्भहेतुर्भवतीति सिद्धम् ॥८१॥

कालाधिपः कालमपोह्य भूतं सद्यस्तनं दर्शयति स्म सर्वम् ।
स्वेनानुभूतं सकलं व्यनक्ति वाचा मुनिस्स्वैरविसारिण्या ॥८२॥

1) ದೇಶಾಂತರ ಕಾಲಾಂತರಗಳಲ್ಲಿ ನಡೆದ ಅವತಾರ ಚರಿತ್ರಗಳನ್ನು ಅನುಭವಿಸಲು ಆಸೆಪಟ್ಟ ಇವರ ಉದ್ದೇಶವನ್ನು ತಿಳಿದ ಭಗವಂತನು, "ಇಂತಹ ಭಕ್ತನು ಸಿಗಲಾರ" ನೆಂದು ತನ್ನ ಪ್ರೀತಿಯನ್ನು ತೋರಿಸಿಕೊಟ್ಟನು. ಆಗ ಇವನ ಪ್ರಣಯಿತ್ವವನ್ನು ಅನುಭವಿಸಿ ಅದನ್ನು ಹೇಳುತ್ತಾರೆ. 2) ಚಂದ ಮಾಮ ಬೇಕೆಂದು ಅಳುವ ಮಗುವಿಗೆ ಹಣ್ಣುಕೊಟ್ಟು, ಬೇರೆಕಡೆ ತಿರುಗಿಸುವಂತೆ ಅವತಾರ ಚರಿತಗಳನ್ನನುಭವಿಸಬೇಕೆಂದು ಹಾತೊರೆದವರಿಗೆ ತನ್ನ ಪ್ರೀತಿಗುಣವನ್ನು ತೋರಿಸಿಕೊಟ್ಟು, ಸಮಾಧಾನಪಡಿಸಿದ. ಯಾರೇ ಆಗಲಿ ಅವನ ದಿವ್ಯಮಂಗಳವಿಗ್ರಹವನ್ನು ನೋಡಿದರೂ ಅವನ ಮಾತನ್ನು ಕೇಳಿದರೂ ನಂಬಲೇ ಬೇಕಾಗುವುದಲ್ಲವೆ? 3) ಕಾಲ ನಿಯಾಮಕನಾದ ಆ ಭಗವಂತನು ಅತೀತಕಾಲದ್ದನ್ನೆಲ್ಲಾ ವರ್ತಮಾನಕಾಲದ್ದನ್ನಾಗಿ ಸೇವೆ ಕೊಟ್ಟನು. ಅದನ್ನೆಲ್ಲಾ ಅನುಭವಿಸಿ ಪಾಡುತ್ತಾರೆ. ಈ ರೀತಿ ಮೂರು ವಿಧವಾಗಿ ಯೋಜನೆಯುಂಟು.

मण्णैयिरुन्दु ४. ४.

उन्मस्तकं रसममुष्य विलोक्य शौरि-
राधारलोपभयतो विमुखो बभूव ।
तस्माद्वियुक्ततरुणा तरुणी स भूत्वा
मोहं गताथ जननी कथयाम्बभूव ॥८३॥

इयं तनूजा मम शौरितुल्यं भ्रान्त्या तदीयञ्च तमेव मत्वा ।
अनुव्रजत्याशु निवृत्तमोहाऽप्यतो निवृत्ता न भवेद्धताहो ॥८४॥

ತಲೆ ಮಾರಿದ ಇವರ ಆನಂದವನ್ನು ನೋಡಿ ಭಗವಂತನು ಎಲ್ಲಾದರೂ ಧರ್ಮಿಗೇ ಲೋಪಬಂದೀತೆಂದು ತಾನು ಸ್ವಲ್ಪ ಕಣ್ಮರೆಯಾದ. ಆ ದುಃಖ ದಿಂದ ಪತಿವಿರಹಿತೆಯಾದ ಕಾಂತೆಯಾಗಿ ಆ ದುಃಖ ಮಿತಿ ಮಾರಿ ತನ್ನ ಸ್ಥಿತಿ ಯನ್ನು ತಾನು ಹೇಳಲಾರದಂತೆ ಮೋಹಂಗತೆಯಾದಾಗ ತಾಯಿಯು ಅವಳ ಸ್ಥಿತಿಯನ್ನು ಹೇಳುತ್ತಾಳೆ. "ಭಗವಂತನೊಡನೆ ಸಮಾನಧರ್ಮವಾದ ವಸ್ತು ಗಳನ್ನೂ ಅವನ ಸಂಬಂಧಿವಸ್ತುಗಳನ್ನೂ ಕೂಡ ತಬ್ಬಿಬ್ಬಿನಿಂದ ಅವನೆಂದೇ ತಿಳಿದು ಅವುಗಳ ಹಿಂದೆ ಓಡುವಳು. "ಭಗವಂತನಲ್ಲ" ವೆಂದು ನಾನೆಷ್ಟೇ ಹೇಳಿದರೂ ಹಿಂತಿರುಗಲಾರಳು. ಅಯ್ಯೋ!"

वीत्तिरुन्देल्लहुं ४. ५.

आद्यप्रबन्धप्रारम्भादद्यावधिकृता कृषिः ।
सर्वेश्वरस्य फलितेत्युच्यते दशकेऽत्र तु ॥८५॥

मुहुस्संश्लेषविश्लेषैस्त्वरामुत्पाद्य भूयसीम् ।
सम्पूर्णां स्वानुभूतिं हि ददावत्र यतो हरिः ॥८६॥

यो वियोगात्तत्सदृशं तत्सम्बंधि च वीक्ष्य तम् ।
मन्यमानश्शुशोचासौ धन्यं मन्योऽद्य वै मुनिः ॥८७॥

एतद्दशकभोगस्तु सर्वान्ते नाभवत्कुतः ।
इत्याहात्र यतिश्श्रीमान्वेदान्ती तु मुहुर्मुहुः ॥८८॥

"ಪೊಯ್ ನಿನ್ನ ಞಾನಮುಂ" ಎಂಬ ಇವರ ಮೊದಲ ಪ್ರಬಂಧವಾದ ತಿರುವಿರುತ್ತವನ್ನು ಆರಂಭಿಸಿ ಭಗವಂತನು ಇದುವರೆಗೂ ಮಾಡಿದ ಕೃಷಿಯು

ಈಗ ಫಲಿಸಿತೆಂದು ಹೇಳುತ್ತಾರೆ. ಈ ರೀತಿ ಪದೇ ಪದೇ ಸಂಶ್ಲೇಷ ವಿಶ್ಲೇಷ ಗಳನ್ನುಂಟುಮಾಡಿ ಇವರ ಪ್ರಾಪ್ಯ ತ್ವರೆಯನ್ನು ಹೆಚ್ಚಿಸಿ ಸಂಪೂರ್ಣವಾದ ತನ್ನ ಅನುಭವವನ್ನು ಕೊಟ್ಟನು. ವಿಶ್ಲೇಷವ್ಯಸನದಿಂದ ಭಗವಂತನೊಡನೆ ಸಮಾನಧರ್ಮವಾದ ವಸ್ತುಗಳನ್ನೂ ಅವನ ಸಂಬಂಧಿವಸ್ತುಗಳನ್ನೂ ಅವನ ನ್ನಾಗಿಯೇ ತಿಳಿದುಕೊಂಡು ದುಃಖಪಟ್ಟವರು- ಈಗ ತನಗಿಂತಲೂ ಧನ್ಯನಾ ದವನೇ ಇಲ್ಲವೆನ್ನುತ್ತಾರೆ. ಈ ದಶಕದ ಭಾವಬಂಧವನ್ನೂ ಅನುಭವಪೂರ್ತಿ ಯನ್ನೂ ನೋಡಿ ವೇದಾಂತಿಮುನಿಯು (ಸಂಜೀಯರ್) "ಈ ದಶಕವು ಪ್ರಬಂಧದ ಕೊನೆಯಲ್ಲಿರಬೇಕಾದ್ದು ನ್ಯಾಯವಾಗಿತ್ತು. ಅದೇಕಾಗಲಿ ಲ್ಲವೋ ?" ಎಂದರು.

तीर्पा रैयामिनि ४. ६.

महानन्दानुभूत्यैव निर्वृत्तं दशकङ्गतम् ।
तत्प्रतिद्वन्द्वि दुःखन्तु कथ्यतेऽत्र तयोर्द्वयोः ॥८९॥

कास्यात्सङ्गतिरित्येव विचारे नैव सङ्गतिः ।
इत्याह यतिराजस्य पादच्छायागुरुस्स्वयम् ॥९०॥

पूर्वानुभूतेस्सर्वस्या मानसत्वादतृप्तितः ।
आशास्य बाह्यसंश्लेषं तदलाभाच्च दुःखितः ॥९१॥

काचित्संश्लिष्टविश्लिष्टा भूत्वा मोहमुपागता ।
तन्निदानं तदा प्रष्टुं पौरनार्यस्समागताः ॥९२॥

तदा विप्रश्निका काचिदाविष्टां देवतान्तरैः ।
प्राह श्रुत्वा तु तत्केचिद्देवतान्तरसेवकाः ॥९३॥

चिकीर्षवः प्रतीकारं मद्यमांसादिभिर्गृहम् ।
वैष्णवानां दूषयितुं समयोऽयमिति स्थिताः ॥९४॥

तदात्वस्यास्सखी ब्रूते नायं परिहृतिक्रमः ।
देवतान्तरगन्धे तु नैव जीवेदियं पुनः (ध्रुवं) ॥९५॥

धूळीभिर्वैष्णवाङ्घ्रीणां लिप्यतां तापशान्तये ।
कीर्त्यन्तां हरिनामानि तुलसी क्षिप्यतां हृदि ॥९६॥

अस्यास्स्वभावसदृशः प्रतीकारोऽयमेव हि ।
अन्यथेमां नाशयन्ति भवन्त्यो गच्छतेति ताः ॥९७॥

ಮಹಾನಂದವನ್ನನುಭವಿಸಿದ ದಶಕವು ಮುಗಿಯಿತು. ಇದಕ್ಕೆ ಪ್ರತಿ
ಕೋಟಿಯಾದ ದುಃಖವನ್ನು ಈ ದಶಕದಲ್ಲಿ ಅನುಭವಿಸುತ್ತಾರೆ. ಮಹಾ
ನಂದಾನುಭವ ಮಾಡಿದ ಪೂರ್ವದಶಕಕ್ಕೂ ಈ ಮಹಾದುಃಖಾನುಭವವಾದ
ಈ ದಶಕಕ್ಕೂ ಸಂಗತಿಯೇನು ? ಎಂದರೆ— "ಅಸಂಗತಿಯೇ ಸಂಗತಿ"
ಯೆಂದು ಗೋವಿಂದ ಜೀಯರ್ (ಎಂಬಾರ್) ಅಪ್ಪಣೆ ಕೊಡಿಸಿದರು.

ಪೂರ್ವಾನುಭವವು ಮಾನಸಿಕವಾದ್ದರಿಂದ ತೃಪ್ತಿಯುಂಟಾಗದೆ ಬಾಹ್ಯ
ಸಂಶ್ಲೇಷವನ್ನಪೇಕ್ಷಿಸಿ, ಅದು ಲಭಿಸದೆ ದುಃಖಿತರಾಗಿ, ನಾಯಕನೊಡನೆ ಕಲೆ
ತಿದ್ದು ವಿಯೋಗವನ್ನನುಭವಿಸುವ ಕಾಂತೆಯಾಗಿ ಮೋಹಂಗತೆಯಾದಳು.
ಊರಿನ ಹೆಂಗೆಳೆಯರು ಇದಕ್ಕೆ ಕಾರಣವೇನೆಂದು ವಿಚಾರಿಸಲು ಬಂದರು.
ಇವಳ ರೋಗ ನಿದಾನವನ್ನು ಯಾರೂ ಅರಿಯದಿರಲು, ದೇವತಾಂತರ ಪರರಾ
ದವರು ಇದೇ ಸಮಯವನ್ನು ಕಾಯುತ್ತಿದ್ದು ಮದ್ಯಮಾಂಸಾದಿಗಳಿಂದ
ವೈಷ್ಣವರ ಮನೆಯನ್ನು ಕೆಡಿಸಬೇಕೆಂದು ಹವಣಿಸಿದರು. ಆಗ ಅವರಲ್ಲೊಬ್ಬ
ಳಾದ ಕಣಿ ಹೇಳುವವಳು ಬಂದು "ಇವಳಿಗೆ ದೆವ್ವ ಹಿಡಿದಿದೆ. ಬಲಿ ಮುಂತಾ
ದ್ದರಿಂದ ಶಾಂತಿ ಮಾಡಬೇಕು" ಎಂದಳು. ಆಗ ನಾಯಕಿಯ ಸಖಿಯೊಬ್ಬಳು
"ಇವಳ ಖಾಯಿಲೆ ಇದಲ್ಲ. ನೀವು ಮಾಡುವ ಈ ಕೆಲಸಗಳಿಂದ ಇವಳ ವ್ಯಾಧಿ
ಹೋಗಲಾರದು. ದೇವತಾಂತರ ಸಂಬಂಧವು ಲೇಶಮಾತ್ರವುಂಟಾದರೂ

ಇವಳು ಬದುಕಲಾರಳು. ಇದಕ್ಕೆ ಮತ್ತೇನು ಪರಿಹಾರವೆಂದರೆ– ಶ್ರೀವೈಷ್ಣ
ಪಾದಧೂಳಿಯನ್ನು ತಂದು ಇವಳಿಗೆ ಲೇಪ ಮಾಡಿರಿ. ಭಗವನ್ನಾಮಸಂ
ರ್ತನ ಮಾಡಿರಿ. ತುಳಸಿಯನ್ನು ಹೃದಯದ ಮೇಲೆ ಇರಿಸಿ. ಆಗಲೇ
ಇವಳ ತಾಪ ಶಮನವಾಗುತ್ತೆ. ಇದನ್ನು ಬಿಟ್ಟು ಬೇರೆ ಮಾಡಿದರೆ ಖಂಡಿ
ಇವಳು ಬದುಕಲಾರಳು. ನೀವೆಲ್ಲಾ ದೂರ ಸರಿಯಿರಿ" ಎಂದು ದೇವತಾಂ
ಪರರನ್ನು ಓಡಿಸಿದಳು.

शीलमिळाच्चिरियन् ४. ७.

अतीतमेव दशकं श्लाघ्यमासीन्मुनेर्यतः ।
नाजानाद्दुःखमल्पं वा मोहान्मोहो हि तादृशः ॥९८॥

सख्या प्रसङ्गादुक्तानि श्रुत्वा नामानि वै हरेः ।
सेचनादमृतस्येव लब्ध्वा चैतन्यमातुरः ॥९९॥

उत्कण्ठया सुहृदया क्रोशत्युच्चैस्तथा हरिम् ।
यथा स्वमहिषीस्सूरींस्त्यक्त्वा स्वं स्थानमुत्तमम् ॥१००॥

आधावेदस्य सविधं गजेन्द्रस्येव सन्निधिम् ।
आक्रोशो ह्यस्य विश्लेषे सीताकौसल्ययोरिव ॥१०१॥

ಈ ದಶಕದಲ್ಲಿಯ ಸ್ಥಿತಿಯನ್ನು ನೋಡಿದರೆ ಹಿಂದಿನ ದಶಕದಲ್ಲಿಯ ಸ್ಥಿತಿಯೇ ಉತ್ತಮವಾಗಿತ್ತು. ಏಕೆಂದರೆ— ಮೂರ್ಛೆಯಿಂದ ಯಾವೊಂದು ಕಷ್ಟವೂ ತಿಳಿಯುತ್ತಿರಲಿಲ್ಲ. ಮೂರ್ಛೆಯೇ ಹಾಗಲ್ಲವೇ? ಸಖಿಯು ಹೇಳಿದ ಭಗವನ್ನಾಮಗಳನ್ನು ಕೇಳಿ ಅಮೃತಸೇಚನವಾದಂತೆ ಮೂರ್ಛೆ ತಿಳಿದಿತ್ತು- ಭಗವಂತನು ಗಜೇಂದ್ರನ ಕೂಗಿಗೆ ತಳಮಳಿಸಿ ಬಂದಂತೆ ತನ್ನ ಮಹಿಷಿಗಳನ್ನೂ ಪರಿಜನ ಪರಿಚ್ಛದಗಳನ್ನೂ ಪರಮಪದವನ್ನೂ ಬಿಟ್ಟು ತಮ್ಮ ಹತ್ತಿರಕ್ಕೆ ಓಡಿ ಬರುವಷ್ಟು ಘಟ್ಟಿಯಾಗಿ ಪರಮೋತ್ಕಂಠೆಯಿಂದ ಕೂಗಿಕೊಂಡರು. ಇಲ್ಲಿಯ

ವಿಶ್ಲೇಷದ ಕೂಗು ಸೀತಾ ಕೌಸಲ್ಯೆಯರ ರಾಮ ವಿಶ್ಲೇಷದ ಕೂಗಿನಂತಿದೆ.

एरालुमिरैयोलुम् ४. ८.

यदाक्रोशं श्रुत्वा द्रवति जलवज्जन्तुरखिल-
स्तदाक्रोशं श्रुत्वाप्यखिलगुणपूर्णे मधुरिपौ ।
अनागच्छत्येवं मुनिरमनुत स्वं भगवत-
स्त्वनिष्टं तस्मात्स्वं मम भवतु मा स्वीयमपि वा ॥१०२॥

अयं मनोगतस्त्वर्थो निस्ससार मुखान्मुनेः ।
हरेरभिमतं वस्तु वस्त्वित्येतेन गण्यते ॥१०३॥

ಇವರ ಗೋಳನ್ನು ನೋಡಿದ, ಕೇಳಿದ ಯಾವ ಪ್ರಾಣಿಯಾದರೂ ಸರಿ. ನೀರಿನಂತೆ ಕರಗಬೇಕು. ಹೀಗಿರಲು ದಯಾದಿ ಸಕಲಕಲ್ಯಾಣಗುಣಪೂರ್ಣನಾದ ಭಗವಂತನು ಈ ಕೂಗನ್ನು ಕೇಳಿಯೂ ಬರಲಿಲ್ಲ. ಆಗ ಇವರು "ಭಗವಂತನಿಗೆ ನಾನು ಬೇಡದವನು. ಬೇಕಾಗಿದ್ದರೆ ಅವನು ಬಂದೇ ಬರುತ್ತಿದ್ದನು. ಆದ್ದರಿಂದ ಅವನಿಗಿಷ್ಟವಿಲ್ಲದ ನಾನು ನನ್ನದು ಎಲ್ಲವೂ ಹೋಗಲಿ" ಎಂದರು. ಭಗವಂತನಿಗೆ ಇಷ್ಟವಾದ ವಸ್ತುವೇ ವಸ್ತುವೆನಿಸಿಕೊಳ್ಳುವುದೆಂಬ ಸಾರಾರ್ಥವನ್ನು ಸಾರಿದರು.

नण्णादार् ४. ९.

आत्मा शरीरञ्च तवानभीष्टं ममापि माभूदिति सूरिरूचे ।
विना तदिच्छां नहि वस्तु नश्येत्ततो हरिं प्रार्थयते विनाशम् ॥१०४॥

विष्णोर्विश्लेषदुःखाद्धरिविमुखजनैस्सङ्गदुःखं महीयः
पश्यन्सूरिश्शठारिः परिहर जगतो याचते मामितीति ।

केचित् , कूरेशवर्यः कथयति निजदुःखानुभूत्यै सहायं
चिन्वन्नप्राप्य लोके स्वसदृशमथतद्दुःखभारं विचिन्त्य ॥१०५॥

विस्मृत्य स्वस्य दुःखं हरिमनु युयुजे किं त्वमेतानुदास्से
सर्वज्ञस्सर्वशक्तस्सकलपतिरसि त्वं दयालुर्ह्यकस्मात् ।
तस्मादुद्धर्तुमर्हस्यखिलमिममिति श्रीपतिः प्राह सर्वं
मत्कर्तव्यं यथावत्कृतमथ च रुचिश्चेतनश्चेदपेक्ष्या ॥१०६॥

अन्यथा पुरुषार्थत्वं मद्दत्तस्य कथं भवेत् ।
पुरुषैरर्थ्यमानं हि पुरुषार्थ इतीर्यते ॥१०७॥

इत्युक्तवति सर्वेशे प्राह सूरिः पुनस्त्विदम् ।
यद्यसाध्यमिदं तेस्यादितो मामुद्धराश्विति ॥१०८॥

यदा जिहासा जाता ते संसारिषु तदा भवान् ।
उद्धृतो हि मयेत्येवं हरिरूचे मुनिस्त्विदम् ॥१०९॥

श्रुत्वा हृष्टो दधाराशु प्राणानपि कलेबरम् ।
प्रबन्धपूरणे यत्नः फलितोऽभूद्रमापतेः ॥११०॥

"ನಿನಗಿಷ್ಟವಿಲ್ಲದ ನನ್ನ ಆತ್ಮ ಶರೀರವೆಲ್ಲವೂ ನನಗೂ ಬೇಡ. ವಸ್ತು ನಾಶವಾಗಬೇಕಾದರೂ ನಿನ್ನ ಇಚ್ಛೆಯಿಂದಲೇ ಆಗಬೇಕು. ಆದ್ದರಿಂದ ನ ಆತ್ಮಾತ್ಮೀಯಗಳೆಲ್ಲವೂ ನಾಶವಾಗಲಿ" ಎಂದು ಆಳ್ವಾರರು ಭಗವಂತನನ್ನ ಪ್ರಾರ್ಥಿಸುತ್ತಾರೆ.

(1) "ಭಗವಂತನ ವಿಶ್ಲೇಷ ದುಃಖಕ್ಕಿಂತಲೂ ಭಗವದ್ವಿಮುಖರ ವರ ಸಹವಾಸವೇ ಪರಮ ದುಃಖ. ಇದನ್ನು ನಾನು ಸಹಿಸಲಾರೆ. ಈ ಕ್ಷ ನನ್ನನ್ನು ಈ ಪ್ರಪಂಚದಿಂದ ಉದ್ಧರಿಸು" ಎಂದು ಆಳ್ವಾರರು ಹೇಳುವರೆಂದ ಕೆಲವರು ಯೋಜಿಸಿದರು.

(2) ಶ್ರೀ ಕೂರತ್ತಾಳ್ವಾರರು ಅಪ್ಪಣೆ ಕೊಡಿಸಿದರು: "ಆಳ್ವಾರರು ಮಿತಿಮಿಾರಿದ ಈ ತಮ್ಮ ದುಃಖವನ್ನನುಭವಿಸಲು ಸಹಾಯವನ್ನಪೇಕ್ಷಿಸಿದರು. ತನ್ನಂತೆ ದುಃಖಪಡುವ ಚೇತನನೇ ಸಿಗಲಿಲ್ಲ. ದುಃಖದ ಹೊರೆ ಹೆಚ್ಚಿತು. ಆದರೂ ಅದನ್ನು ಮರೆತು, ಈ ಚೇತನರ ಭಗವದ್ವಿಮುಖತೆಯನ್ನು ಕಂಡು ಕೊರಗಿ, 'ಅಯ್ಯೋ! ದೇವರೇ! ಸರ್ವಜ್ಞನಾಗಿ ಸರ್ವಶಕ್ತನಾಗಿ ಸರ್ವಸ್ವಾಮಿಯಾಗಿ ದಯಾಳುವಾಗಿದ್ದರೂ, ಇವರನ್ನೆಲ್ಲಾ ಉದಾಸೀನ ಮಾಡಿರುವೆಯಲ್ಲಾ!! ಇವರೆಲ್ಲರನ್ನೂ ಉದ್ಧಾರಮಾಡು' ಎಂದು ಪ್ರಾರ್ಥಿಸಿದರು. ಅದಕ್ಕೆ ಭಗವಂತನು 'ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಆಶೆಯಿತ್ತೋ? ಚೇತನನಾದ ಮೇಲೆ ಅವನಪೇಕ್ಷಿಸಬೇಕು. ಹಾಗಲ್ಲದಿದ್ದರೆ ನಾನು ಕೊಡುವುದು ಹೇಗೆ ತಾನೆ ಪುರುಷಾರ್ಥವಾದೀತು? ಪುರುಷರಿಂದಪೇಕ್ಷಿಸಲ್ಪಡುವುದು ಪುರುಷಾರ್ಥವಲ್ಲವೆ?' ಎಂದನು. ಹಾಗೆ ನಿನಗಿದಸಾಧ್ಯವಾದರೆ 'ಇಗೋ! ಮೊದಲು ಈ ಸಂಸಾರದಿಂದ ನನ್ನನ್ನುದ್ಧರಿಸು' ಎಂದರು. ಅದಕ್ಕೆ ಹರಿಯು "ಆಳ್ವಾರರೇ! ನಿಮಗೆ ಈ ಸಂಸಾರಿಗಳಲ್ಲಿ ಬೇಸರ ಹುಟ್ಟಿದ್ದರೆ ಖಂಡಿತವಾಗಿಯೂ ಉದ್ಧರಿಸಲ್ಪಟ್ಟೇ ಇರುವಿರಿ" ಎಂದ. ಈ ಮಾತನ್ನು ಕೇಳಿ ಸಂತುಷ್ಟರಾಗಿ ತಮ್ಮ ಪ್ರಾಣ, ಶರೀರಗಳನ್ನೆಲ್ಲಾ ಧರಿಸಿದರು. ಇದರಿಂದ, ಆಳ್ವಾರರಿಂದಲೇ ಈ ಪ್ರಬಂಧವನ್ನು ಪೂರ್ತಿಮಾಡಿಸಬೇಕೆಂಬ ಈಶ್ವರನ ಪ್ರಯತ್ನವು ಸಫಲವಾಯಿತು." ಎಂದು.

ओन्नुतेवुम् ४. १०.

त्यक्तं सर्वेश्वरेणाप्यसुकरमिति तं जीववर्गं दयातः
संसारादुद्दिधीर्षुर्मुनिरयमतनोच्चेतसीत्थं मनस्वी ।
संसारे हेतुरेषामितरभजनमप्यत्र देवे परत्व-
ज्ञानाभावश्च तस्माद्धरिपरतमतां बोधनीया मयेमे ॥१११॥

पत्युश्श्रियः परत्वन्तु सर्वस्मादपि दैवतात् ।
उपादिशदयं स्वेन सर्वेभ्यस्तुल्यतां दिशन् ॥११२॥

उपदिश्य प्रथमतः परत्वे परतां हरेः ।
ततो विभवगां तान्तु वक्त्यत्रार्चागतान्तु ताम् ॥११३॥

सत्तया दशकस्यास्य ह्यस्मदीयमते स्थिताः ।
स्त्रियोऽपि देवतामन्यां चुल्ल्यर्थदृषदासमाम् ॥११४॥

अपि नैवानुमन्यन्त इत्याहुर्देशिकोत्तमाः ।
चतुर्थशतकस्यास्य दशमे दशके पुनः ॥११५॥

ಈ ಜೀವಕೋಟಿಗಳನ್ನುದ್ಧರಿಸಲು ಸರ್ವೇಶ್ವರನಿಂದಲೂ ಸಾಧ್ಯವಿಲ್ಲವೆಂದು ತಿಳಿದು, ಆಳ್ವಾರರು ಪರಮಕೃಪೆಯಿಂದ ಇವುಗಳನ್ನು ಸಂಸಾರದಿಂದುದ್ಧರಿಸಲು ಮನಸ್ಸು ಮಾಡಿದರು. ಇವನೇ ಪರಾತ್ಪರ ವಸ್ತುವೆಂದು ತಿಳಿಯುದೆಯೂ, ದೇವತಾಂತರಗಳನ್ನೇ ಆಶ್ರಯಿಸುತ್ತಲೂ, ಇರುವುದರಿಂದ ಇವುಗಳ ಸಂಸಾರಬಂಧಕ್ಕೆ ಕಾರಣವೆಂದು ತಿಳಿದ ಇವರು— ಎಲ್ಲರೂ ತನ್ನಂತೆಯೇ ಆಗಲೆಂಬ ಉದ್ದೇಶದಿಂದ "ಸಮಸ್ತ ದೇವತೆಗಳಲ್ಲೂ ಶ್ರಿಯಃಪತಿಯಾದ ನಾರಾಯಣನೇ ಪರಾತ್ಪರವಸ್ತು"ವೆಂದು ಪರೋಪದೇಶ ಮಾಡುತ್ತಾರೆ. ೧. ೧. ಉಯರ್ವರದಲ್ಲಿ ಪರವಾಸುದೇವನ ಪರತ್ವವನ್ನೂ ೨. ೨. ತಿಣ್ಣನ್ವೀಡು ದಶಕದಲ್ಲಿ ವಿಭವಾವತಾರಗಳಲ್ಲಿಯು ಪರತ್ವವನ್ನೂ ಈ ದಶಕದಲ್ಲಿ ಅರ್ಚಾವತಾರದಲ್ಲಿ ಪರತ್ವವನ್ನೂ ವಿವರಿಸುವರು. "ಆಳ್ವಾರರು ಈ ದಶಕವನ್ನು ಅನುಗ್ರಹಿಸಿದುದರಿಂದಲೇ ಈ ಅರ್ಥವನ್ನು ತಿಳಿದ ಶ್ರೀವೈಷ್ಣವರಾದ ಹೆಂಗೆಳೆಯರೂ ಕೂಡ ದೇವತಾಂತರಗಳ ಗೋಜಿಗೇ ಹೋಗುವುದಿಲ್ಲ" ವೆಂದು ಆಚಾರ್ಯರು ಅಪ್ಪಣೆ ಕೊಡಿಸಿದರು.

कैयार्शेक्करम् ५. १.

अनादृत्य दोषान्मदीयाननन्तान्गुणाभासलेशं विचिन्वन्नदृष्ट्वा ।
दयामात्ततस्स्वस्य सर्वेश्वरत्वं पुमर्थञ्च मे दास्यमेव स्वकीयम् ॥११६॥

Funding: IKS/Tattva Heritage. Digitization: Sarayu Trust/eGangotri

अवबोध्य परोपदेशहृष्टं ह्यकरोन्मां हृदये च मे प्रविष्टः ।
पदमेकमितोऽन्यतो निधातुं नहि शक्तो भवितेति हर्षमाप ॥११७॥

सर्वज्ञोऽपि यथा मुह्येत्तथा मिथ्या वदन्नपि ।
पुमर्थं परमार्थन्तु प्राप्तोऽहं बत ते दया ॥११८॥

ಎಣಿಸಲಾರದ ನನ್ನ ದೋಷಗಳನ್ನು ಲೆಕ್ಕಿಸದೆ, ಹುಡುಕಿದರೂ ಗುಣವೆಂದು ಹೇಳಬಹುದಾದ ಯಾವೊಂದನ್ನೂ ನನ್ನಲ್ಲಿ ಕಾಣದೆ, ತನ್ನ ನಿರ್ಹೇತುಕವಾದ ದಯೆಯಿಂದಲೇ ತಾನೇ ಸರ್ವೇಶ್ವರನೆಂದೂ ತನ್ನ ಕೈಂಕರ್ಯವೇ ಪುರುಷಾರ್ಥವೆಂದೂ, ನನಗೆ ತಿಳಿಸಿಕೊಟ್ಟು, ಈ ಅರ್ಥವನ್ನು ಪರೋಪದೇಶ ಮಾಡಿ ಸಂತೋಷಿಸುವಂತೆಯೂ ಅನುಗ್ರಹಿಸಿ, ನನ್ನ ಹೃದಯದೊಳಗೇ ಹುದುಗಿರುವನು. ಇನ್ನು ಇಲ್ಲಿಂದ ಒಂದು ಹೆಜ್ಜೆಯೂ ಎಲ್ಲೂ ಕದಲಲಾರನು. ಎಂದು ಹೇಳಿ ಸಂತೋಷಿಸುತ್ತಾರೆ. "ನನ್ನ ಸುಳ್ಳುಮಾತುಗಳನ್ನು ಕೇಳಿ ಸರ್ವಜ್ಞನಾದ ನೀನೂ ಕೂಡ ಮಂಕು ಬಡಿದು ಪರಮ ಪುರುಷಾರ್ಥವನ್ನು ಕೊಟ್ಟೆ. ನಿನ್ನ ದಯೆ ಅಪಾರವಾದುದು" ಎಂದು ಆಶ್ಚರ್ಯಪಡುತ್ತಾರೆ.

पोलिहपोलिह ५. २.

विष्णोः परत्वमुपदिश्य शठारिरेषः
लोकं समृद्धहरिभक्तजनैस्सुपूर्णम् ।
दृष्ट्वा मुदा शुभममुष्य समाशशासे
तद्द्रोधिनामुपशमञ्च विलोक्य धन्यः ॥११९॥

कलिर्नष्टः कृतं प्राप्तं वैष्णवश्रीर्विवर्धते ।
भक्त्या गायन्ति नृत्यन्ति जयघोषञ्च तन्वते ॥१२०॥

ಹೀಗೆ ಭಗವಂತನ ಪರತ್ವವನ್ನುಪದೇಶಿಸಲು, ಪ್ರಪಂಚದಲ್ಲಿ ಹರಿಭಕ್ತ

ರಲ್ಲದವರೇ ಇಲ್ಲದಂತಾಗಿ, ಎಲ್ಲೆಲ್ಲೂ ಹರಿಭಕ್ತರೇ ತುಂಬಿ ಹೋದದ್ದನ್ನು ಕಂಡು ಅವರಿಗೆಲ್ಲಾ ಮಂಗಳಾಶಾಸನ ಮಾಡುತ್ತಾರೆ. ಹೀಗೆ ಶ್ರೀವೈಷ್ಣವ ಶ್ರೀಯು ವೃದ್ಧಿಯಾದ ಮೇಲೆ ಕಲಿಯುಗವೆಲ್ಲಿಯದು? ಅದು ಹೋಯಿತು, ಕೃತಯುಗ ನಡೆಯುತ್ತಿದೆ. ಏಕೆಂದರೆ— ಕೃತಯುಗದಂತೆ ಎಲ್ಲೆಲ್ಲೂ ಭಗವದ್ಭಕ್ತರು ಭಗವಂತನ ಗುಣಗಾನವನ್ನು ಮಾಡುತ್ತಾ ಆನಂದದಿಂದ ಕುಣಿದಾಡುತ್ತಾ ಅವನಿಗೆ ಜಯಕಾರ ಮಾಡುತ್ತಿರುವರು.

माशरुशोति ५. ३.

सर्वान्गुणान्समनुभूय हरेश्शठारि-
दिव्यं वपुश्च मनसा बहिरस्य योगम् ।
वाञ्छन्प्रसारितभुजस्तमनाप्य दुःखा-
त्कामिन्यभूत्सपदि काचिदलब्धकान्ता ॥१२१॥

चित्रे निवेश्य दयितं परिगृह्य हस्ते
स्नानाशनादि च विहाय विमुक्तकेशा ।
तन्नाम च प्रकटयन्त्यमुना ममेयं
प्राप्ता दशेत्यनुपुरं विचरेयमद्धा ॥१२२॥

इत्युक्तिमाकर्ण्य सखी जगाद मैवं वधूदूषणमेतदेव ।
यथानिषिद्धापि जहौ न भावं तदा भियागत्य समेयिवान्सः ॥१२३॥

ಭಗವಂತನ ಸಮಸ್ತಗುಣಗಳನ್ನೂ ದಿವ್ಯಮಂಗಳವಿಗ್ರಹವನ್ನೂ ಮಾನಸಿಕವಾಗಿ ಅನುಭವಿಸಿ ಬಾಹ್ಯ ಸಂಶ್ಲೇಷಾಪೇಕ್ಷೆಯಿಂದ ಕೈ ನೀಡುವರು. ಅವನು ಕೈಗೆ ಸಿಗಲಿಲ್ಲ. ಆ ದುಃಖವಿಮ್ಮಡಿಸಿ ಪತಿಯನ್ನೈದದ ಕಾಮಿನಿಯಾದರು. "ಪತಿಯನ್ನು ಚಿತ್ರಪಟದಲ್ಲಿ ಬರೆದು, ಆ ಚಿತ್ರಪಟವನ್ನು ಎಲ್ಲರಿಗೂ ಕಾಣುವಂತೆ ಕೈಯಲ್ಲಿ ಹಿಡಿದು, ಸ್ನಾನ, ಊಟಗಳನ್ನೆಲ್ಲಾ ತೊರೆದು,

ತಲೆ ಬಿಚ್ಚಿಕೊಂಡು, ನಾಯಕನ ಹೆಸರನ್ನು ಹೇಳುತ್ತಾ, ಇವನಿಂದ ನನಗೆ ಈ ಸ್ಥಿತಿ ಪ್ರಾಪ್ತವಾಯಿತು. ಎಂದು ಡಂಗೂರ ಹಾಕುತ್ತಾ ಊರೂರು ತಿರುಗುವೆನು. ಆಗ ಅವಮಾನದಿಂದ ತಾನೇ ತಾನಾಗಿ ನನ್ನಲ್ಲಿಗೆ ಓಡಿ ಬರುವನು” ಎಂದು ನಾಯಕಿಯು ಹೇಳುತ್ತಾಳೆ. ಅದನ್ನು ಕೇಳಿ ಸಖಿಯು, “ಅಮ್ಮ! ಹೆಂಗಸಿಗೆ ಇದು ತಕ್ಕುದಲ್ಲ”ವೆಂದಳು. ಅದನ್ನು ಕೇಳದೆ ತನ್ನ ಉದ್ದೇಶವನ್ನು ಯಾವಾಗ ನಾಯಕಿಯು ಬದಲಿಸಲಿಲ್ಲವೋ ಆಗ ಭಗವಂತನು ಹೆದರಿ ತಾನೇ ತಾನಾಗಿ ಬಂದು ಇವಳೊಂದಿಗೆ ಸಂಶ್ಲೇಷಿಸಿದನು.

ऊरेल्लान्तुञ्जि ५. ४.

दौर्बल्याच्चित्रलेखप्रभृतिषु वितथेष्वर्धरात्रे च दैवात्
सम्प्राप्ते सर्वजन्तुष्वपि विलयसमां सुप्तिमाप्तेषु गाढाम् ।
दृष्ट्वा रात्रिं सुदीर्घामुदयविरहितां क्रन्दतीयं मुमूर्षुः
दीनानाथैकरक्षाव्यसनिनमुदधेः पुत्रिकायाः प्रियन्तम् ॥१२४॥

ಇವರಲ್ಲಿ ನಾಯಕಿಯು ತನ್ನ ರಾತ್ರಿ ವ್ಯಸನವನ್ನು ಹೇಳುವಳು. ನಾಯಕನನ್ನು ಚಿತ್ರದಲ್ಲಿಯಾದರೂ ನೋಡೋಣವೆಂದರೆ ಅಂಗ ಶೈಥಿಲ್ಯದಿಂದ ಚಿತ್ರಬರೆಯಲೂ ಆಗದೆ ಹೋಯಿತು. ಇವಳ ದುರದೃಷ್ಟದಿಂದ ಅರ್ಧರಾತ್ರಿಯಾಯಿತು. ಎಲ್ಲಾ ಪ್ರಾಣಿಗಳೂ ಏನೂ ಇಲ್ಲವೇ ಇಲ್ಲವೆನ್ನುವಷ್ಟು ಗಾಢ ನಿದ್ರೆಯಲ್ಲಿ ಮುಳುಗಿದ್ದುವು. ಇವಳಿಗೆ ರಾತ್ರಿ ಉದ್ದುದ್ದವಾಗಿ ಬೆಳೆಯುತ್ತಿದೆ. ಸೂರ್ಯೋದಯವೇ ಕಾಣಲಿಲ್ಲ. ವಿಶ್ಲೇಷವ್ಯಸನವೋ ಇವಳನ್ನು ಸಾಯುವ ಸ್ಥಿತಿಗೆ ತಂದಿರಿಸಿದೆ. ಈ ಸಮಯದಲ್ಲಿ ದೀನಾನಾಥ ರಕ್ಷಕನಾದ ಲಕ್ಷ್ಮೀವಲ್ಲಭನನ್ನು ದುಃಖಾತಿಶಯದಿಂದ ಕೂಗಿಕೊಳ್ಳುತ್ತಾಳೆ. ವ್ಯಾಧಿಗ್ರಸ್ತೆಗೆ ರಾತ್ರಿ ಕಳೆಯುವುದೇ ಬಹಳ ಕಷ್ಟವಲ್ಲವೆ?

एङ्गनेयोनीर् ५. ५.

व्यतीता सा रात्री रविरुदयमाप्तः परितपन्
सखी माता दोषप्रकथनपराश्च प्रबुधिताः ।

प्रतीकान्भूषाश्चाप्यतिमधुररूपान्भगवतो
विलोक्यापि स्वान्ते बहिरनवलोकाद्विलपति ॥१२५॥

प्रवृत्तस्साधने पूर्वं ततः प्राप्यत्वरां जहौ ।
अत्र दुःखं सुखञ्च द्वे समेऽनुभवति स्वयम् ॥१२६॥

ಆ ಕ್ರೂರವಾದ ರಾತ್ರಿ ಕಳೆಯಿತು. ಸೂರ್ಯೋದಯವಾಯಿತು. ಮಲಗಿದ್ದ ಸಖಿ, ತಾಯಿ, ಈ ನಾಯಕಿಯ ಮೇಲೆ ದೋಷ ಹೇಳುವವರು, ಎಲ್ಲರೂ ಎಚ್ಚೆತ್ತರು. ಆಗ ಭಗವಂತನ ಭವ್ಯತಮವಾದ ದಿವ್ಯ ಮಂಗಳ ವಿಗ್ರಹ— ಗುಣಗಳು– ಇವನ್ನೆಲ್ಲಾ ಮಾನಸಿಕವಾಗಿ ಅನುಭವಿಸಿದರೂ ಬಾಹ್ಯಾನುಭವಕ್ಕೆ ಸಿಲುಕದ್ದರಿಂದ ಗೋಳಿಡುತ್ತಾರೆ. ೫–೩ ರಲ್ಲಿ ಸಾಧನಾನುಷ್ಠಾನಕ್ಕೆ ತೊಡಗಿದರು. ೫–೪ ರಲ್ಲಿ ಪ್ರಾಪ್ಯತ್ವರೆಯನ್ನು ತೊರೆದರು. ಈ ದಶಕದಲ್ಲಿ ಸುಖದುಃಖಗಳೆರಡನ್ನೂ ಸಮಾನವಾಗಿ ಅನುಭವಿಸುವರು.

कडल्ञालं ५. ६.

विश्लेषव्यसनादमुष्य जनिता स्याच्चेन्मुमूर्षा तदा
देवस्स्वेन गुणेन वाथ वपुषामुं धारयेच्छ्रीसखः ।
गोप्यः कृष्णकथानुकारविधृतास्त्वासन्यथा प्राक्तथा
सोऽयं बोधनमुद्रयानुकृतवान्वाचापि गीतागुरुम् ॥१२७॥

अनुकारमजानती तु माता हरिणाविष्टतमामवेत्य वाचा ।
अनुयोगकृतामुपेत्य गेहं वदति स्मैव यथातथं मतं स्वम् ॥१२८॥

वेदान्तसूत्रेष्वहमित्युपासा सिद्धान्तिता तस्य परस्य पुंसः ।
मुक्तौ च भोगोऽप्यहमित्यतो हि प्रह्लादपूर्वा इव वक्ति सोऽग्रम् ॥१२९॥

ಈ ಆಳ್ವಾರರಿಗೆ ವಿಶ್ಲೇಷದಿಂದ ಸಾಯಬೇಕಾದ ಸ್ಥಿತಿ ಬಂದಾಗ—

ಭಗವಂತನು ತನ್ನ ದಿವ್ಯ ಮಂಗಳ ವಿಗ್ರಹವನ್ನಾಗಲಿ, ಗುಣಗಳನ್ನಾಗಲಿ ತೋರಿಸಿಕೊಟ್ಟು, ಇವರನ್ನು ಬದುಕಿರುವಂತೆ ಮಾಡುವನು. ರಾಸಕ್ರೀಡೆಯ ಅನಂತರ ಕೃಷ್ಣನು ಕಣ್ಮರೆಯಾದಾಗ ಗೋಪಿಗಳು "ದುಷ್ಟ ಕಾಳೀಯ, ತಿಷ್ಠಾತ್ರ" ಇತ್ಯಾದಿಯಾಗಿ ಆ ಕೃಷ್ಣನನ್ನು ಅನುಕರಿಸಿ ಧರಿಸಿದಂತೆ ಈ ನಾಯಕಿಯೂ ಕೂಡ ಅವನ ವಿಶ್ಲೇಷದಲ್ಲಿ ಗೀತಾಚಾರ್ಯನಾದ ಪಾರ್ಥ ಸೂತನನ್ನನುಕರಿಸಿ ಜ್ಞಾನಮುದ್ರೆಯನ್ನು ಧರಿಸಿ, ಅವನು ಹೇಳುವ "ಅಹಂ ಸರ್ವಸ್ಯ ಪ್ರಭವಃ" ಇತ್ಯಾದಿ ಮಾತುಗಳನ್ನೇ ತಾನೂ ಆಡುತ್ತಾ ಪ್ರಾಣವನ್ನು ಧರಿಸಿದ್ದಳು. ತಾಯಿಯಾದವಳು ಎದುರಿಗೇ ನೋಡುತ್ತಿದ್ದರೂ "ಇದು ಅನುಕರಣ; ಅನುಕರಣದಿಂದ ಧರಿಸಿರುವಳು." ಎಂಬ ಅಂಶ ತಿಳಿಯದೆಯೇ "ಭಗವಂತನು ಇವಳಲ್ಲಿ ಆವೇಶಗೊಂಡಿದಾನೆಂ"ದು ಇವಳ ಮಾತಿನಿಂದ ಊಹಿಸಿದಳು. ಮತ್ತೆ "ನಿನ್ನ ಮಗಳಿಗೇನು ಖಾಯಿಲೆ?" ಎಂದು ಕೇಳುವವರ ಮನೆಗೆಲ್ಲಾ ಹೋಗಿ ತನಗೆ ತೋರಿದಂತೆಲ್ಲಾ ಉತ್ತರ ಹೇಳುತ್ತಿದ್ದಳು.

ಬ್ರಹ್ಮಸೂತ್ರದಲ್ಲಿ ಆ ಪರಮಾತ್ಮನನ್ನು "ಅಹಮಹಂ" ಎಂದು ಅಹಂಗ್ರಹೇಣ ಉಪಾಸನ ಮಾಡಬೇಕೆಂದು ತೀರ್ಮಾನಿಸಿದೆ. ಹಾಗೆಯೇ ಮೋಕ್ಷದಶೆಯಲ್ಲೂ ಕೂಡ "ಅಹಮನ್ನಂ" ಇತ್ಯಾದಿಯಾಗಿ 'ಅಹಂ' ಎಂದೇ ಅನುಭವವೂ ಕೂಡ ಶಾಸ್ತ್ರ ಸಿದ್ಧವಾದುದು. ಪ್ರಹ್ಲಾದ ಮೊದಲಾದ ಜ್ಞಾನಿಗಳೂ ಕೂಡ "ಮತ್ತಸ್ಸರ್ವಮಹಂ ಸರ್ವಂ" ಇತ್ಯಾದಿಯಾಗಿ ಉಪದೇಶ ಮಾಡಿದಾರೆ. ಹಾಗೆಯೇ ಜ್ಞಾನಿಗಳಿಗೆ ಅಗ್ರಗಣ್ಯರಾದ ಆಳ್ವಾರರು "ಮತ್ತಸ್ಸರ್ವ-ಮಹಂ ಸರ್ವಂ" ಇತ್ಯಾದ್ಯಂಶಗಳನ್ನೇ ಈ ದಶಕದಲ್ಲಿ ಅನುಭವಿಸಿ ಹೇಳುವರು.

ನೋತ್ತನೋನ್ಬಿಲೆನ್ ೫. ೭.

तासामाविरभून्न मेऽनुकरणेप्येतस्य हेतुस्त्वयम्
विश्लेषासहनत्वमस्य मम यत्तत्साधनं मन्यते ।
वार्ता भ्रान्तिरियं मयेति कलयंस्तोताद्रिनाथं जगौ
कर्मज्ञानविरक्तिभक्तिरहितस्त्वामेव सेतुं वृणे ॥१३०॥

ಗೋಪಿಗಳು ಅನುಕರಣ ಮಾಡಿದ ಕ್ಷಣ ಕೃಷ್ಣನು ಅವರಿಗೆಲ್ಲಾ ದರ್ಶನ

ಕೊಟ್ಟ. ನಾನು ಅನುಕರಣವಾಡಿದರೂ ಎದುರಿಗೆ ಬರಲಿಲ್ಲವಲ್ಲಾ! ಕಾರಣ ವೇನು? ಓಹೋ! ಗೊತ್ತಾಯಿತು" ಇವನ ಅಗಲಿಕೆಯುನ್ನು ನಾನು ಸಹಿಸ ಲಾರೆನಷ್ಟೆ! ಅದನ್ನೇ ನಾನು ಮಾಡುತ್ತಿರುವ ಸಾಧನವೆಂದು ತಿಳಿದಿರುವನು. ಅವನ ಈ ಭ್ರಮವನ್ನು ಮೊದಲು ನೀಗಿಸಬೇಕೆಂದು ಯೋಚಿಸಿ (ನಾನಮಾ ಮಲೈ) ತೋತಾದ್ರಿ ನಾಥನನ್ನು ಶರಣಹೊಂದಿ, ಕರ್ಮ, ಜ್ಞಾನ, ಭಕ್ತಿ ಮುಂತಾದ ಯಾವೊಂದು ಸಾಧನಾನುಷ್ಠಾನವೂ ನನ್ನಲ್ಲಿಲ್ಲ. "ಅಮೃತಸ್ಯೈಷ ಸೇತುಃ" ಎಂಬಂತೆ ನೀನೇ ಉಪಾಯವೆಂದರು.

आरावमुदे ५. ८.

तोताद्रिनाथचरणौ शरणङ्गतोऽपि
श्रीकुम्भघोणशयनं शरणं प्रपेदे ।
सर्वस्वतन्त्रहृदयं नहि कोऽपि वेत्ति
दृष्टान्ततात्र भरताचरितप्रपत्तेः ॥१३१॥

मुहुः प्रपत्तेरफलत्वदर्शनेऽप्यनन्यसाध्यत्वविनिश्चयात्स्थितात् ।
हृष्यंस्तदालिङ्गनभाषणेक्षणाद्यनाप्य खिन्नो भवतीह मौनिराट् ॥१३२॥

ತೋತಾದ್ರಿನಾಥನಲ್ಲಿ ಶರಣಾಗತಿ ಮಾಡಿದರೂ ಅದು ಪ್ರಯೋಜನ ವಾಗಲಿಲ್ಲ. ಅದಕ್ಕಾಗಿ ಕುಂಭ ಘೋಣದಲ್ಲಿರುವ (ಆರಾವಮುದಂ) ಶಾರ್ಙ್ಗ ಪಾಣಿಯಲ್ಲಿ ಪ್ರಪತ್ತಿಮಾಡುವರು. ಹೀಗೆ ಮಾಡಿದ ಪ್ರಪತ್ತಿ ವ್ಯರ್ಥವಾಗಬ ಹುದೆ? ಸಂದೇಹವೇನು? ಅವನು ಸರ್ವಸ್ವತಂತ್ರ. ಅವನ ಹೃದಯುವನ್ನ ರಿತವರಾರು? ಅಯೋಧ್ಯೆಗೆ ತೆರಳಲೇ ಬೇಕೆಂದು ಹಠವಾಗಿದ್ದ ಭರತನ ಶರಣಾಗತಿ ವ್ಯರ್ಥವಾಗಲಿಲ್ಲವೆ? ಹೀಗೆ ಅನೇಕ ಸಲ ಪ್ರಪತ್ತಿ ಮಾಡಿದರೂ ಅದು ವ್ಯರ್ಥವಾದ ಮೇಲೆ ಸುಮ್ಮನಿರಬಾರದೆ? ಹಾಗಲ್ಲ. ಪ್ರಪತ್ತಿಯು ಉಪಾಯುವಲ್ಲದ್ದರಿಂದಲೂ, ಸಿದ್ಧೋಪಾಯನಾದ ಭಗವಂತನೇ ಉಪಾಯ ವೆಂಬ ನಿಶ್ಚಯದಿಂದಲೂ ಆನಂದಭರಿತರಾಗಿಯೇ ಇದ್ದರು. ಆದರೂ ಅವನ

Funding: IKS/Tattva Heritage. Digitization: Sarayu Trust/eGangotri

ಕಟಾಕ್ಷ, ಆಲಿಂಗನ, ಸಂಭಾಷಣ ಇವುಗಳೆಲ್ಲಾ ಲಭಿಸದೆ ಅದಕ್ಕಾಗಿ ಬಹಳ ಖಿನ್ನರಾಗುತ್ತಾರೆ.

मानेय्नोक्कु ५. ९.

तोताद्रिनाथघटघोणपतिप्रपत्ती
व्यर्थे विलोक्य हृदये व्यथितोऽपि सूरिः ।
विश्वासदार्ढ्यवशगस्तिरुवल्लवाळ-
मभ्येत्य चापलवशाद्बलहानिमाप्तः ॥१३३॥

अप्राप्य तन्नगरमस्य बहिः प्रदेशे
स्थित्वानुभूय नगरान्तरचिलनादान् ।
स्त्रीत्वं प्रपद्य तु सखीं स्वनिषेधकर्त्रीं
पृच्छत्यमुं किमु लभेय वदेति शोकात् ॥१३४॥

ತೋತಾದ್ರಿನಾಥನಲ್ಲೂ ಆರಾವಮುದನಲ್ಲೂ ಮಾಡಿದ ಪ್ರಪತ್ತಿಗಳು ವ್ಯರ್ಥವಾದುವು. ಮನಸ್ಸಿನಲ್ಲಿ ಬಹಳ ಖೇದವಾಯಿತು. ಪ್ರಪತ್ತಿಯಲ್ಲಿಯ ಮಹಾವಿಶ್ವಾಸದಿಂದಲೂ, ಅವನೇ ಸಿದ್ಧೋಪಾಯವೆಂಬ ದೃಢಾಧ್ಯವಸಾಯದಿಂದಲೂ, ಆಸೆ ಮತ್ತೆ ಅಂಕುರಿಸಿ ನಾಯಕಿಯಾಗಿ "ತಿರುವಲ್ಲವಾಳ್" ಎಂಬ ದಿವ್ಯದೇಶಕ್ಕೆ ಹೋದರು. ಶರೀರವೆಲ್ಲಾ ಸೋತುಹೋಗಿ ಮುಂದಕ್ಕೆ ಹೋಗಲಾರದೆಯೇ ಊರಹೊರಗಡೆಯೇ ನಿಂತುಬಿಟ್ಟಳು. ಊರೊಳಗೆ ನಡೆಯುತ್ತಿರುವ ವೇದಘೋಷ, ಉತ್ಸವಧ್ವನಿ, ಮುಂತಾದ ನಾನಾವಿಧ ಧ್ವನಿಗಳನ್ನೆಲ್ಲಾ ಕೇಳುತ್ತಲೇ ಇದ್ದಳು. ಊರೊಳಗೆ ನಡೆಯುತ್ತಿರುವ ಸಂಭ್ರಮ ತಿಳಿಯುತ್ತಿದೆ. ಹೋಗಲೇ ಬೇಕೆಂಬ ತ್ವರೆ. ಕೈಲಾಗದ್ದರಿಂದ ಕಟ್ಟಿಹಾಕಿದಂತೆ ಒಳಕ್ಕೆ ಹೋಗಲಾರದೆ ಕ್ಲೇಶ. ಈ ರೀತಿ ಕಷ್ಟಪಡುತ್ತಿದ್ದಾಗ ಸಖಿಯು ಬೇಡವೆಂದು ತಡೆದಳು. ಆಗ "ಸಖಿ! ತಿರುವಲ್ಲವಾಳ್ ಸ್ವಾಮಿಯು ನನಗೆ ಲಭಿಸುವನೆ? ಇಲ್ಲವೆ? ಹೇಳು" ಎಂದು ಶೋಕಾತಿಶಯದಿಂದ ಕೇಳುವಳು.

पिरन्दवारुं ५. १०.

आलिङ्गनालापनिरीक्षणादिभोगाप्रदानात्परिहृत्य सोऽर्चाः ।
तद्दानयोग्यान्विभवांस्ततोऽपि कृष्णावतारं प्रथमं निदध्यौ ॥१३

तेनापि शैथिल्यमवाप्य खिन्नो धृतिं ययाचे शरणं प्रपन्नः ।
विश्लेषकाले तु गुणास्स्मृतास्ते हिंसन्ति मां वारय तन्महेश ॥१३

सर्वेश्वरं द्वारवतीस्थितं तं द्रष्टुं जगामाशु कुतूहलेन ।
सोऽपि प्रपेदे स्वकमेव लोकं श्रुत्वेत्थमाक्रोशति दीनदीनः ॥१३

"ಓಹೋ! ಭಗವಂತನಿಗೆ ಅರ್ಚಾವತಾರದಲ್ಲಿ ಕಟಾಕ್ಷ, ಸಂಭಾಷ ಆಲಿಂಗನ ಇವುಗಳನ್ನು ಕೊಡುವ ಸಂಕಲ್ಪವಿಲ್ಲ. ಅದೆಲ್ಲಾ ಲಭಿಸಬೇಕಾ ವಿಭವಾವತಾರದಲ್ಲಿ" ಎಂದು ಯೋಚಿಸಿ ಕೃಷ್ಣಾವತಾರವನ್ನು ಮೊದ ಧ್ಯಾನಿಸಿದರು. ಅದರಲ್ಲೂ ಅವು ದೊರಕದೆ ಶಿಥಿಲಾಂಗರಾದರು. ಮ ದುಃಖವಿಮ್ಮಡಿಸಿತು. "ನಿನ್ನ ಅಗಲಿಕೆಯ ಕಾಲದಲ್ಲಿ ಧರಿಸಿರಲು ನಿನ್ನ ಗ ಗಳನ್ನು ನೆನೆಸಿದರೆ ಅವುಗಳೇ ಪ್ರಬಲವಾಗಿ ಹಿಂಸಿಸುವುವು. ಅದನ್ನು ತಪ್ಪಿ ನಿನ್ನ ವಿಶ್ಲೇಷದಲ್ಲಿ ನನಗೆ ಧಾರಣಸಾಮರ್ಥ್ಯವನ್ನು ಅನುಗ್ರಹಿಸು." ಎ ಶರಣಾಗತರಾಗುತ್ತಾರೆ. ಮತ್ತೆ ಸ್ವಲ್ಪ ಚೈತನ್ಯ ಪಡೆದು ದ್ವಾರಕಾಧೀಶನಾ ಕೃಷ್ಣನನ್ನು ದರ್ಶಿಸಲು ಬಹಳ ಕುತೂಹಲದಿಂದ ತೆರಳುವರು. ಅಲ್ಲಿ ಹೋ "ಶ್ರೀಕೃಷ್ಣನು ಈಗ ತಾನೆ ತನ್ನ ಲೋಕಕ್ಕೆ ತೆರಳಿದನಲ್ಲಾ!" ಎಂದು ಬಹಳ ಸಂಕಟವಾಯಿತು. ದೈನ್ಯದಿಂದ ಹೋ! ಎಂದು ಗೋಳಿಡುವರು.

वैहल्पूङ्कळि ६. १.

सत्क्रियार्हामविलम्ब्य दात्रीं फलं त्वमोघां शरणागतिं सः ।
कृत्वा चतुर्वारमथापि चेष्टं कुतो न लेभे शठजिन्मुनीन्द्रः ॥१३

इत्येव शङ्का नहि कर्तुमर्हा शठारिवत्सर्वजनोऽपि रक्ष्यः ।
प्रबन्धपूर्तिश्शठकोपसत्त्वाधीना प्रबन्धो जगतां हिताय ॥१३९॥

अतो मुनेरिष्टफलानवाप्तिस्ततः प्रबन्धाध्ययनेन मोक्षः ।
तस्मात्प्रबन्धाध्ययनन्तु सर्वैरवश्यकर्तव्यमिति प्रतिष्ठा ॥१४०॥

अर्चास्वालापवीक्षाद्यखिलविधुरतां वीक्ष्य हित्वा ततस्ताः
तद्योग्यं कृष्णमेव प्रतिगतहृदयोऽतीतकालो निवृत्तः ।
नित्यं सान्निध्यतस्ताः पुनरपि गणयंस्तत्र गन्तुं ह्यशक्तः
तत्रत्यान्पक्षिणस्तं प्रति गमयति तद्दूतभावेन सूरिः ॥१४१॥

ಒಂದೇ ಸಲ ಮಾಡತಕ್ಕುದಾಗಿಯೂ, ಈ ಜನ್ಮದ ಕೊನೆಯಲ್ಲೇ ಫಲ ಪ್ರದವಾಗಿಯೂ, ನಿರರ್ಥಕವಲ್ಲದೆಯೂ ಇರುವ ಪ್ರಪತ್ತಿಯನ್ನು ಈ ಆಳ್ವಾರರು ನಾಲ್ಕು ಸಲ ಮಾಡಿದಾಗ್ಯೂ ಏಕೆ ಫಲಿಸಲಿಲ್ಲ? ಎಂದು ಶಂಕಿಸಬಾರದು. ಏಕೆಂದರೆ ನಮ್ಮಾಳ್ವಾರರಂತೆಯೇ ಎಲ್ಲಾ ಚೇತನವರ್ಗಗಳೂ ಆ ಭಗವಂತ ನಿಗೆ ರಕ್ಷ್ಯರೇ ಹೌದು. ರಕ್ಷಣ ಈ ಆಳ್ವಾರರ ಪ್ರಬಂಧದಿಂದಲೇ ಆಗಬೇಕು. ಪ್ರಬಂಧ ಪೂರ್ತಿಯಾಗಬೇಕಾದರೆ ಆಳ್ವಾರರು ಜೀವಂತರಾಗಿರಲೇಬೇಕು. ಆದುದರಿಂದಲೇ ಆಳ್ವಾರರ ಇಷ್ಟ ತತ್ಕ್ಷಣ ನೆರವೇರಲಿಲ್ಲ. ಈ ಪ್ರಬಂಧ ಕಲಿತವರಿಗೆ ಮೋಕ್ಷ ಸಿದ್ಧವಾದುದರಿಂದ ಎಲ್ಲರೂ ಈ ಪ್ರಬಂಧವನ್ನು ಅಧ್ಯಯನ ಮಾಡಬೇಕೆಂದು ತೀರ್ಮಾನಿಸಿದಾರೆ.

ಹಿಂದೆ ಹೇಳಿದಂತೆ ಅರ್ಚಾವತಾರದಲ್ಲಿ ಸಂಭಾಷಣಾದಿಗಳಿಲ್ಲವಾದ ಕಾರಣ ಅರ್ಚಾವತಾರದ ಗೋಜಿಗೇ ಹೋಗಲಿಲ್ಲ. ಅದಕ್ಕೆ ತಕ್ಕುದು ವಿಭವಾವತಾರವೆಂದು ತೀರ್ಮಾನಿಸಿ ಶ್ರೀಕೃಷ್ಣನಿರುವ ಸ್ಥಳಕ್ಕೆ ಹೋಗಲು ಕೈಲಾಗದೆ ಅವನಿಗೆ ಪಕ್ಷಿಗಳನ್ನು ದೂತರನ್ನಾಗಿ ಕಳುಹುವರು. ಅದಕ್ಕೆ ಪಕ್ಷಿ ಗಳು "ಅವನ ಗುರುತೇನು? ಎಲ್ಲಿರುವನು?" ಎಂದುವು. "ಇಲ್ಲಿಯೇ

'ತಿರುವಣ್ ವಣ್ಡೂರ್' ಎಂಬ ದಿವ್ಯದೇಶದಲ್ಲಿ ನಿತ್ಯ ಸನ್ನಿಹಿತನಾಗಿರುವ
ಅವನಿಗೆ ಹೇಳಿರಿ" ಎಂದು ದೂತ ಪ್ರೇಷಣ ಮಾಡುತ್ತಾರೆ.

सिन्दिडैमडवार् ६. २.

श्रुत्वा स सन्देशमुपैति यावत्तावद्विलम्बं सहते स्म नैषा ।
प्राप्तं तमालोक्य सखीसमक्षं निराचकार प्रणयप्रकोपात् ॥१४२

स चाप्युपायैर्बहुभिः प्रसाद्य कथञ्चिदाश्लिष्य कृती बभूव ।
विश्लेषतो यस्य विनष्टकल्पा सा तं कथंवाद्य निराचकार ॥१४३

ದೂತರನ್ನು ಕಳುಹಿದ ಕ್ಷಣದಲ್ಲೇ ಭಗವಂತನು ಬಾರದೇ ಸ್ವಲ್ಪ
ಮಾಡಿದ. ಅದನ್ನೂ ಸಹಿಸಲಾರದೆ ಹತ್ತಿರಕ್ಕೆ ಬಂದವನನ್ನೂ ಸಹ ಸಖಿ
ದುರಿಗೇ ಪ್ರಣಯಕೋಪದಿಂದ ತಳ್ಳಿದಳು. ಅವನೂ ನಾನಾವಿಧವಾದ
ನಯಗಳಿಂದ ಬಹಳ ಪ್ರಯಾಸಪಟ್ಟು ಇವಳನ್ನೂ ಆಲಂಗಿಸಿ ಧನ್ಯನಾದ.

नलकुरवुं शेल्वुम् ६. ३.

स्वस्याभिसंधिमनपोह्यमपोह्य युक्त्या
स्वेनैकतां गमयतः पुरुषोत्तमस्य ।
सामर्थ्यमप्रतिहतं सुविचिन्त्यसूरिम्
चित्रीयमाणहृदयं पुनराह शौरिः ॥१४४

चातुर्यं मम नैतदेव जगति प्रायो विरुद्धं तु यत्
तत्सर्वं मयि सङ्गतं स्पृशति तद्दोषो न मामप्यणुः ।
शास्तृत्वं मम सौन्दरीमसदृशीं पश्यात्र सौशील्यमि-
त्युक्त्वादर्शयदस्य विण्णहरगं स्वात्मानमेषोऽस्तुवत् ॥१४५

ಯಾರನ್ನು ಅಗಲಿದರೆ ಮಹಾದುಃಖವಾಗಿತ್ತೋ, ಅಂತಹವನನ್ನು ಕರೆಯಲು ದೂತರನ್ನು ಕಳುಹಿದಳು. ತತ್ ಕ್ಷಣ ಬಾರದಿರಲು ಸಖಿಗಳೆದುರಿಗೇ ಅವನನ್ನು ತಳ್ಳಿದಳು. ಅವನು ಎಷ್ಟೇ ಸಮಾಧಾನ ಪಡಿಸಿದರೂ ತನ್ನ ಅಭಿಪ್ರಾಯವನ್ನು ಬದಲಿಸಲಿಲ್ಲ. ಆಗ ಇವಳು ತನ್ನ ನಿರ್ಧರವನ್ನು ಮರೆತು ಬಿಡುವಂತೆ ಯುಕ್ತಿಮಾಡಿ, ಭಗವಂತನು ಇವಳೊಂದಿಗೆ ಏಕೀಭವಿಸಿದನು. ತಡೆಯಿಲ್ಲದ ಇವನ ಈ ಸಾಮರ್ಥ್ಯವನ್ನು ನೋಡಿದರು. ಮನಸ್ಸಿನಲ್ಲೇ ಬಹಳ ಆಶ್ಚರ್ಯಪಟ್ಟರು. ಆಗ ಭಗವಂತನು "ಆಳ್ವಾರರೇ! ನನ್ನ ಚಾತುರ್ಯ ಇಷ್ಟೇ ಅಲ್ಲ. ಈ ಪ್ರಪಂಚದಲ್ಲಿ ಪರಸ್ಪರ ವಿರುದ್ಧವಾದುದು ಯಾವುದೋ ಅದೆಲ್ಲಾ ನನ್ನಲ್ಲೇ ಇವೆ. ಅವುಗಳ ದೋಷ ಈಷತ್ತೂ ನನಗೆ ಅಂಟಲಾರದು. ಅವೆಲ್ಲವನ್ನೂ ನಾನೇ ನಿಯಮಿಸುವವನು. ನನ್ನ ಸೌಂದರ್ಯವನ್ನೂ ಸೌಶೀಲ್ಯವನ್ನೂ ನೋಡಿರಿ" ಎಂದು 'ತಿರುವಿಣ್ಣಹರ್' ಎಂಬ ದಿವ್ಯದೇಶಲ್ಲಿರುವ ತನ್ನನ್ನು ತೋರಿಸಿಕೊಟ್ಟ. ಆಗ ಅವನನ್ನು ಸ್ತುತಿಸುವರು.

कुरवैयायुच्चिय ६. ४.

तिरुविण्णहरधिनाथं शीलौदार्यादिभिस्सम्यक् ।
अनुभूय हृष्टमेनं पुनरपि हृष्टं चकार हरिरत्र ॥१४६॥

पञ्चमशतकस्यान्त्ये दशके यद्याचितं मुनिना ।
तत्कृष्णचरितमादित आन्तं सन्दर्शितं हरिणा ॥१४७॥

तद्दृष्ट्वा सन्तुष्टो नाऽन्यो मत्तोऽस्ति कृतकृत्यः ।
इत्याह कारिसूनुष्षष्ठस्य तुरीयके दशके ॥१४८॥

आदिकविर्वाल्मीकिर्यथा न जानाति राघवादन्यम् ।
एवं कृष्णादन्यं मुनिर्न वेदेति सुव्यक्तम् ॥१४९॥

ತಿರುವಿಣ್ಣಹರ್ ಸ್ವಾಮಿಯನ್ನು ಅವನ ಸೌಶೀಲ್ಯೌದಾರ್ಯಾದಿ ಗುಣಗ

ಳನ್ನೂ ಚೆನ್ನಾಗಿ ಅನುಭವಿಸಿ ಆನಂದಿಸಿದರು. ಮತ್ತೆ ಆನಂದದ ಮೇಲೆ ಆನಂದ ಕೊಟ್ಟ. ೫. ೧೦. ರಲ್ಲಿ ಇವರು ಆಶೆಪಟ್ಟಂತೆ ಕೃಷ್ಣಾವತಾರಚರಿತ್ರೆಗಳನ್ನು ಮೊದಲಿನಿಂದ ಕಡೆಯುವರೆಗೂ ತೋರಿಸಿಕೊಟ್ಟ. ಅದನ್ನೆಲ್ಲಾ ದರ್ಶಿಸಿ ನನ್ನಂತೆ ಧನ್ಯನೇ ಇಲ್ಲವೆಂದು ಹೇಳಿ ಆನಂದಿಸುವರು. ವಾಲ್ಮೀಕಿಯು ಶ್ರೀರಾಮನನ್ನಲ್ಲದೆ ಬೇರೆ ದೇವರನ್ನೇ ಹೇಗೆ ಕಾಣನೋ ಹಾಗೆಯೇ ಇವರು ಶ್ರೀಕೃಷ್ಣನನ್ನಲ್ಲದೆ ಬೇರಾರನ್ನೂ ಕಾಣರು.

तुवळिल् मामणि ६. ५.

पूर्वोत्तरेषु दशकेषु हरिं स्तुवन्न-
प्यत्रायमात्मन उवाच मुनिस्स्वभावम् ।
तस्मादिदं दशकमात्मगुणादिशिक्षा-
निष्णातमित्यतितरां बहुमान्यमार्यैः ॥१५०॥

पूर्वानुभवस्सर्वो मानस एवाभवत्ततोऽतृप्तः ।
बाह्यानुभवाकांक्षी तदलाभात्कामुकी भूत्वा ॥१५१॥

तुलैविल्लिमङ्गलाख्ये क्षेत्रे तस्येशितू रूपम् ।
भूषामाल्यप्रहरणनामान्युत्कीर्तयन्त्यनिशम् ॥१५२॥

स्निग्धा स्तब्धा मुग्धा क्वचितगात्री च रोमाञ्चैः ।
अश्रुपरिपूर्णनयना खिद्यति शिथिलाङ्गका सततम् ॥१५३॥

तस्मादस्यामाशां त्यजतेति सखी ब्रवीति तन्मातुः ।
प्राप्यरुचिरूपदुहितुर्न विरोधः प्रापकाध्यवसितेश्च ॥१५४॥

ಹರಿಭಕ್ತನಾಗಿರಬಹುದು. ಭಗವಂತನನ್ನು ಸ್ತುತಿಸಬಹುದು. ಆನಂದಿಸಬಹುದು. ಆದರೆ ಅವನು ಹೇಗಿರಬೇಕು? ಗೊತ್ತೇ? ಶಮದಮಾದ್ಯಾತ್ಮ

ಗುಣ ಪರಿಪೂರ್ಣನಾಗಿರಬೇಕು. ಆತ್ಮಗುಣಗಳನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಈ ವಿಷಯವನ್ನೀಗ ಈ ದಶಕದಲ್ಲಿ ತಿಳಿಸುವರು. ಆದುದ ರಿಂದಲೇ ಈ ದಶಕ ಬಹಳ ಮುಖ್ಯವಾದುದು.

ಆಳ್ವಾರರಿಗೆ ಹಿಂದಿನ ಅನುಭವವೆಲ್ಲಾ ಮಾನಸವಾದ್ದರಿಂದ ತೃಪ್ತಿಯಾಗದೆ ಬಾಹ್ಯಾನುಭವಾಪೇಕ್ಷೆಯುಂಟಾಯಿತು. ಅದು ಲಭಿಸದೆ, "ತುಲೈ ವಿಲ್ಲಿ ಮಂಗಲ"ವೆಂಬ ದಿವ್ಯದೇಶದ ಸ್ವಾಮಿಯಲ್ಲಿ ಕಾಮುಕಿಯಾದಳು. ಆ ಸ್ವಾಮಿಯ ರೂಪವನ್ನೂ ಹೂಮಾಲೆಗಳನ್ನೂ ಆಭರಣಗಳನ್ನೂ ಆಯುಧಗಳನ್ನೂ ದಿವ್ಯನಾಮಗಳನ್ನೂ ಯಾವಾಗಲೂ ಕನವರಿಸತೊಡಗಿದಳು. ಆಗ ಇವಳ ಸಖಿಯು ನಾಯಕಿಯ ತಾಯಿಯನ್ನು ಕುರಿತು "ಅಮ್ಮಾ! ನಿನ್ನ ಮಗಳು ತುಲೈ ವಿಲ್ಲಿ ಮಂಗಲದ ಸ್ವಾಮಿಯ ಗುಣಾದಿಗಳಲ್ಲಿ ವ್ಯಾಮುಗ್ಧೆಯಾಗಿ, ರೋಮಾಂಚಿತ ಗಾತ್ರೆಯಾಗಿ, ಸಮಸ್ತಭಾವ ಪೂರ್ಣೆಯಾಗಿ ಕಣ್ಣೀರಿನಿಂದ ತೋಯುತ್ತ್ದು, ಅವಯವಗಳೆಲ್ಲಾ ಸ್ರೋತು ಸೊರಗಿ ಹೋಗಿರುವಳು. ಇವಳ ಆಶೆಯನ್ನು ತೊರೆಯುವಮ್ಮಾ!" ಎಂದಳು.

ಮಗಳೆಂದು ಹೇಳಲ್ಪಡುವ ಪ್ರಾಪ್ಯ ರುಚಿಗೂ, ತಾಯಿಯೆಂದು ಹೇಳಲ್ಪಡುವ ಉಪಾಯಾಧ್ಯವಸಾಯಕ್ಕೂ ವಿರೋಧವಿಲ್ಲ. ಎರಡೂ ಚೇತನ ನಿರಬೇಕಷ್ಟೆ?

मालुक्कु ६. ६.

मोहङ्गतां दुहितरं तु विलोक्य माता
तस्या दशां कथयतीह विषादमग्ना ।
हीनाभिमानकथयापि विलीनचित्ता
कान्ति जहौ वपुरहो! न विधेयमस्याः ॥१५५॥

लावण्यमाप विपिनं वलया गलन्ति
प्रावण्यमेतदतिलोकमहो! मुरारौ ।

त्याज्या ममत्वविषयास्सकलाः प्रयान्ति
तस्मिन्प्रसादसुमुखे भगवत्यनन्ते ॥१५६॥

ಈ ರೀತಿ ಸಖಿಯು "ಇವಳ ಆಶೆಯನ್ನು ತೊರೆ" ಯೆಂದು ತಾಯಿಗೆ ಹೇ ದಳಷ್ಟೆ! ನಾಯಕಿ ಮಿತಿಮೀರಿದ ದುಃಖದಿಂದ ಮೂರ್ಛೆ ಹೋದಳು. ಈ ಮಗಳ ಸ್ಥಿತಿಯನ್ನು ನೋಡಿ ತಾಯಿಯು ದುಃಖಾತಿರೇಕದಿಂದ ಹೇಳುವಳು– "ನಾನು; ನನ್ನದು; ಎಂಬ ಅಭಿಮಾನವನ್ನೇ ತೊರೆದು ಅವನಲ್ಲೇ ಲೀನಚಿತ್ತ ಳಾಗಿರುವಳಲ್ಲಾ! ಇವಳ ಶರೀರವೆಲ್ಲಾ ಕಂದಿಹೋಯಿತು. ಕಾಂತಿ ಕುಂದಿತು. ಲಾವಣ್ಯ ಕಾಡು ಪಾಲಾಯಿತು. ಕೈಬಳೆಗಳೆಲ್ಲಾ ತನ್ನಷ್ಟಕ್ಕೆ ತಾನೆ ಜಾ ಬೀಳುತ್ತಿವೆ. ಏನಿದು! ಭಗವಂತನಲ್ಲಿ ಇವಳ ಪ್ರಾವಣ್ಯ ಲೋಕಾತೀತವಾ ದೆಯಲ್ಲಾ!

ಅವನು ಪ್ರಸನ್ನನಾದರೆ ಚೇತನನಿಗೆ ತ್ಯಾಜ್ಯವಾದ ಅಹಂಕಾರ ಮಮಕಾರ ವಿಷಯಗಳೆಲ್ಲವೂ ತನ್ನಷ್ಟಕ್ಕೆ ತಾನೆ ತೊಲಗುವುವು. ಅಲ್ಲವೆ?

ತಿರುವಾಯ್ಮೊಳಿ ೬. ೭.

पुत्र्या मोहेन मोहं स्वयमपि गमिता स्वेन पूर्वोदितानां
नाम्नां विष्णोर्बहूनां श्रुतिविषयतया लब्धसंज्ञां प्रयाताम् ।
ज्ञात्वा माता स्वपुत्रीं कथमियमयतां दुस्स्थितिः पूर्वरीत्या
श्रीकोळूर् दिव्यदेशं किमिव पथि करोत्वम्ब! हाहेति चाह ॥१५७॥

धारकपोषकभोग्यान्यखिलं कृष्णो ममेत्युक्त्वा ।
अस्राविलाक्षियुगला कथमिव गच्छेदियं त्वेका ॥१५८॥

ಈ ಅನ್ಯಾದೃಶವಾದ ಮಗಳ ದುಃಸ್ಥಿತಿಯನ್ನು ನೋಡಿ ತಾಯಿಯೂ ಎಚ್ಚರ ತಪ್ಪಿದಳು. 'ಮಗಳು ಎಚ್ಚೆತ್ತುಕೊಳ್ಳಲಿ' ಎಂದು ಮೊದಲು ತಾನು

ಹೇಳಿದ ಭಗವನ್ನಾಮಗಳನ್ನು ಕೇಳಿ ಮೆಲ್ಲಮೆಲ್ಲನೆ ನಾಯಕಿ ಎಚ್ಚೆತ್ತು 'ತಿರುಕ್ಕೋಳೂರ್' ಎಂಬ ದಿವ್ಯ ದೇಶಕ್ಕೆ ತೆರಳಿದಳು. ಆ ಮೇಲೆ ಮೂರ್ಛೆ ತಿಳಿದ ತಾಯಿಯು ಅಯ್ಯೋ! ಇಂತಹ ದುಃಸ್ಥಿತಿಯಲ್ಲೇ ಹೊರಟಿರುವಳಲ್ಲಾ! ದಾರಿಯಲ್ಲಿ ಏನಾದರೂ ಪ್ರಮಾದ ಸಂಭವಿಸಿದರೆ ಮಾಡುವುದೇನು !! ಅಯ್ಯೋ!!! ಮತ್ತೆ 'ನನಗೆ ಧಾರಕ ಪೋಷಕ ಭೋಗ್ಯಗಳೆಲ್ಲಾ ಕೃಷ್ಣನೇ' ಎಂದು ಹೇಳುತ್ತಾ ಕಣ್ಣೀರು ತುಂಬಿಕೊಂಡು ಒಬ್ಬಳೇ ಹೋಗುತ್ತಿರುವಳಲ್ಲಾ! ಕಣ್ಣು ತಾನೆ ಕಾಣುವುದೆ? ಅಯ್ಯೋ! ಎಂದು ಮರುಗುವಳು.

पोन्नुलहालीरो ६. ८.

निहितमहानिधिमेषा कोळूरीशं समस्तमनुभूय ।
अतिहृष्टा तां दृष्ट्वापायभिया दूरगोऽभूत्सः ॥१५९॥

तद्विरहमसहमाना तं प्रति दूतान्पतत्रिणो नयति ।
अथवा पूर्वानुभवो मानसमात्रस्ततो बहिर्भोगम् ॥१६०॥

वाञ्छन्नपि तदलाभात्काचित्तहणी वियोगिनी भूत्वा ।
प्रेषयति तांस्तु दूतांस्तं प्रति मोहाद्विनिर्मुक्ता ॥१६१॥

अथवा कोळूर्नगरोद्यानं यावत्कथञ्चिदभिगम्य ।
बलहान्या तत्रैव स्थित्वा तान्नयति तत्रत्यान् ॥१६२॥

कालादनादेर्विमुखांस्तु जन्तून् श्रीशेन संयोजयितुर्गुरोर्यत् ।
प्रीत्यार्पितं तच्च विभूतियुग्मं तुल्यं भवेन्नैव तु तत्कृतस्य ॥१६३॥

इममर्थं शठारातिर्दशकेऽस्मिन्नरूपयत् ।
आचार्यस्य प्रतीकारो नैवास्तीति विनिश्चितम् ॥१६४॥

ಹೊರಟ ನಾಯಕಿಯು "ವೈತ್ತಮಾನಿಧಿ" ಯೆಂಬ ತಿರುಕ್ಕೋಳೂರ್

ಸ್ವಾಮಿಯನ್ನು ಚೆನ್ನಾಗಿ ಅನುಭವಿಸಿದಳು. ಅತಿಯಾಗಿ ಸಂತೋಷಪಟ್ಟಳು. ಇದನ್ನು ನೋಡಿ ಭಗವಂತನು ಧರ್ಮಿಗೆ ಲೋಪಬರಬಾರದೆಂದು ಸ್ವಲ್ಪ ಕಣ್ಮರೆಯಾದ. ಅವನ ವಿರಹವನ್ನು ತಾಳಲಾರದೆ ಪಕ್ಷಿಗಳನ್ನು ದೂತರನ್ನಾಗಿ ಕಳುಹಿಸುವಳು.

ಅಥವಾ — ಪೂರ್ವಾನುಭವ ಮಾನಸಿಕವಾದ್ದರಿಂದ ಬಾಹ್ಯಸಂಶ್ಲೇಷವನ್ನಾಶಿಸಪಟ್ಟು ಅದು ದೊರೆಯದೆ ಪತಿವಿಯುಕ್ತೆಯಾದ ಕಾಂತೆಯಾಗಿ ಮೂರ್ಛೆ ತಿಳಿದ ಮೇಲೆ ಅವನಲ್ಲಿಗೆ ದೂತ ಪ್ರೇಷಣ ಮಾಡುವಳು.

ಅಥವಾ — ಹಿಂದಿನ ದಶಕದ ಸ್ಥಿತಿಯಲ್ಲೇ ಮೆಲ್ಲಮೆಲ್ಲನೆ ಹೇಗೋ ತಿರುಕ್ಕೋಳೂರ್ ಸಮೀಪಕ್ಕೆ ಬಂದು ತಲಪಿದಳು. ಬಲಹಾನಿಯಿಂದ ಊರ ಹೊರಗಡೆಯ ತೋಟದಲ್ಲೇ ನಿಂತಳು. ಆಗ ಅಲ್ಲಿರುವ ಪಕ್ಷಿಗಳನ್ನು ಭಗವಂತನಲ್ಲಿಗೆ ದೂತರನ್ನಾಗಿ ಕಳುಹುವಳು.

ಅನಾದಿ ಕಾಲದಿಂದಲೂ ಭಗವದ್ವಿಮುಖರಾಗಿಯೇ ಇದ್ದ ಚೇತನಗೆ ಭಗವಂತನನ್ನು ತೋರಿಸಿಕೊಟ್ಟು, ಉಪಕರಿಸಿದ ಆಚಾರ್ಯನ ಮಹಿಮೆಯನ್ನು ಬಣ್ಣಿಸಲು ಸಾಧ್ಯವಿಲ್ಲ. ಉಭಯ ವಿಭೂತಿಗಳನ್ನೂ, ತದ್ಯುಕ್ತನಾದ ಭಗವಂತನನ್ನೂ ಇವನಿಗೆ ಕೊಟ್ಟು ಉಪಕರಿಸಿದ ಆಚಾರ್ಯನಿಗೆ ಶಿಷ್ಯನು ಯಾವ ರೀತಿಯಿಂದಲೂ ಪ್ರತ್ಯುಪಕಾರ ಮಾಡಲು ಸಾಧ್ಯವೇ ಇಲ್ಲ. ನಾಲ್ಕು ವಿಭೂತಿಗಳೂ ಸರ್ವೇಶ್ವರದ್ವಯವೂ ಇದ್ದರಲ್ಲವೆ ಸರಿಸಮನಾದ ಪ್ರತ್ಯುಪಕಾರ ಸಾಧ್ಯವಾದೀತು? ಎಂಬ ಅರ್ಥವನ್ನು ಈ ದಶಕದಲ್ಲಿ ತಿಳಿಸುವರು. ನಾಯಕ ನಾಯಕಿಯರನ್ನು ಒಂದು ಗೂಡಿಸುವ ದೂತರಾದ ಪಕ್ಷಿಗಳು ಚೇತನನನ್ನೂ ಈಶ್ವರನನ್ನೂ ಸೇರಿಸುವ ಆಚಾರ್ಯನಿಗೆ ಸಮ. ಇವನಿಗಿರಬೇಕಾದ ಕರ್ಮ ಜ್ಞಾನಗಳೇ ಅವುಗಳ ಎರಡು ರೆಕ್ಕೆಗಳು. ಅವುಗಳ ಹೊಳಪು ಮುಂತಾದ ಚೆಲುವು ಇವನಿಗಿರಬೇಕಾದ ಆತ್ಮ ಗುಣಗಳು.

नीराय् निलनाय् ६. १.

प्रेषितेष्वपि दूतेषु तदनागमनान्मुनिः ।
क्रोशत्युच्चैर्यथैतेन वैकुण्ठादापतेद्धरिः ॥१६५॥

वेणुध्वनिना कृष्णो गोपीनां यादृशीं दशां प्रादात् ।
आर्तध्वनिना शठजित्तां तस्मै दिशति दशकेऽस्मिन् ॥१६६॥

किन्ते दुःखं मुनेऽहं सकलतनुभृतामन्तरात्मास्मि तस्मात्
यत्किञ्चिद्दर्शनेऽपि प्रभवति मम ते दर्शनं कोन्वितोऽर्थः ? ।
तृप्तिर्नैतावता मे भवति च भगवन्किन्तु सर्वायुधान्य-
प्यादायाग्रे मम त्वं विचर नयनयोर्भिरग्र्यैश्चतुर्भिः ॥१६७॥

ದೂತರನ್ನು ಕಳುಹಿದರೂ ಅವನು ಬರಲಿಲ್ಲ. ವೇಣು ನಾದದಿಂದ ಶ್ರೀಕೃಷ್ಣನು ಗೋಪಿಗಳಿಗೆ ಉಂಟುಮಾಡಿದ ಸ್ಥಿತಿಯನ್ನು ಈಗ ಇವರು ಭಗವಂತನಿಗೇ ಉಂಟುಮಾಡುತ್ತಾ, ಇವಳ ಕೂಗನ್ನು ಕೇಳಿ ವೈಕುಂಠದಿಂದ ಹಿಂದು ಮುಂದು ಕಾಣದಂತೆ ಅವನು ಓಡಿ ಬರುವಂತೆ ವಿರಹವ್ಯಥೆಯಿಂದ ಗಟ್ಟಿಯಾಗಿ ಕೂಗಿಕೊಳ್ಳುವಳು. ಆಗ ಭಗವಂತನು ಎದುರಿಗೆ ಬಂದು, "ಆಳ್ವಾರರೇ! ನಿಮಗೇನು ದುಃಖ? ನನ್ನ ಸರ್ವಾಂತರ್ಯಾಮಿತ್ವವನ್ನು ಅರಿತಿರುವಿರಿ. ಯಾವೊಂದು ವಸ್ತುವನ್ನು ನೋಡಿದರೂ ಅದರಲ್ಲಿ ನನ್ನನ್ನೇ ಕಾಣುವಿರಿ. ಇದಕ್ಕಿಂತ ಮತ್ತೇನು ಬೇಕು?" ಎಂದಂತಾಯಿತು. ಅದಕ್ಕೆ ಆಳ್ವಾರರು "ನನಗೆ ಇಷ್ಟು ಮಾತ್ರದಿಂದ ತೃಪ್ತಿಯಾಗಲಾರದು. ನೀನು ಸರ್ವಾಯುಧಗಳನ್ನೂ ಸರ್ವಾಭರಣಗಳನ್ನೂ ತೊಟ್ಟು, 'ಆಯತಾಶ್ಚ ಸುವೃತ್ತಾಶ್ಚ' ಎಂಬ ನಿನ್ನ ಮನ ಮೋಹಕವಾದ ನಾಲ್ಕು ತೋಳುಗಳೊಡನೆ ನನ್ನೆದುರಿಗೆ ನಲಿದಾಡಬೇಕು. ಇದೀಗ ನನ್ನಾಸೆ" ಎಂದರು.

उलहमुण्ड ६. १०.

उक्त्वा प्राप्यं पूर्वमत्राद्य सूरिस्तस्य प्राह प्रापकं सङ्ग्रहेण ।
श्रुत्वाक्रोशं स्थावराणि द्रवन्ति श्रीशो नायात्सर्ववेत्ता दयालुः ॥१६८॥

तस्य प्राप्तौ तत्प्रपत्तिं विनान्यो नोपायोस्तीत्येष निश्चित्य सूरिः ।
श्रीपूर्वं तौ वेङ्कटेशस्य पादौ तथ्यं प्रापत्प्रापकत्वेन भूयः ॥१६९॥

द्वयमन्त्रपूर्वखण्डव्याख्यारूपं त्विदं दशकम् ।
किञ्चाभयप्रदानं श्रीदेव्याः प्रकटयत्येतत् ॥१७०॥

ಮೊದಲು ಮೂರು ನೂರು ಪದ್ಯಗಳಿಂದ ಪ್ರಾಪ್ಯವನ್ನೂ (ಫಲ) ನಿಷ್ಕ ರ್ಷಿಸಿ ಹೇಳಿದರು. ಈಗ ಅದಕ್ಕೆ ಉಪಾಯವೇನೆಂಬುದನ್ನು ಇಲ್ಲಿ ನಿರ್ಣ ಯಿಸಿ ಹೇಳುವರು. ಹೀಗೆ ಇವರ ಕೂಗನ್ನು ಕೇಳಿ ಕಲ್ಲುಮರಗಳೆಲ್ಲಾ ಕ ಗಿದುವು. ಸರ್ವಜ್ಞನೂ ದಯಾಳುವೂ ಆದ ಲಕ್ಷ್ಮೀವಲ್ಲಭನು ಮಾತ್ರ ಬ ಲಿಲ್ಲ. ಆಗ ಆಳ್ವಾರರು, "ಓಹೋ! ಭಗವಂತನನ್ನು ನಾವು ಪಡೆಯಬೇಕಾದ ನೀನೇ ಗತಿಯೆಂದು ಅವನನ್ನೇ ಉಪಾಯವಾಗಿ ಶರಣವರಣ ಮಾಡಬೇಕು." ಎಂದು ತೀರ್ಮಾನಿಸಿ, ಲಕ್ಷ್ಮೀಪುರುಷಕಾರ ಪೂರ್ವಕವಾಗಿ ಶ್ರೀವೆಂಕಟಾಚಲ ಪತಿಯ ಪಾದಾರವಿಂದಗಳನ್ನು ಶರಣ ಹೊಂದುವರು. ಈ ದಶಕವು ದ್ವಯ ಮಂತ್ರದ ಮೊದಲನೇ ವಾಕ್ಯದ ಅರ್ಥವನ್ನು ವಿಶದೀಕರಿಸುವುದು. ಮತ್ತು "ಸಕೃದೇವ ಪ್ರಪನ್ನಾಯ" ಎಂಬ ಶ್ರೀರಾಮಚಂದ್ರನ ಅಭಯ ಪ್ರದಾನದಂತೆ ಈ ದಶಕವು ಶ್ರೀದೇವಿಯ ಅಭಯ ಪ್ರದಾನವೆಂದು ಆಚಾರ್ಯರು ಅಪ್ಪಣೆ ಕೊಡಿಸಿರುವರು.

उण्णिलाविय ७. १.

सर्वज्ञं सर्वशक्तं सकलपतिमपि त्वां प्रपन्नो दयालुं
कस्मादद्यापि बाध्ये करणरिपुगणैस्त्वत्समक्षं ममेश ! ।
नैषा बाधा तवार्हा परिहर सपदि प्रापय त्वत्पदाब्जम्
सेवाया नित्यसिध्द्या इति मुनिरधुना याचते तं सुदीनः ॥१७१॥

अशोकवनिकारुद्धा राक्षसीगणबाधिता ।
रामादर्शनतस्सीता यथा वा दुःखिता तथा ॥१७२॥

देहेन्द्रियादिना रुद्धो भगवद्दर्शनं विना ।
शोचतेऽत्र शठारातिस्सप्तमस्यादिमे मुनिः ॥१७३॥

"ಸರ್ವಜ್ಞನಾಗಿ ಸರ್ವಶಕ್ತನಾಗಿ ಸರ್ವಸ್ವಾಮಿಯಾಗಿ ದಯಾಳುವಾಗಿರುವ ನಿನ್ನನ್ನೇ ಶರಣಹೊಂದಿದರೂ, ಪ್ರಾಕೃತಿಕವಾದ ಈ ಶರೀರ, ಇಂದ್ರಿಯಗಳೆಂಬ ಶತ್ರುಗಳಿಂದ ನಿನ್ನೆದುರಿಗೇ ನಾನು ಹೀಗೆ ಕಷ್ಟಪಡುವುದು ನ್ಯಾಯವೆ? ನಿನಗಿದುಚಿತವಲ್ಲ. ಇದನ್ನು ಒಡನೆಯೇ ತಪ್ಪಿಸಿ ನಿನ್ನ ಪಾದಾರವಿಂದಗಳಲ್ಲಿ ಸೇರಿಸಿಕೋ!" ಎಂದು ದೀನದೀನರಾಗಿ ಪ್ರಾರ್ಥಿಸುವರು.

ಅಶೋಕವನದಲ್ಲಿಡಲ್ಪಟ್ಟು ರಾಕ್ಷಸಿಗಳಿಂದ ಹಿಂಸಿಸಲ್ಪಡುತ್ತಾ ಶ್ರೀರಾಮನನ್ನೂ ಕಾಣದೆ ಸೀತಾದೇವಿಯು ಯಾವ ರೀತಿ ಕಷ್ಟವನ್ನನುಭವಿಸಿದಳೋ ಅದರಂತೆಯೇ ಇವರೂ ದೇಹವೆಂಬ ಅಶೋಕವನದಲ್ಲಿ ಸಿಕ್ಕಿಬಿದ್ದು ಇಂದ್ರಿಯಗಳೆಂಬ ರಾಕ್ಷಸಿಗಳಿಂದ ಹಿಂಸಿಸಲ್ಪಟ್ಟು ಭಗವದ್ದರ್ಶನವೂ ಇಲ್ಲದೆ ತೊಳಲುತ್ತಿರುವರು.

कङ्गुलुं पहलुं ७. २.

अव्यभिचरितं सिद्धोपायं लब्ध्वापि पुरुषकारेण ।
सद्यः फलदं त्वामपि कुतो न लब्धं फलं शौरे ! ॥१७४॥

कारेस्सूनो ! न त्वमेको हि रक्ष्यो रक्ष्यन्तां ते सर्व एवापि शौरे ! ।
त्वद्बन्धे सत्यत्र तेषां विमुक्तिस्सीताबन्धस्स्ववधूबन्धमुक्त्यै ॥१७५॥

सद्यो मुक्तौ ते मुने ! त्वत्प्रबन्धो नो पूर्येत प्रेक्षकास्तेन न स्युः ।
शौरे ग्रन्थः कार्यतामन्यपुंसा येन स्यात्तु संसृताविष्यते धीः ॥१७६॥

संसारेऽस्मिंस्त्वादृशो नैव लभ्यस्तस्मात्त्वां वै योजयाम्यत्र कार्ये ।
उक्तस्त्वेवं शौरिणा कारिसूनुः खिन्नोऽत्यर्थं दीनश्चोवाच वाचा ॥१७७॥

तर्हि क्षिप्तो दूरतस्त्वत्सकाशाद्गर्ते घोरे व्यालपूर्णे दयालो ! ।
योहं घोरैः पञ्चभिश्चेन्द्रियाख्यैरन्तर्द्विड्भिर्बाध्यमानोऽस्मि देहे १७८

भगवदलाभक्लेशं संसारे कोऽपि नैव जानाति ।
सूरीणां तदलाभो नास्त्येवातश्च ते न जानन्ति ॥१७९॥

तस्माद् विभूतिद्वयबाह्यभूतो नियुज्यसे ग्रन्थसमाप्तिकार्ये ।
मुनेर्मनोभावसवेदितारस्तद्भावशून्याश्च कथं वदेयुः ॥१८०॥

ज्ञात्वाभिसन्धिं मधुसूदनस्य समाहितः कारिसुतोऽथ रङ्गम् ।
गत्वा गुणौघैः परिपूर्णमीशं भोक्तुं विनिश्चित्य तथाप्यलब्ध्वा ॥१८१॥

वियोगिनी काचिदिहैव भूत्वा मुमोह माता दुहितुर्दशान्ताम् ।
निवेद्य रङ्गप्रभवे सदैन्यं पृच्छत्यमुं किं विदधासि चास्याम् ॥१८२॥

इयं न निद्राति दिवानिशं त्वन्नामानि चोक्त्वाञ्जलिमातनोति ।
पाणिद्वयेनाश्रु मुहुः क्षिपन्ती स्रस्ता भवत्यत्र तवास्ति का धीः ॥१८३॥

"ನಿಯಮೇನ ಫಲವನ್ನು ಕೊಡುವ ಸಿದ್ಧೋಪಾಯನೂ, ತತ್ ಕ್ಷಣದಲ್ಲೇ ಫಲಪ್ರದನೂ ಆದ ನಿನ್ನನ್ನು ಲಕ್ಷ್ಮೀ ಪುರುಷಕಾರ ಪೂರ್ವಕವಾಗಿ ಶರಣಹೊಂದಿದರೂ ಏಕೆ ಫಲವನ್ನು ಕೊಡಲೊಲ್ಲೆ ?" ಎಂದರು. ಆದಕ್ಕೆ ಭಗವಂತನು "ಆಳ್ವಾರರೇ! ನೀವೊಬ್ಬರೇ ಅಲ್ಲ. ಎಲ್ಲವೂ ನನಗೆ ರಕ್ಷ್ಯವರ್ಗವಲ್ಲವೆ ?" ಎಂದ. "ರಕ್ಷಿಸು ; ಬೇಡವೆಂದವರಾರು ?" ಎಂದರು. "ನೀವು ಬಂಧನದಲ್ಲಿದ್ದರಲ್ಲವೆ ಅವರಿಗೆಲ್ಲಾ ಬಂಧವಿಮೋಚನೆಯಾಗುವುದು ? ಸೀತೆಯ ಬಂಧನ ದೇವಸ್ತ್ರೀಗಳ ಬಂಧ ವಿಮೋಚನೆಗಲ್ಲವೆ ?" ಎಂದ. "ಅದು ಹೇಗೋ ಕಾಣೆ! ತತ್ ಕ್ಷಣ ನನ್ನನ್ನು ಈ ಬಂಧದಿಂದ ಬಿಡಿಸು" ಎಂದರು. "ಈ ಕ್ಷಣವೇ ನಿಮ್ಮನ್ನು ಕರೆದೊಯ್ದರೆ ಪ್ರಬಂಧ ಪೂರ್ತಿಯಾಗಲಾರದು." ಎಂದ. ಈ ಸಂಸಾರದಲ್ಲಿರಲು ಆಸೆ ಪಡುವ ಮತ್ತೆ ಯಾರಿಂದಲಾದರೂ

ಪೂರ್ತಿ ಮಾಡಿಸಿಕೋ." ಎಂದರು. "ಆಳ್ವಾರರೇ! ನಿಮ್ಮಂತಹ ಪಕ್ವ ಹೃದಯನಾದ ಚೇತನನಾವನೂ ಈ ಪ್ರಪಂಚದಲ್ಲಿ ಸಿಗಲಾರ! ಆದುದರಿಂದ ನೀವೇ ಈ ಕೆಲಸಕ್ಕೆ ತಕ್ಕವರು." ಎಂದ.

ಈ ಮಾತನ್ನು ಕೇಳಿ ಬಹಳ ಖಿನ್ನರಾದರು. "ಹಾಗಾದರೆ- ನನ್ನನ್ನು ದೂರ ತಳ್ಳಿಬಿಟ್ಟೆ! ದಯಾಳುವಾದ ನೀನೂ ಕೂಡ ಭಯಂಕರವಾಗಿ ಆಳವಾದ, ಹಾವು ಮೊದಲಾದ ದುಷ್ಟಜಂತುಗಳು ತುಂಬಿರುವ ದೊಡ್ಡ ಬಾವಿಯಲ್ಲಿ ತಳ್ಳಿದೆಯಲ್ಲಾ!! ಪಂಚೇಂದ್ರಿಯಗಳೆಂಬ ಅಂತಶ್ಶತ್ರುಗಳಿಂದ ಈ ಶರೀರದಲ್ಲೇ ಇದ್ದು ಬಹಳ ಕಷ್ಟಪಡುತ್ತಿರುವೆನಲ್ಲಾ!!! ಎಂದರು. "ಈ ಪ್ರಪಂಚದಲ್ಲಿರುವವರು ಯಾರೂ ಭಗವದ್ವಿಶ್ಲೇಷದುಃಖವನ್ನರಿಯರು. 'ಸದಾ ಪಶ್ಯಂತಿ' ಯಾದ್ದರಿಂದ ನಿತ್ಯಸೂರಿಗಳೂ ಅರಿಯರು. ಆದ್ದರಿಂದ ಇವರಿಬ್ಬರಿಗೂ ವಿಲಕ್ಷಣರಾದ ನೀವೇ ಈ ಪ್ರಬಂಧವನ್ನು ಪೂರ್ತಿ ಮಾಡಬೇಕು. ನಿಮ್ಮ ಮನೋಭಾವವನ್ನು ತಿಳಿಯದವರೂ, ನಿಮ್ಮಂತೆ ಮನೋಭಾವವಿಲ್ಲದವರೂ, ಹೇಗೆ ತಾನೆ ಪ್ರಬಂಧವನ್ನು ಪೂರ್ತಿಮಾಡಿಯಾರು?" ಎಂದ. ಭಗವಂತನ ಈ ಅಭಿಪ್ರಾಯವನ್ನು ತಿಳಿದು ಸ್ವಲ್ಪ ಸಮಾಧಾನ ಹೊಂದಿದರು.

ಮತ್ತೆ ಸಮಸ್ತಗುಣಪರಿಪೂರ್ಣನಾದ ಶ್ರೀರಂಗನಾಥನನ್ನು ಅನುಭವಿಸಲು ನಿಶ್ಚಯಿಸಿ ಹೊರಟರು. ಹೋಗಲಾರದೆ ವಿರಹಿಣಿಯಾಗಿ ಇದ್ದಲ್ಲೇ ಜ್ಞಾನ ತಪ್ಪಿದಳು. ತಾಯಿಯಾದವಳು ಈ ಮಗಳ ದುಃಸ್ಥಿತಿಯನ್ನು ನೋಡಲಾರದೆ, "ಇವಳು ನಿದ್ರೆ ಮಾಡಲೊಲ್ಲಳು. ಹಗಲೂ ರಾತ್ರಿ ನಿನ್ನ ಹೆಸರನ್ನೇ ಕನವರಿಸುವಳು. ಕೈ ಮುಗಿಯುವಳು. ಕಣ್ಣೀರನ್ನು ಎರಡು ಕೈಗಳಿಂದಲೂ ಬೊಗಸೆಮಾಡಿ ಹೊರಕ್ಕೆರಚುವಳು. ಹಾಗೆಯೇ ಶಿಥಿಲಗಾತ್ರಿಯಾಗುವಳು. ಇವಳ ವಿಷಯದಲ್ಲಿ ನೀನೇನು ಮಾಡಬೇಕೆಂದಿರುವೆ?" ಎಂದು ಶ್ರೀರಂಗನಾಥನನ್ನು ದೀನಳಾಗಿ ಕೇಳುವಳು.

ತಿರುವಾಯ್ಮೊಳಿ ೭. ೩.

नाम्नां गुणानां कथनाच्छ्रुतेश्च मोहं विहायाभिमयौ कथञ्चित् ।
पैत्रैप्रदेशे स्थितमेव देवमुद्दिश्य माता च सखी रुरोध ॥१८४॥

अभिसरणमेतदनुचितमपवादस्यैव कारणं भवति ।
अत इममुद्योगं त्यज सरळे! मा साहसं कार्षीः ॥१८५॥

इत्युक्ता सोत्कण्ठा प्रत्यूचे ता इदं वचनम् ।
यदि मां नेष्यथ यूयं तमपि वलन्मकरकुण्डलश्रवणम् ॥१८६॥

अपवादो न प्रसजेन्नाहं त्यक्तुं समुत्सहेऽभिमतम् ।
इत्युक्त्वा तं देवं कथयति रूपादिभिश्श्लाघ्यम् ॥१८७॥

अथवा

उन्मस्तकसंश्लेषजसुखादपायं विचिन्त्य हरिरस्याः ।
मृगयाव्याजाद्गन्तुं सम्मतिमस्या ययाचे सः ॥१८८॥

अविदितविरहक्लेशा मुग्धा हर्षाद्ददौ च सामग्रीम् ।
मङ्गलमाशासाना गते तु तस्मिन् वियोगखेदेन ॥१८९॥

तमनुगता माता तां रुणद्धि हितचिन्तया सा तु ।
नय मां त्वमेव मातर्यद्येवं कापि नो हानिः ॥१९०॥

ಭಗವಂತನ ನಾಮೋಚ್ಚಾರಣ, ಗುಣಕಥನಗಳಿಂದ ಜ್ಞಾನ ತಿಳಿದೆದ್ದ ನಾಯಕಿಯು ಕೈಲಾಗದಿದ್ದರೂ ಬಹಳ ಕಷ್ಟದಿಂದ "ತ್ತಿ ತಿರುಪ್ಪೇರ್ಯೆ" ಎಂಬ ದಿವ್ಯದೇಶದಲ್ಲಿರುವ ಭಗವಂತನನ್ನು ಅಭಿಸರಣ ಮಾಡಲು ಹೊರಟಳು. ಆಗ "ಇದು ಚೆನ್ನಲ್ಲ. ಅಪವಾದಕ್ಕೆ ಕಾರಣವಾದೀತು! ಈ ಪ್ರಯತ್ನ ಬಿಡು. ಸಾಹಸ ಮಾಡಬೇಡ" ಎಂದು ತಾಯಿ ಸಖಿಯರು ತಡೆದರು. ನಾಯಕನನ್ನು ಸೇರಿದ ಹೊರತು ಆಗುವುದೇ ಇಲ್ಲವೆಂಬ ಹಂಬಲದಿಂದ ತುಂಬಿದ ನಾಯಕಿಯು, 'ಮಕರಕ್ಕುಳೈಕ್ಕಾದರ್' ಎಂಬ ಆ ಭಗವಂತನಲ್ಲಿಗೆ ನೀವೇ ನನ್ನನ್ನು ಕರೆದೊಯ್ಯಿರಿ. ಆಗ ಅಪವಾದ ಘಟಿಸಲಾರದು. ನಾನು ಮಾತ್ರ ನನ್ನ ಉದ್ದೇಶವನ್ನು ಬದಲಿಸಲಾರೆ. ಏಕೆನ್ನುವಿರೋ? ಅವನ ರೂಪಗುಣಾದಿ

ಗಳಿಲ್ಲಾ ಹಾಗಿವೆ! ಅವನನ್ನು ಬಿಡಲಾರೆ!" ಎಂದಳು.

ಅಥವಾ – ಇವಳ ಪ್ರಾಣಾಂತಕವಾದ ವಿರಹವ್ಯಸನವನ್ನು ನೋಡಲಾರದೆ ಭಗವಂತನು ಸಂಪೂರ್ಣವಾಗಿ ಇವಳೊಂದಿಗೆ ಸಂಶ್ಲೇಷಿಸಿದನು. ಈ ಮೇರೆ ಮಿಾರಿದ ಆನಂದದಿಂದ "ಅತಿ ಸಂತೋಷಷ್ಟ ವಿರೋಧೀ" ಎಂಬಂತೆ ಇವಳಿಗೆ ಅಪಾಯ ಒದಗೀತು! ಎಂದು ಭಯಪಟ್ಟು ಭಗವಂತನು, "ಕಾಂತೇ! ಸ್ವಲ್ಪ ಬೇಟೆಯಾಡಿ ಬರುವೆನು." ಎಂದ. ವಿರಹಕ್ಲೇಶವನ್ನೇ ಅರಿಯದ ಮುಗ್ಧೆ ಯಾದ ಇವಳು ಸಂತೋಷದಿಂದ ಹಾಗೆಯೇ ಆಗಲೆಂದು ಬಿಲ್ಲು, ಬಾಣ ಮೊದ ಲಾದ ಸಲಕರಣೆಗಳನ್ನೆಲ್ಲಾ ತಾನೇ ಕೊಟ್ಟಳು. ಹೊರಡುವಾಗ "ನಿನಗೆ ಮಂಗಳವಾಗಲಿ" ಎಂದು ಹರಸಿದಳು. ಅವನು ಕಣ್ಮರೆಯಾಗುವವರೆಗೂ ನೋಡುತ್ತಿದ್ದು, ಕಣ್ಮರೆಯಾದ ಕ್ಷಣವೇ ವಿರಹವನ್ನು ತಾಳಲಾರದೆ, ತಾನೂ ಅವನಿರುವಲ್ಲಿಗೆ ಹೋಗಲು ಹೊರಡುವಳು. ಆಗ ಹಿತಪರೆಯಾದ ತಾಯಿಯು "ಬೇಡವಮ್ಮಾ!" ಎಂದು ತಡೆದಳು. "ಹಾಗಾದರೆ ನೀನೇ ಅವನಲ್ಲಿಗೆ ನನ್ನನ್ನು ಕರೆದೊಯ್ಯಿ! ಎಂದು ಹೇಳುವಳು.

आलियेल ७. ४.

एतादृशस्य शठकोपमुनेर्विषादो
नान्येन शक्यमपहर्तुमिति व्यवस्यन् ।
स्वस्यावतारचरितानि पुरातनानि
प्रादर्शयद्धरिरमुष्य तदातनानि ॥१९१॥

पराङ्कुशमुनिस्सर्वमनुभूय जयं हरेः ।
तृप्तो हृष्टश्शशंसेदं वक्तृणां जयदं नृणाम् ॥१९२॥

लोकानां क्रान्तिमब्धेर्मथनमथ भुवश्चोद्धृतिं लोकजग्धि
सारथ्ये भूमिभारापहृतिमथ भिदां वक्षसो भक्तशत्रोः ।

लङ्कानाशञ्च बाणासुरतरुविटपच्छेदनं लोकसृष्टिं
गोत्राणं गोत्रधृत्या शठरिपुरवदत्स्वानुभूतानि जित्यै ॥१९३॥

अथवा–

परिहृत्य विरोधिनो मृगान् जयलक्ष्म्या वृतमागतं पुनः ।
परिषस्वज आदरादियं श्रमहान्यै हृषिताह तज्जयम् ॥१९४॥

ಭಗವಂತನು ಈ ಆಳ್ವಾರರ ದುಃಖವು ಮತ್ತ್ಯಾರಿಂದಲೂ ಮತ್ತ್ಯಾವ ರೀತಿಯಿಂದಲೂ ಹೋಗಲಾಡಿಸಲು ಸಾಧ್ಯವಿಲ್ಲವೆಂದು ತಿಳಿದು, ತನ್ನ ಹಳೇಕಾಲದ ಅವತಾರ ಚರಿತಗಳನ್ನು ಈಗ ಮಾಡುತ್ತಿರುವಂತೆಯೇ ತೋರಿಸಿಕೊಟ್ಟ. ಅದನ್ನೆಲ್ಲಾ ಅನುಭವಿಸಿ ತೃಪ್ತರಾಗಿ ಸಂತೋಷದಿಂದ ಭಗವಂತನಿಗೆ ಜಯಕಾರ ಮಾಡುತ್ತಾರೆ. ಈ ಪದ್ಯಗಳನ್ನು ಹೇಳುವವರಿಗೂ ಜಯವುಂಟೆಂದು ಹೇಳುವರು.

ತ್ರಿವಿಕ್ರಮಾವತಾರ, ಸಮುದ್ರಮಥನ, ವರಾಹಾವತಾರ, ಪ್ರಳಯದಲ್ಲಿ ಲೋಕಗಳನ್ನೆಲ್ಲಾ ತನ್ನುದರದಲ್ಲಿಟ್ಟಿರುವುದು, ಪಾರ್ಥಸೂತನಾಗಿ ಭೂಭಾರ ನೀಗಿಸಿದ್ದು, ಹಿರಣ್ಯಕಶಿಪುವನ್ನು ಬಗೆದದ್ದು, ರಾವಣನನ್ನು ಸಂಹರಿಸಿದ್ದು, ಬಾಣಾಸುರನ ಬಾಹುಗಳನ್ನಳಿದದ್ದು, ಪ್ರಪಂಚಸೃಷ್ಟಿ ಮಾಡಿದ್ದು, ಗೋವರ್ಧನೋದ್ಧಾರಮಾಡಿ ಗೋವುಗಳನ್ನು ಸಂರಕ್ಷಿಸಿದ್ದು ಇವುಗಳನ್ನು ಕ್ರಮವಾಗಿ ಅನುಭವಿಸಿ ಹಾಡಿರುವರು.

ಅಥವಾ– ತಾನಾಗಿ ಇಷ್ಟಪಟ್ಟು ಬೇಟೆಗೆ ಕಳುಹಿಸಿದ ನಾಯಕನು ದುಷ್ಟಮೃಗಗಳನ್ನು ಸಂಹಾರಮಾಡಿ ಜಯಲಕ್ಷ್ಮೀ ಸಮೇತನಾಗಿ ಬಂದಾಗ, ನಾಯಕಿಯು ಎದುರುಗೊಂಡು ಹೋಗಿ ಅವನ ಶ್ರಮಪರಿಹಾರಕ್ಕಾಗಿ "ಭರ್ತಾರಂ ಪರಿಷಸ್ವಜೇ" ಎಂಬಂತೆ ಪ್ರೀತಿಯಿಂದ ಬಾಚಿ ತಬ್ಬಿದಳು. ಎಂತಹ ಜಯಶೀಲನೆಂದು ಕೊಂಡಾಡುವಳು.

कर्पारिरामपिरानै ೭. ೫.

पूर्वप्रस्तुतरामवृत्तकथनप्रस्तावतोऽन्यानपि
प्रोच्यासौ शठकोपसूरिरितरोद्धारक्रमं तत्र च ।

उक्त्वा नैकमहोपकारकरणेऽपीशं न कोऽपि स्मर-
त्यन्याय्यं कृतघातितां जनगतां नाहं सहे धिग्जनम् ॥१९५॥

इत्याह दशके सूरिः पश्चात्तापेन खेदितः ।
पञ्चमे सप्तमस्यात्र सहस्रे श्वसितोपमे ॥१९६॥

दशकमिदं रामपरं त्वन्येषां कथनमत्र तद्भावात् ।
रामगुणेष्वेकैकः प्रथतेऽन्यत्रेति कूरेशः ॥१९७॥

सत्यपि गुणबाहुल्ये रामे कृष्णस्य दूत्य सौलभ्यम् ।
तन्नेति चेन्नरामश्चक्रेशस्तस्य योजको नाभूत् ॥१९८॥

दूत्ये परोपकारातिशयं ज्ञात्वा हनूमता तत्र ।
तन्न्यूनतां जिहीर्षुः कृष्णोऽभूत्पुनरपीति भट्टार्यः ॥१९९॥

ಆಳ್ವಾರರು ಈ ದಶಕದಲ್ಲಿ ಹಿಂದೆ ಪ್ರಸ್ತುತವಾದ ರಾಮಚರಿತವನ್ನೇ ಹೇಳುತ್ತಾ, ಮತ್ತೆ ಬೇರೆ ಅವತಾರಗಳನ್ನೂ, ಅದರಲ್ಲಿ ಭಗವಂತನು ಚೇತನರನ್ನುದ್ಧರಿಸಲು ಮಾಡಿದ ಕ್ರಮಗಳನ್ನೂ ಹೇಳಿ, ಹೀಗೆ ಚೇತನರಿಗೆ ಸರ್ವೇಶ್ವರನು ಮಹೋಪಕಾರ ಮಾಡುತ್ತಿದ್ದಾಗ್ಯೂ, ಯಾವನೂ ಉಪಕಾರವನ್ನು ಸ್ಮರಿಸುವುದಿಲ್ಲವಲ್ಲಾ! ಏನನ್ಯಾಯ!! ಜನರು ಎಂತಹ ಕೃತಘ್ನರು!!! ಇದನ್ನು ಸಹಿಸಲಾರೆ. ಛೀ! ಎಂದು ಬಹಳ ಪಶ್ಚಾತ್ತಾಪದಿಂದ ಕೊರಗುವರು.

"ಈ ದಶಕದಲ್ಲಿ ಶ್ರೀರಾಮನ ವಿಷಯವೇ ಪ್ರತಿಪಾದಿತವಾಗಿರುವುದು. ಮತ್ತೆ ಬೇರೆ ಅವತಾರಗಳನ್ನೂ ಹೇಳಿದೆಯಲ್ಲಾ? ಶ್ರೀರಾಮಚಂದ್ರನ ಗುಣ ರಾಶಿಯಲ್ಲಿ ಒಂದೊಂದೇ ಗುಣವನ್ನು ತೆಗೆದುಕೊಂಡು ಒಂದೊಂದು ಅವತಾರ ವನ್ನು ಮಾಡಿರುವುದರಿಂದ ಶ್ರೀರಾಮನನ್ನೇ ಹೇಳಿದಂತಾಗುವುದು" ಎಂದು ಶ್ರೀಕೂರನಾಥರು ನಿರ್ವಹಿಸುವರು.

"ಶ್ರೀರಾಮನಲ್ಲಿ ಸಮಸ್ತಗುಣಗಳೂ ಇರಬಹುದು. ಆದರೆ ಕೃಷ್ಣಾವ ತಾರದಲ್ಲಿ ಆಳುತನ ಮಾಡಿ ತೋರಿಸಿದ ಸೌಲಭ್ಯ ಇಲ್ಲಿಲ್ಲ." ಎನ್ನಬಾರದು.

ಶ್ರೀಕೃಷ್ಣ, ಯಯಾತಿ ಶಾಪದಿಂದ ಸಿಂಹಾಸನವಿಲ್ಲದವನು. ಶ್ರೀರಾಮನೋ ಚಕ್ರವರ್ತಿ. ಇವನನ್ನು ಆಳಾಗಿ ಕಳುಹಿಸುವವರಿಲ್ಲವಾದ ಕಾರಣ ದೌತ್ಯ ಮಾಡಲಿಲ್ಲ. ಆದರೆ ದೌತ್ಯದಲ್ಲಿ ಎಷ್ಟು ಪರೋಪಕಾರವಿದೆಯೆಂಬ ಅಂಶವನ್ನು ಆಂಜನೇಯನಿಂದ ತಿಳಿದೇ, ಆ ಕೊರತೆಯನ್ನು ನೀಗಿಕೊಳ್ಳಲು ಕೃಷ್ಣನಾಗಿ ಅವತರಿಸಿದ." ಎಂದು ಶ್ರೀಪರಾಶರಭಟ್ಟರು ನಿರ್ವಹಿಸುವರು.

पामरुमूवुलहुम् ७. ६.

एतद्दशकं श्रुत्वा कथमप्यर्थस्य भावनं शक्यम् ।
आर्तिक्रमस्तु सूरेरसद्वाक्यस्य नो भवेद्विषयः ॥२००॥

अम्मङ्ग्यिम्माळिति कश्चिदार्यः प्रोवाच काले दशकार्थमेवं ।
एवं स्थिते कारिसुतस्य सार्तिर्मन्देन शक्या कथमद्य वक्तुम् ॥२०१॥

मुक्तिप्रदस्त्वमिति मे विदितं तवापि
कौतूहलं मम विमुक्तिफलप्रदाने ।
आर्तिस्त्वयैव विदिता किल संसृतौ मे
शक्तोऽसि संश्रितविरोधिविभञ्जनेऽपि ॥२०२॥

तस्मादपोह्य मम बन्धनमाशु देव !
त्वत्पादपद्मयुगलस्य सदानुभूत्यै ।
स्थानं कदानु गमयस्यखिलश्रुतीड्यं
तत्सूरिदृश्यमुदयास्तमयादिशून्यम् ॥२०३॥

"ಈ ದಶಕದ ಅರ್ಥವನ್ನು ಹೇಗಾದರೂ ಮಾಡಿ ತಿಳಿದುಕೊಳ್ಳಬಹುದು. ಮನಸ್ಸಿನಲ್ಲಿ ಭಾವನೆ ಮಾಡಬಹುದು. ಆದರೆ ಆಳ್ವಾರರ ಆರ್ತಿ ಹೇಗಿದೆ ಯೆಂದು ಮಾತ್ರ ಅರಿಯುವುದಕ್ಕೂ ನಮ್ಮ ಮಾತಿನಲ್ಲಿ ಹೇಳುವುದಕ್ಕೂ

ಸಾಧ್ಯವೇ ಇಲ್ಲ" ವೆಂದು ಅಮ್ಮಂಗಿಯಮ್ಮಾಳ್ ಎಂಬ ಆಚಾರ್ಯರು ಅಪ್ಪಣೆ ಕೊಡಿಸಿದರು. ಹೀಗಿರಲು ಬುದ್ಧಿಸಾಲದ ನಾನು ಆಳ್ವಾರರ ಆರ್ತಿಯನ್ನು ಹೇಗೆ ತಾನೆ ಹೇಳಲಿ ?" ಎಂದು ಆಚಾರ್ಯರು ನಿಯಮಿಸಿದರು.

"ನೀನು ಮೋಕ್ಷಪ್ರದನೆಂದು ನನಗೆ ಗೊತ್ತು. ನನಗೆ ಮೋಕ್ಷ ಕೊಡಬೇಕೆಂಬ ತ್ವರೆ ನಿನಗಿದೆಯೆಂಬುದೂ ಗೊತ್ತು. ಈ ಸಂಸಾರದಲ್ಲಿ ಜುಗುಪ್ಸಿತನಾಗಿ 'ಈ ಕ್ಷಣ ನನ್ನನ್ನುದ್ಧರಿಸು' ಎಂದು ಕೇಳುತ್ತಿರುವ ನನ್ನ ಆರ್ತಿಯೂ ನಿನಗೆ ಗೊತ್ತು. ನೀನೇ ಮೋಕ್ಷ ಕೊಡಲು ಸಮರ್ಥ. ಅದಕ್ಕಿರುವ ಪ್ರತಿಬಂಧಕಗಳನ್ನೆಲ್ಲಾ ಹೋಗಲಾಡಿಸುವವನೂ ನೀನೇ. ಆದುದರಿಂದ ಈ ಕ್ಷಣ ನನ್ನ ಶರೀರಬಂಧವನ್ನು ವಿಮೋಚನೆ ಮಾಡಿ ನಿನ್ನ ಪಾದಾರವಿಂದಕೈಂಕರ್ಯಕ್ಕಾಗಿ, ಹಗಲು ರಾತ್ರಿಯಿಲ್ಲದೆ ನಿತ್ಯ ತೇಜೋಮಯವಾದ ಪರಮ ಪದಕ್ಕೆ ಯಾವಾಗ ನನ್ನನ್ನೊಯ್ಯುವೆ ? ಎನ್ನುವರು.

एलैयरावियुण्णुम् ೭. ೭.

पूर्वस्मिन्दशके हरेरवयवान्स्मृत्वा पुनर्भावना-
माहात्म्यादवलोकयन्मुनिरयं साक्षादिवान्तर्मुदा ।
तत्संश्लेषकुतूहलाद्भुजयुगं दूरं प्रसार्यापि तं
नो लेभे विषसाद तेन वियुतस्त्वीत्वं ऌलम्बे क्षणात् ॥२०४॥

एवं प्राह सखि ! प्रियस्य वदनं स्थित्वा पुरो बाधते
साकं स्वावयवैः किमत्र करवै युष्मद्वचो निष्फलम् ।
अत्र श्रीमुखदर्शनेन सुखमप्यास्ते मुनेरेवम-
प्यौत्कट्यं विरहोत्थदुःखनिवहस्यैवेति भेदोन्यतः ॥२०५॥

पञ्चमपञ्चमदशके सुखदुःखे समबले कथिते ।
अत्र तु दुःखं प्रबलं कथितं मुनिनेति भेदोऽयम् ॥२०६॥

ಪೂರ್ವ ದಶಕದಲ್ಲಿ ಅನುಭವಿಸಿದ ಭಗವಂತನ ಗುಣಗಳನ್ನೆಲ್ಲಾ ಮನಸ್ಸಿನಲ್ಲೇ ಭಾವಿಸಿ ಭಾವಿಸಿ, ಅವನ ಬಾಹ್ಯ ಸಂಶ್ಲೇಷಾಪೇಕ್ಷೆಯಿಂದ ಕೈ ನೀಡಿದರು. ಅವನು ಕೈಗೆ ಸಿಗಲಿಲ್ಲ. ಆ ದುಃಖದಿಂದ ಪತಿವಿಯುಕ್ತೆಯಾದ ಕಾಂತೆಯಾಗಿ, "ಸಖಿ! ಕಾಂತನ ಮುಖಾರವಿಂದವೂ ಅವಯವಗಳೂ ಕಣ್ಣೆದುರಿಗೇ ನಿಂತು ಹಿಂಸಿಸುವುವಲ್ಲಾ! ಏನು ಮಾಡಲಿ? 'ಅವನ ಗೋಜನ್ನು ತೊರೆ' ಯೆಂಬ ನಿನ್ನ ಮಾತು ವ್ಯರ್ಥವಲ್ಲಾ!! ಎನ್ನುವಳು.

ಇಲ್ಲಿ ಅವನ ಮುಖ ದರ್ಶನದಿಂದ ಆನಂದವನ್ನೂ ವಿರಹದಿಂದ ಉತ್ಕಟವಾದ ದುಃಖವನ್ನೂ ಅನುಭವಿಸುವಳು. ೫. ೫. ರಲ್ಲಿ ಸುಖದುಃಖಗಳು ಸಮ. ಇಲ್ಲಿ ಸುಖ ಕಡಿಮೆಯಾಗಿ ವಿರಹ ದುಃಖ ಪ್ರಬಲವಾಗಿರುವುದು.

मायावामनने ೭. ೮.

ममापि हेयं तव चात एव शरीरमेतद्बहुदुःखपूर्णम् ।
कथं बिभर्षीति सुविस्मयो मे प्रब्रूहि सर्वेश्वर! सर्वशक्त! ॥२०७॥

इदमेकं नहि चित्रं पश्य मुने सकलदेहस्य ।
मम सर्वशक्तियोगं व्यक्तिषु सर्वास्वपि विचित्रम् ॥२०८॥

इत्युक्त्वा दर्शितां तेन दृष्ट्वा सर्वात्मतां मुनिः ।
इदं चित्रमिदं चित्रमिति प्रत्येकमाह तम् ॥२०९॥

"ಬಹುದುಃಖ ಪೂರಿತವಾದ ಈ ಶರೀರವು ನನಗೇ ಹೇಯವಾಗಿದೆ. ನಿತ್ಯಶುದ್ಧನಾದ ನಿನಗೆ ಮತ್ತೂ ಹೇಯವಲ್ಲವೆ? ಸರ್ವೇಶ್ವರನಾಗಿ ನೀನು ಹೇಗೆ ತಾನೆ ಇದನ್ನು ಧರಿಸಿರುವೆ? ಬಹಳ ಆಶ್ಚರ್ಯ!" ಎಂದರು. "ಆಳ್ವಾರರೇ! ಇದೊಂದೇ ಆಶ್ಚರ್ಯವೇ? ಸರ್ವಶರೀರಕನಾದ ನನ್ನ ಸರ್ವಶಕ್ತಿಯೋಗವನ್ನೂ ಪ್ರತಿವ್ಯಕ್ತಿಗಳಲ್ಲೂ ಭಿನ್ನಭಿನ್ನವಾಗಿ ಅತ್ಯಾಶ್ಚರ್ಯಕರವಾಗಿರುವುದನ್ನೂ ಕಾಣಿರಾ" ಎಂದು ಹೇಳಿ ಭಗವಂತನು ತೋರಿಸಿದ ಸರ್ವಾಂತರಾತ್ಮತೆಯನ್ನು "ಇದೊಂದು ಆಶ್ಚರ್ಯ; ಇದೊಂದಾಶ್ಚರ್ಯ; ಇದು ಮತ್ತೊಂದಾಶ್ಚರ್ಯ." ವೆಂದು ಪ್ರತ್ಯೇಕವಾಗಿ ಅನುಭವಿಸಿ ಹೇಳುವರು.

एन्नैक्कुमेन्नै ७. ९.

सर्वात्मतां भगवतस्त्वनुभूय सूरि-
स्तृप्तोऽपि संसृतिभयात्पुनराह शौरिम् ।
कस्मादिहार्तमपि मां विनिवेश्य देहे
पीडां ददासि मम नाथ! दयाम्बुराशे! ॥२१०॥

सत्यामपि पीडायां तव सूरे त्वत्प्रबन्धतो जगताम्!
उज्जीवनाय निदधे त्वामिति सर्वेश्वरः प्राह ॥२११॥

दासस्य तव स्तोमं श्रुत्वा भक्तैस्सहानन्दम् ।
अनुभवितुमिच्छया त्वा निदधेऽत्रेत्यब्रवीच्छौरिः ॥२१२॥

तर्हि व्यासपराशरवाल्मीकिप्रभृतिभिस्स्तुतिः क्रियताम् ।
अज्ञेन मया कस्मात्क्रियतां स्तुतिरित्यवोचदाचार्यः ॥२१३॥

प्रीतिपुरस्सरललितद्राविडभाषामयं काव्यम् ।
श्रोतुं कुतूहलात्त्वां नियोजयामीति हरिराह ॥२१४॥

निर्व्याजयारुणिकताञ्च सुशीलताञ्च
वात्सल्यशक्तिमुखसद्गुणराशिताञ्च ।
ज्ञात्वापि तत्प्रतिकृतिं मनसाप्यलब्ध्वा
संभ्रान्तसर्वकरणो मुनिराह हर्षात् ॥२१५॥

ಭಗವಂತನ ಸರ್ವಾತ್ಮತೆಯನ್ನನುಭವಿಸಿ ತೃಪ್ತರಾದಾಗ್ಯೂ ಈ ಪ್ರಕೃತಿ ಸಂಬಂಧಕ್ಕೆ ಹೆದರಿ, "ದಯಾನಿಧೇ! ಇಷ್ಟೊಂದು ಆರ್ತನಾಗಿದ್ದರೂ, ಈ ಶರೀರದಲ್ಲೇ ನನ್ನನ್ನಿಟ್ಟು ದುಃಖವನ್ನು ಕೊಡುತ್ತಿರುವೆಯಲ್ಲಾ! ಇದೇಕೆ?"

ಎಂದು ಪುನಃ ಅವನನ್ನೇ ಕೇಳಿದರು. "ಆಳ್ವಾರರೇ! ನಿಮಗೆ ಕಷ್ಟವಾದರೂ ನಿಮ್ಮ ಪ್ರಬಂಧದಿಂದ ಲೋಕವೇ ಉಜ್ಜೀವಿಸುವುದು. ಮತ್ತೆ ಭಕ್ತರಾದ ನೀವು ಮಾಡುವ ಸ್ತೋತ್ರವನ್ನು ಭಕ್ತರೊಡಗೂಡಿ ನಾನು ಕೇಳಬೇಕೆಂಬಾಸೆ. ಅದರಿಂದಿಟ್ಟಿರುವೆನು." ಎಂದ. "ಹಾಗಾದರೆ ಜ್ಞಾನಿಗಳಾಗಿ ಶಕ್ತರಾದ ವ್ಯಾಸಾದಿ ಮಹರ್ಷಿಗಳಿಂದ ಸ್ತೋತ್ರಮಾಡಿಸಿಕೊಂಡು ಆನಂದಿಸು. ಅಜ್ಞಾನಾದ ನನ್ನಿಂದೇನು?" ಎಂದರು. "ಕಠೋರವಾಗಿರದೆ ಅತ್ಯಂತ ಲಲಿತವಾದ ದ್ರಾವಿಡಭಾಷಾಮಯ ಕಾವ್ಯವನ್ನು ಭಕ್ತಿಯೊಡನೆ ಪಾಡುವವರು ನೀವು. ಅದನ್ನೇ ಕೇಳಬೇಕೆಂಬಾಸೆ." ಎಂದ. ಆಗ ಆಳ್ವಾರರು ಇವನ ನಿರ್ಹೇತುಕ ದಯೆಯನ್ನೂ, ಸೌಶೀಲ್ಯವನ್ನೂ, ವಾತ್ಸಲ್ಯ, ಶಕ್ತಿ ಮುಂತಾದ ಸಮಸ್ತ ಕಲ್ಯಾಣಗುಣಗಳನ್ನೂ ನೆನೆನೆನೆದು ಅವನ ದಿವ್ಯ ಮಂಗಳವಿಗ್ರಹವನ್ನು ಮಾನಸಿಕವಾಗಿ ಕೂಡ ಕಾಣದಿದ್ದರೂ, ಆಹಾ! ಏನು ದಯೆ!! ಏನು ದಯೆ!!! ಎಂದು ಕಳವಳಗೊಳ್ಳುವರು.

इन्बमुपयक ७. १०.

अंतस्स्थित्वाध्यापितं शौरिणा यद्गाचोद्गीर्णं पद्यसाहस्रमेतत् ।
श्रोतुं कर्तुं तस्य वाञ्छन्मुरारेः किञ्चित्क्षेत्रं गन्तुमैच्छच्छठारिः २१६

तिरुवारन्विळै नामा देशोयं मुनिमनोविषयः ।
अत्र ह्यास्ते शेषे सर्वेशस्सर्वपरिवारैः ॥२१७॥

त्यक्त्वा वैकुण्ठमेतच्छ्रवणकुतुकतरस्स्वावरोधैश्च सार्धं
नित्यैर्मुक्तैश्च शौरिस्समनुगत इहाहञ्च गत्वा यथार्हम् ।
एतद्गाथासहस्रं श्रुतिपथविषयं किन्नु कुर्यां मुरारेः
किं वा सर्वां सपर्यां मम तु स भगवान्स्वीकरिष्यत्यनन्तः ॥२१८॥

गाथासहस्रं हि विशिष्टमेतद्रामायणाच्चत्र कविश्च गाता ।
भिन्नाविहैकः किल तौ, न सीता शुश्राव तच्छ्रीसहितोस्य काव्यम् २१९

ಭಗವಂತನು ತಮ್ಮೊಳಗೇ ಅಂತರ್ಯಾಮಿಯಾಗಿದ್ದು, ತಮ್ಮ ನಾಲಿಗೆಯಲ್ಲೇ ಕುಳಿತು, ತನ್ನನ್ನೇ ತಾನು ಪಾಡಿಕೊಂಡನಲ್ಲವೆ? ಈ ರೀತಿ ಅನುಭವ ಪರೀವಾಹರೂಪವಾಗಿ ತಮ್ಮ ಬಾಯಲ್ಲಿ ಹೊರಟ ಸಾವಿರಪದ್ಯಗಳನ್ನು ಭಗವಂತನು ಕೇಳಬೇಕೆಂದನಲ್ಲಾ! ಎಲ್ಲವನ್ನೂ ಅವನಿಗೆ ಶ್ರುತಪಡಿಸಬೇಕು. ಇದಕ್ಕಾವ ಸ್ಥಳ ಸರಿಯಾದುದು? ಎಂದು ಹುಡುಕಿ, "ತಿರುವಾರ್ಱ ವಿಳೈ" ಎಂಬ ದಿವ್ಯದೇಶಕ್ಕೆ ಹೋದರು. ಅಲ್ಲಿ ಸಮಸ್ತ ಪರಿವಾರಗಳಿಂದೊಡಗೂಡಿ ಆದಿಶೇಷನಲ್ಲಿ ವಿರಾಜಿಸುತ್ತಿರುವ ಆ ಭಗವಂತನನ್ನು ದರ್ಶಿಸಿ, "ಆಹಾ! ನನ್ನ ಪ್ರಬಂಧವನ್ನು ಕೇಳುವ ಕುತೂಹಲದಿಂದ ಸರ್ವೇಶ್ವರನು ವೈಕುಂಠವನ್ನು ಬಿಟ್ಟು, ತನ್ನ ಮಹಿಷೀ ಪರಿಜನಗಳೊಡನೆಯೂ, ನಿತ್ಯ ಮುಕ್ತರೊಡನೆಯೂ ಇಲ್ಲಿ ಬಂದಿರುವನೆಂದೂ, ಇದೇ ಸರಿಯಾದ ಸ್ಥಳವೆಂದೂ, ಸ್ವಯಂ ನೋಡಿ ಸಾವಿರ ಪದ್ಯಗಳನ್ನು ಶ್ರುತಪಡಿಸುವೆನೆಂದೂ, ನನ್ನ ಸರ್ವವಿಧ ಕೈಂಕರ್ಯಗಳನ್ನೂ ಅವನು ಸ್ವೀಕರಿಸುವನೆ?" ಎಂದೂ ಹಂಬಲಿಸುವರು.

ಈ ಪ್ರಬಂಧವು ಶ್ರೀರಾಮಾಯಣಕ್ಕಿಂತಲೂ ಮಿಗಿಲಾದುದು. ಶ್ರೀರಾಮಾಯಣವನ್ನು ಬರೆದವರು ವಾಲ್ಮೀಕಿ. ಹಾಡಿದವರು ಲವಕುಶರು. ಕೇಳಿದವನು ಸೀತಾವಿಯುಕ್ತನಾದ ಶ್ರೀರಾಮಚಂದ್ರ. ಈ ಪ್ರಬಂಧವನ್ನು ರಚಿಸಿದವರು ಲಕ್ಷ್ಮೀಸಮೇತನಾಗಿ ನಿತ್ಯಮುಕ್ತಾದಿಗಳೊಡಗೂಡಿದ ಸರ್ವೇಶ್ವರನು.

तेविमारावार् ८. १.

अनवाप्य मनोरथं स्वकीयं व्यथितः कारिसुतोऽतिशङ्क्य तस्य ।
निखिलेश्वरतां श्रितार्थताञ्च प्रतिबुद्धोऽजनि तेन बोधितः ॥२२०॥

ಆಳ್ವಾರವರು ತಮ್ಮ ಇಷ್ಟಾರ್ಥವನ್ನು ಹೊಂದದೆ ಬಹಳ ದುಃಖಿತರಾದರು. "ನನ್ನ ಇಷ್ಟ ನೆರವೇರುವುದೋ? ಇಲ್ಲವೋ? ಫಲ ಕೊಡುತ್ತಾನೆಯೋ? ಇಲ್ಲವೋ? ನನ್ನದೇ ತಪ್ಪೋ? ಕರುಣಿಸಲಾರನೋ? ದಯಾಮಯನಲ್ಲವೆ? ಇದೇನಿದು?" ಇದೇ ಮೊದಲಾಗಿ ಅತಿಶಂಕೆ ಮಾಡಿದರು. ಆಗ ಭಗವಂತನು "ಆಳ್ವಾರರೇ! ನಾನು ಸರ್ವೇಶ್ವರನಲ್ಲವೆ? ನಾನು, ನನ್ನದು, ಎಲ್ಲವೂ ಆಶ್ರಿತರಿಗಾಗಿಯೇ ಅಲ್ಲವೆ? ಏಕೆ ಹೀಗೆ ಶಂಕಿಸುವಿರಿ?" ಎಂದ. ಆಗ ಸ್ವಲ್ಪ

ಸಮಾಧಾನ ಹೊಂದಿದರು.

नङ्गळुवरिवळै ८. २.

तस्मिन्नुपाये सुविनिश्चितेऽपि विलम्बहेतुं स्वजनेषु सङ्गम् ।
स्वस्यायमाशङ्क्य स एव नास्तीत्यन्यापदेशाद्व्यवृणोत्स्वभावम् ॥२२१॥

ಅವನೇ ಉಪಾಯವೆಂಬ ಅಂಶ ನಿಶ್ಚಯವಾಗಿದ್ದರೂ, ಫಲ ಕೊಡಲು ಏಕೆ ಇಷ್ಟು ತಡ ಮಾಡುವನು? "ಓಹೋ! ನನಗೆ ಬಂಧುಗಳಲ್ಲಿ ಮಮತೆ ಹೋಗಿಲ್ಲದಿರುವುದೇ ಕಾರಣವಿರಬೇಕು." ಎಂದು ಊಹಿಸಿ "ಸಖಿ! ತಾಯಿ! ನೀವು ಅವನ ಗೋಜು ಬೇಡವೆನ್ನುವಿರಿ. ನಾನು ಕೇಳುವವಳಲ್ಲ. ನಿಮಗೂ ನನಗೂ ಸಂಬಂಧ ತೊರೆಯಿತು." ಎಂದು ನಾಯಕಿಯ ಮಾತಿನಲ್ಲಿ ಹೇಳಿ, ನನಗೆ ಮಮತಾ ವಿಷಯಗಳೆಲ್ಲವೂ ತೊಲಗಿದುವು. ಎನ್ನುವರು.

अङ्गुमिङ्गुम् ८. ३.

सर्वेश्वरस्य सुकुमारतरं वपुस्त-
द्दृष्ट्वा स्वकार्यपरताञ्च जगज्जनस्य ।
खिन्ने मुनौ हरिरदर्शयदस्य सर्वान्
स्वस्यैव मङ्गलपरान्मुमुदे ततोऽयम् ॥२२२॥

ಸರ್ವೇಶ್ವರನ್ನು ತನಗೆ ತೋರಿಸಿ ಕೊಟ್ಟ ಸುಕುಮಾರತರವಾದ ಅವನ ದಿವ್ಯಮಂಗಳ ವಿಗ್ರಹವನ್ನು ದರ್ಶಿಸಿದರು. ಆ ದಿವ್ಯ ಮಂಗಳ ವಿಗ್ರಹವನ್ನು ನೋಡದೆಯೇ ತಮ್ಮ ತಮ್ಮ ಕೆಲಸದಲ್ಲಿ ಅಂದರೆ ಹೊಟ್ಟೆ ಬಟ್ಟೆಗಳಲ್ಲಿ ನಿರತರಾದ ಈ ಲೋಕದ ಜನರನ್ನು ನೋಡಿದರು. ಅಯ್ಯೋ! ಈ ಸುಕುಮಾರವಾದ ದಿವ್ಯಮಂಗಳವಿಗ್ರಹಕ್ಕೆ ಏನು ಕೆಡಕಾಗುವುದೋ! ಮಂಗಳವನ್ನು ಕೋರುವವರೇ ಇಲ್ಲವಲ್ಲಾ!! ಎಂದು ಬಹುವಾಗಿ ಕೊರಗಿದರು. ಆಗ ಭಗವಂತನು ತನಗೆ ಮಂಗಳಾಶಾಸನ ಮಾಡುತ್ತಲೇ ಇರುವ ಒಟ್ಟು ಒಂಬು ಲೋಕ

ವನ್ನೇ ತೋರಿಸಿಕೊಟ್ಟ. ಅದನ್ನು ನೋಡಿ ಆನಂದಿಸಿದರು.

वार्कडावरुवि ८. ४.

विविधसकलसृष्टेः कारणं चित्रशक्ति
रिपुजननिधनार्थान्शौर्यवीर्यादिकांश्च ।
स्थलमपि सुदृढं तद्रक्षितं सर्वशक्तै-
र्मुनिरयमवलोक्य त्रासमुज्झाञ्चकार ॥२२३॥

ಆಳ್ವಾರರು ಈ ರೀತಿಯಾಗಿ ಭಗವಂತನ ಸುಕುಮಾರತರ ದಿವ್ಯಮಂಗಳ ವಿಗ್ರಹಕ್ಕೆ ಏನು ಧಕ್ಕೆ ಬರುವುದೋ! ಎಂದು ಕೊರಗಿದಾಗ, ಭಗವಂತನು "ಆಳ್ವಾರರೇ! ನೀವೇಕೆ ಭಯಪಡುವಿರಿ? ನಾನು ಸಕಲ ಜಗತ್ಸೃಷ್ಟಿಗೂ ಕಾರಣನಲ್ಲವೆ? ನನ್ನ ಶಕ್ತಿ ಅನಂತವಾಗಿ ವಿಚಿತ್ರವಾಗಿರುವುದನ್ನು ಕಾಣಿರಾ? ನನ್ನ ಶೌರ್ಯವೀರ್ಯಾದಿಗಳು ಶತ್ರು ಸಂಹಾರಕ್ಕಾಗಿಯೇ ಅಲ್ಲವೆ? ನಾನಿರುವ ಸ್ಥಳವೋ "ಸಾಯೋಧ್ಯಾ ಸಾಪರಾಜಿತಾ" ಎಂಬಂತೆ ಯಾರಿಂದಲೂ ಜಯಿಸಲಸಾಧ್ಯವಾದುದು. ಅದೂ ಕೂಡ ಅಸ್ಥಾನಭಯಶಂಕಿಗಳಾದ ನನ್ನಂತಿಯೇ ಸರ್ವಶಕ್ತರಾದ ನಿತ್ಯಮುಕ್ತಾದಿಗಳಿಂದ ಸಂರಕ್ಷಿಸಲ್ಪಡುತ್ತಿದೆ. ಹೀಗಿರಲು ನಿಮಗೇತರ ಭಯ? ಎಂದನು. ಅದನ್ನೆಲ್ಲಾ ನೋಡಿ ನಿರ್ಭಯರಾದರು.

मायक्कूत्ता ८. ५.

वपुषावयवैस्समण्डनैश्शयनासनयानसुस्थितः ।
मम लोचनगोचरो भवेर्धनवद्गिरिवत्तटाकवत् ॥२२४॥

इति तद्दर्शनोत्कण्ठाक्षिप्तचित्तो महामुनिः !
उच्चैश्चुक्रोश, दहनो येन दह्येत तत्क्षणम् ॥२२५॥

ನೀನು ಮಲಗಿರುವಾಗಲೂ, ಕುಳಿತಿರುವಾಗಲೂ, ಸಂಚರಿಸುತ್ತಿರುವಾಗಲೂ ಸರ್ವಾಭರಣ ಭೂಷಿತನಾಗಿ ಸರ್ವಾವಯವ ಶೋಭೆಯಿಂದ ಕೂಡಿದ,

ನೀಲಮೇಘ, ಕುಲಪರ್ವತ, ದೊಡ್ಡ ಜಲಾಶಯ ಇವುಗಳಂತೆ ಸ್ಪೃಹಣೀಯವಾಗಿಯೂ, ಅವಿಚಾಲ್ಯವಾಗಿ ಉನ್ನತವಾಗಿಯೂ, ಗಂಭೀರವಾಗಿಯೂ ಇರುವ ನಿನ್ನ ದಿವ್ಯ ಮಂಗಳ ವಿಗ್ರಹವನ್ನು ಸದಾ ನನ್ನ ಕಣ್ಣಿಗೇ ಕಾಣುತ್ತಿರುವಂತೆ ಮಾಡಬೇಕೆಂದರು. ಈ ರೀತಿ ಅವನನ್ನು ನೋಡಿದ ಹೊರತು ಆಗುವುದೇ ಇಲ್ಲವೆಂದು ತಮ್ಮ ಕ್ಲೇಶಾಗ್ನಿಯಿಂದ ಬೆಂಕಿಯೂ ಸುಟ್ಟುಹೋಗುವಂತೆ ಗಟ್ಟಿಯಾಗಿ ಕೂಗಿಕೊಳ್ಳುವರು.

एह्लियुंकालैयु ೮. ೬.

आर्तप्रलापमवकर्ण्य स कारिसूनो-

स्संश्लेषणेऽपि सहसा परिचिन्त्य दोषम् ।

आस्थाय देशमुचितं क्रमशोऽस्य चित्ते

तेनैव साकमविशन्मुदितस्ततोऽयम् ॥२२६॥

ಹಿಂದಿನ ದಶಕದಲ್ಲಿ ಆಳ್ವಾರರು ತಮ್ಮ ಕ್ಲೇಶವನ್ನು ಹೇಳಿದರು. ತಮ್ಮ ಕ್ಲೇಶವನ್ನು ನೋಡಿ ಸಹಿಸಲಾರದವನ ಕ್ಲೇಶವನ್ನು ಬಣ್ಣಿಸಲಾರದೆ ಹೋದರು. "ತಿಂಗಳ ಮೇಲೆ ಬದುಕಲಾರೆ" ನೆಂದು ಹೇಳಿದ ಸೀತೆಯೆಲ್ಲಿ? "ಸೀತೆಯನ್ನು ಬಿಟ್ಟು ಒಂದು ಕ್ಷಣಕಾಲವೂ ಬದುಕಲಾರೆನು" ಎಂದು ಹೇಳುವ ಶ್ರೀರಾಮನೆಲ್ಲಿ? ಭಗವಂತನು "ಇವರ ಕಷ್ಟಕ್ಕೆ ತಾನು ಒದಗಲಿಲ್ಲವಲ್ಲಾ!" ಎಂದು ಬಹಳ ನಾಚಿದ. ಝಟ್ಟನೆ ಬಂದು ಸಂಶ್ಲೇಷಿಸೋಣವೆಂದರೆ ಧರ್ಮಿ ಏನಾಗುವುದೋ ಭಯ! ಈ ರೀತಿ ಬಹಳವಾಗಿ ಹಿಂದು ಮುಂದು ಯೋಚಿಸಿ, ಸ್ವಲ್ಪಸ್ವಲ್ಪವಾಗಿ ಅನುಭವವನ್ನೂಡಿಸಲು "ತಿರುಕ್ಕಡಿತ್ತಾನ" ವೆಂಬ ದಿವ್ಯ ದೇಶದಲ್ಲಿ ನೆಲೆಸಿದ. ಕ್ರಮೇಣ ಆ ದಿವ್ಯ ದೇಶದೊಡನೆಯೇ ಇವರ ಹೃದಯದಲ್ಲಿ ಪ್ರವೇಶಿಸಿದ. ಈ ಆನಂದವನ್ನು ಈ ದಶಕದಲ್ಲಿ ನಿರೂಪಿಸುವರು.

इरुत्तुंवियन्दु ೮. ೭.

अनादेः कालान्मे दुरितचयमपनुद्योत्तरभवं

त्वदङ्घ्रा हेयं मामसुलभमपि च भोग्यञ्च कलयन् ।

मया संश्लिष्य स्वं निखिलमघचयमाहत्य मुदितो
हरिर्जातो मन्ये बत नहि चपलमेतादृशमहम् ॥२२७॥

इति मत्वा शठारातिरपूर्वं हर्षमाप सः ।
अभाविनञ्च, नह्यन्यः पुरुषार्थ इतो भवेत् ॥२२८॥

ಭಗವಂತನು ಅನಾದಿಕಾಲದಿಂದಲೂ ನಾನು ಮಾಡಿದ ಪಾಪಗಳನ್ನೆಲ್ಲಾ ನಾಶಮಾಡಿ ಮುಂದಿನ ಪಾಪಗಳು ನನ್ನಲ್ಲಿ ಸೇರದಂತೆಯೂ ಮಾಡಿ, ನನ್ನನ್ನು ಕ್ಷಣಕಾಲ ಕಾಣದಿದ್ದರೆ ಬಹಳವಾಗಿ ಪರಿತಪಿಸುತ್ತಾ, ಹೇಯನಾದ ನನ್ನನ್ನು ದುರ್ಲಭನನ್ನಾಗಿಯೂ, ಬಹಳ ಭೋಗ್ಯನನ್ನಾಗಿಯೂ ಭಾವಿಸಿ, ತಾನಾಗಿ ನನ್ನ ಮೇಲೆ ಬಿದ್ದು ಸಂಶ್ಲೇಷಿಸಿ, ತನ್ನ ಸಮಸ್ತ ಪಾಪಗಳನ್ನೂ ನೀಗಿಸಿಕೊಂಡ ವನಂತೆ ಮಿತಿಮೀರಿ ಆನಂದಿತನಾಗಿರುವನು. ಇಂತಹ ಚಪಲಬುದ್ಧಿಯುವನ ನ್ನೆಲ್ಲೂ ಕಾಣೆನಲ್ಲಾ! ಆಹಾ ಏನು ವಾತ್ಸಲ್ಯ!! ಏನು ಆಶ್ರಿತಪಾರತಂತ್ರ್ಯ!!! ಎಂದು ಹೇಳಿ ಹಿಂದೆ ಮುಂಪೆ ಯಾವಾಗಲೂ ಅನುಭವಿಸಿಲ್ಲದಂತಹ ಪರಮಾ ನಂದವನ್ನು ಹೊಂದಿ, "ಇದಕ್ಕಿಂತಲೂ ಬೇರೆ ಪುರುಷಾರ್ಥವೇ ಇಲ್ಲ" ವೆನ್ನುವರು.

कण्णुळ्शिवन्दु ८. ८.

शठारेस्संश्लेषो मम बहुसुकृतलब्धः पुनरयं
स्वनैच्याद्विश्लेषं यदि जनयति पुरा किं नु करवै ।
विचिन्त्येत्थं शौरिर्मणिवरसदृशभोग्यं प्रकटयं-
स्तदात्मानं तुष्टोऽभवदिति मुनिरयं वक्ति मुदितः ॥२२९॥

"ಬಹು ಪುಣ್ಯಗಳಿಗೆ ಫಲವಾಗಿ ಈ ಆಳ್ವಾರರ ಸಂಶ್ಲೇಷವು ನನಗೆ ದೊರೆತಿದೆ. 'ತಾನು ಬಹಳ ಕೀಳಾದವ'ನೆಂದು ಆಳ್ವಾರರು ಎಲ್ಲಿಯಾದರೂ ನನ್ನನ್ನು ಅಗಲಿ ದೂರ ಸರಿದರೆ ಏನು ಮಾಡಲಿ?" ಎಂದು ಭಗವಂತನು

ಬಹಳ ಯೋಚನೆ ಮಾಡಿದ. "ಓಹೋ! ಉಪಾಯ ಹೊಳೆಯಿತು. ನನ್ನ ದಿವ್ಯಮಂಗಳವಿಗ್ರಹ, ಅದರ ಭೋಗ್ಯತೆ ಇವನ್ನು ತೋರಿಸಿದರೆ ಅಗಲಲಾರರು," ಎಂದು ತೀರ್ಮಾನಿಸಿ, ಅದನ್ನು ತೋರಿಸಿ ತಾನು ಬಹುವಾಗಿ ಆನಂದಿಸಿದ. ಈ ಆನಂದವನ್ನು ನೋಡಿ ಆಳ್ವಾರರು ಬಹು ಸಂತೋಷಗೊಳ್ಳುವರು.

ಕರುಮಾಣಿಕ್ಕಮಲೈ ೮. ೯.

तच्छेषत्वैकरस्यात्प्रमुदितहृदयो हर्षजात्पारवश्यात्
काचित्कान्ता स भूत्वा ह्यनितरपरतां बोधयामास सख्यै ।
पत्युस्सौन्दर्यभूषायुधमुखकृतिताशौर्यपूर्वैर्गुणौघै-
रुक्त्वा तस्यानुरूप्यं ह्यरुणदथ विवाहे प्रयत्नं जनन्याः ॥२३०॥

ಆಳ್ವಾರರು ಭಗವಂತನ ಸೌಂದರ್ಯಾದಿಗಳನ್ನೂ, ತಮ್ಮ ಅನನ್ಯಾರ್ಹವಾದ ಜೀವಾತ್ಮ ಸ್ವರೂಪವನ್ನೂ ಅನುಭವಿಸಿ ಆನಂದಿತರಾಗಿ ತಮ್ಮ ಶೇಷತ್ವರಸಪಾರವಶ್ಯದಿಂದ ತಮ್ಮ ಸ್ಥಿತಿಯಳಿದು ನಾಯಕಿಯಾದರು. ಪತಿಸಂಯೋಗಕ್ಕೆ ತಕ್ಕ ಇವಳ ವಯಸ್ಸನ್ನು ತಾಯಿ ಮೊದಲಾದವರು ನೋಡಿ ಮದುವೆ ಮಾಡಲು ಯೋಚನೆ ಮಾಡಿ ಸ್ವಯಂವರವನ್ನು ಸಾರಿದರು. ಆಗ ಸಖಿಯಾದವಳು "ಇವಳು ತಿರುಪ್ಪುಲಿಯೂರ್ ಸ್ವಾಮಿಯಲ್ಲಿ ಅನುರಕ್ತಳಾಗಿರುವಳು. ಸಂಶ್ಲೇಷವೂ ನಡೆದಿದೆಯೆಂದು ಚಿಹ್ನೆಗಳಿಂದ ತಿಳಿದು ಬರುತ್ತೆ. ಆದುದರಿಂದ ಈ ಸ್ವಯಂವರ ಪ್ರಯತ್ನವನ್ನು ಬಿಡಿ; ಇದು ಧರ್ಮವಲ್ಲ." ಎಂದಳು. ಆಗ ತಾಯಿಯು "ವರನು ಯೋಗ್ಯನೆ? ಅವನ ಗುಣಾದಿಗಳನ್ನು ಪರಿಶೀಲಿಸಬೇಡವೆ?" ಎಂದಳು. ಅದಕ್ಕೆ ಸಖಿಯು "ವರನು ಸಮಸ್ತ ಕಲ್ಯಾಣಗುಣಪರಿಪೂರ್ಣನು. ಒಂದು ವೇಳೆ ಹಾಗಲ್ಲದಿದ್ದರೂ ಅವನಿಗೇ ಇವಳು ಅನನ್ಯಾರ್ಹಳು. ಆದ ಕಾರಣ ಈ ಪ್ರಯತ್ನ ಬಿಡಿ" ಎಂದು ವಿವಾಹ ಪ್ರಯತ್ನವನ್ನು ತಡೆದಳು. ಅಷ್ಟಾಕ್ಷರ ಮಂತ್ರದಲ್ಲಿ ಹೇಳುವ ಅನನ್ಯಾರ್ಹ ಶೇಷತ್ವವನ್ನು ಇಲ್ಲಿ ವಿವರಿಸುವರು. ಅನ್ಯ ಶೇಷತ್ವವೂ ಸ್ವಸ್ವಾತಂತ್ರ್ಯವೂ ಸ್ವರೂಪಕ್ಕೆ ವಿರುದ್ಧವಾದುವಲ್ಲವೆ?

नेडुमाल्कडिमै ८. १०.

उकारनमसोः पुरा ह्यवदद्दर्थमर्थान्मुनि-
स्तदीयचरमावधेर्न हि विना पुनश्शेषताम् ।
स्थिरा भवति शेषता भगवतस्ततोऽबोध-
त्तदीयचरमावधिं स्वपुरुषार्थसीमास्थलीं ॥२३१॥

ಪ್ರಣವದಲ್ಲಿ ಮಧ್ಯಮಾಕ್ಷರವಾದ ಉಕಾರ. ಮತ್ತು ಅಷ್ಟಾಕ್ಷರದಲ್ಲಿ ಮಧ್ಯಮಪದವಾದ ನಮಶ್ಶಬ್ದ, ಇವುಗಳ ಅರ್ಥವಾದ ಅನನ್ಯಾರ್ಹ ಶೇಷತ್ವ ವನ್ನು ವಿವರಿಸಿದರು. ಇದು ಭಾಗವತ ಶೇಷತ್ವಪರ್ಯಂತವಾಗದಿದ್ದರೆ ನೆಲೆ ನಿಲ್ಲುವುದಿಲ್ಲವಾದ್ದರಿಂದ "ಭಗವದ್ಭಕ್ತರಾದ ಭಾಗವತರುಗಳಿಗೆ ನಾನು ಕ್ರಯ ವಿಕ್ರಯಾರ್ಹ"ನೆಂದು ಹೇಳಿ. ಈ ಭಾಗವತ ಶೇಷತ್ವವೆಂಬ ಪುರುಷಾರ್ಥಕ್ಕೆ ಮತ್ಯಾವ ಪುರುಷಾರ್ಥಗಳೂ ಸರಿದೂಗಲಾರವೆಂದು ಅಪ್ಪಣೆ ಕೊಡಿಸುವರು. "ಪಯಿಲುಂ ಶುಡರೊಳಿ"ಯಲ್ಲಿ "ಭಾಗವತರು ನನಗೆ ಸ್ವಾಮಿ (ಶೇಷಿ) ಗಳು." ಎಂದರು. ಇಲ್ಲಿ "ಭಾಗವತರು ನನಗೆ ಭೋಗ್ಯರು." ಎನ್ನುವರು.

कोण्डपेण्डिर् ९. १.

भक्तानां दास्यमेव प्रकटयति हरौ सत्फलं तत्कृतज्ञो
बन्धुर्नान्योऽस्ति तस्मात्तदितरदखिलं बन्धुजातं निरर्थम् ।
इत्युक्त्वा कारिसूनुस्सकलजनगणं बोधयामास भक्त्या
प्राप्याभासांस्त्वदीयांस्त्यजत परिकरैः प्रापकाभासमेवं ॥२३२॥

ಭಾಗವತ ಶೇಷತ್ವವೇ ಪರಮ ಪುರುಷಾರ್ಥವೆಂದು ಆಳ್ವಾರರಿಗೆ ಭಗ ವಂತನು ತೋರಿಸಿ ಕೊಟ್ಟ. ಆಗ ಆಳ್ವಾರರು 'ಆಹಾ! ಇಂತಹ ಪುರುಷಾರ್ಥ ವನ್ನು ನಿರ್ಹೇತುಕವಾಗಿಯೇ ನನಗೆ ತೋರಿಸಿಕೊಟ್ಟ ಭಗವಂತನೇ ನಿರುಪಾ ಧಿಕ ಬಂಧು. ಮಿಕ್ಕೆಲ್ಲವೂ ನಾಲ್ಕು ದಿನದ ಬಂಧುಗಳು. ಆದ ಕಾರಣ ವ್ಯರ್ಥ

ವಾದ ಆ ಬಂಧುಗಳನ್ನು ತೊರೆದು ನಿರುಪಾಧಿಕ ಬಂಧುವಾದ ಭಗವಂತನನ್ನೇ ಆಶ್ರಯಿಸಿರಿ. ಆ ಭಗವಂತನನ್ನು ಬಿಟ್ಟರೆ ಮತ್ತೆಲ್ಲವೂ ಪ್ರಾಪ್ಯಾಭಾಸಗಳು; ಮತ್ತು ಪ್ರಾಪಕಾಭಾಸಗಳು. ಅವನ್ನು ತೊರೆಯಿರಿ." ಎಂದು ಪರೋಪದೇಶ ಮಾಡುತ್ತಾರೆ.

पण्डैनाळाले ९. २.

बन्धुस्त्वं मम यदि पश्य मां कटाक्षै-
रत्तिष्ठ क्षणमिह चास्वपृच्छ शं मे ।
किं वैवं शयनकृतश्श्रमो न देहे
प्रत्येहि स्वगतिसुरम्यतां विवृण्वन् ॥२३३॥

स्मित्वा ते पदयुगळं निधेहि शीर्षे
लक्ष्म्या त्वं रहसि युतो नियुंक्ष्व सेवाम् ।
इत्यार्या वकुलधरो मुहुर्ययाचे
निर्विण्णः खलु नितरां फलानवाप्त्या ॥२३४॥

"ನೀನೇ ನಿರುಪಾಧಿಕ ಬಂಧುವೆಂದ ಮೇಲೆ ಬಂಧುಕೃತ್ಯವನ್ನೆಸಗಬೇಡವೇ? ಎಲ್ಲಿ? ಒಂದು ಕ್ಷಣ ಏಳು; ಕುಳಿತುಕೋ; ನನ್ನನ್ನು ನೋಡು; ನನ್ನ ಕ್ಷೇಮವನ್ನು ವಿಚಾರಿಸು; ಇದೇನು? ಹೀಗೆ ಒಂದೇ ಸಮನೆ ಮಲಗಿರುವೆಯಲ್ಲಾ! ಮೈನೋಯಲಾರದೆ? ಎಲ್ಲಿ? ನನ್ನ ಹತ್ತಿರ ಬಾ; ನಿನ್ನ ನಡಿಗೆಯ ಸೊಬಗನ್ನು ನೋಡುವೆನು! ನನ್ನನ್ನು ನೋಡಿ ಒಂದು ಸಲ ಹುಸಿ ನಗೆಯಾಡಲಾರೆಯಾ? ನಿನ್ನ ಪಾದಗಳೆರಡನ್ನೂ ಚೆನ್ನಾಗಿ ನನ್ನ ತಲೆಯಮೇಲಿರಿಸು. ನೀನು ಲಕ್ಷ್ಮೀಸಮೇತನಾಗಿ ಏಕಾಂತದಲ್ಲಿರುವಾಗ ನಿನ್ನ ಅಂತರಂಗಕೈಂಕರ್ಯಗಳನ್ನು ಮಾಡುವಂತೆ ನನ್ನನ್ನು ನಿಯಮಿಸು." ಎಂದು ಆಳ್ವಾರರು ಫಲವನ್ನು ಹೊಂದದೆ ಬಹಳ ಆರ್ತಿಯಿಂದ ದುಃಖಿತರಾಗಿ "ತಿರುಪ್ಪುಳಿಂಕುಡಿ"ಯಲ್ಲಿ ಮಲಗಿರುವ ಭಗವಂತನನ್ನು ಬೇಡುತ್ತಾರೆ.

ओरायिरमाय् ९. ३.

त्वयार्थनीयं किमु कारिसूनो ! मत्प्रार्थनीयं खलु सर्वमेतत् ।
नारायणोऽयं नरशब्दवाच्योऽहञ्चेति यो वेद न तस्य चिन्ता ॥२३५॥

इति बोधयतो हरेश्शठारिर्हृदि कृत्वा परमां सुशीलताम् ।
परवानभवत्ततो निमग्नः परमानन्दमवाप निर्भरः ॥२३६॥

ಆಳ್ವಾರರೇ! ನೀವು ನನ್ನಲ್ಲಿ ಬೇಡುವ ಈ ಪುರುಷಾರ್ಥಗಳನ್ನೆಲ್ಲಾ ನಾನಾಗಿ ಬೇಡಿ ನಿಮಗೆ ಅನುಗ್ರಹಿಸಬೇಕಲ್ಲವೆ? ನೀವು ಬೇಡುವುದು ನನಗೆ ಬಹಳ ಅವಮಾನಕರವಾದುದು. ನಾನು ನಾರಾಯಣ; ನೀವು ನರಶಬ್ದ ವಾಚ್ಯರಲ್ಲವೆ ? ಈ ಅರ್ಥ ಭಾವಿಸಿದರೆ ಸಾಕು. ನೀವು ಚಿಂತಿಸುವ ಅವಕಾಶವೇ ಇಲ್ಲವಲ್ಲಾ ! " ಎಂದು ಭಗವಂತನು ಹೇಳಿದನು. ಈ ಮಾತನ್ನು ಕೇಳಿ ನಾರಾಯಣನ ಸೌಶೀಲ್ಯ ಗುಣಕ್ಕೆ ಪರವಶರಾದರು. ಇಂತಹ ಭಗವಂತನನ್ನು ಈ ಕ್ಷಣ ಅನುಭವಿಸಬೇಕೆಂದು ತ್ವರೆಪಟ್ಟರು. ಅವನಿರುವ ಸ್ಥಳದವರೆಗೂ ಹೋಗಲಾರದೆ ಇದ್ದಲ್ಲಿಯೇ ನಿರ್ಭರರಾಗಿ ಅವನ ಸೌಶೀಲ್ಯಗುಣದಲ್ಲಿ ಮುಳುಗಿ ಆನಂದಿಸುವರು.

मैयार्करुंकण्णि ९. ४.

प्राप्यं वस्तु गुणाधिकं स्वयमथो भोग्यं ततस्त्वरां
प्राप्तायं शठजित्स्वकीयकरणैस्साकं, ततोऽपि त्वराम् ।
कृष्णस्य प्रबलां विचिन्त्य मुदितो धन्योऽस्मि सञ्जीवितो
दासोऽस्मि श्रितवैष्णवोपकृतिकृच्चास्मीति सोऽत्वाभ्यधात् २३७

ಆಳ್ವಾರರು ತಮಗೆ ಪ್ರಾಪ್ಯವಾದದ್ದು ಗುಣಾಧಿಕವಾದ ವಸ್ತುವೆಂತಲೂ, ಅದು ಶ್ರಿಯಃಪತಿತ್ವದಿಂದಲೇ ಅಂತಹ ಸೌಶೀಲ್ಯಾದಿ ಗುಣ ಭೂಯಿಷ್ಠವಾಗಿದೆಯೆಂದೂ, ಸ್ವತಃ ಭೋಗ್ಯಭೂತವಾದದ್ದೆಂದೂ, ಅದರ ಪ್ರಾಪ್ತಿಗೆ ತ್ವರೆಪಟ್ಟರೆ

ಇವರ ಇಂದ್ರಿಯಗಳಂತೂ ಇವರಿಗಿಂತಲೂ ಹೆಚ್ಚಾಗಿ ಆ ಭಗವಂತನನ್ನು ಸ್ವತಃ ತಾವೇ ಅನುಭವಿಸಬೇಕೆಂದು ಆಸೆಯಿಂದ ತ್ವರೆಗೊಂಡುವು. ಈ ತ್ವರೆಗಿಂತಲೂ ಮಿೞಿದ ತ್ವರೆಯಿಂದ ಕೂಡಿದ ಭಗವಂತನು "ಆಳ್ವಾರರಿಗೆ ತನ್ನ ಅನುಭವವನ್ನು ಕೊಟ್ಟ ಹೊರತು ಆಗುವುದಿಲ್ಲ"ವೆಂದು ಬಹಳ ಕಾತರನಾದನು. ಇದನ್ನು ನೋಡಿ ಆಳ್ವಾರರು ಆನಂದಿಸಿ, "ಧನ್ಯನಾದೆ; ಕೃತಕೃತ್ಯನಾದೆ; ಈಗಲೀಗ ಬದುಕಿದೆ. ನನ್ನ ಶೇಷತ್ವವು ಕೈಗೂಡಿತು. ನನ್ನನ್ನಾಶ್ರಯಿಸಿದ ಶ್ರೀವೈಷ್ಣವರಿಗೆ ಈಗಲೀಗ ಉಪಕಾರ ಮಾಡಿದಂತಾಯಿತು. ಇದೂ ಒಂದು ರೀತಿಯುಂಟೇ?" ಎಂದು ತಮ್ಮ ಆನಂದವನ್ನು ಬಣ್ಣಿಸುವರು.

इन्नुयिर्चेवलुम् ९. ५.

विश्लिष्टा पुरुषोत्तमेन तरुणी काचित्स भूत्वा तदो-
द्याने पक्षिगणान्विलोक्य विरुतं तेषां तदा शृण्वती ।
मां हन्तुं भवतां कुतोऽयमतुलो यत्नस्स एवास्ति मे
विश्लेषो नहि हन्ति हन्त जनता लोके हतं केनचित् ॥२३८॥

इत्युक्त्वा चिन्तयित्वाथ निर्णयं समपद्यत ।
असद्विचारो दुःखाय तद्विचारस्सुखाय हि ॥२३९॥

ಭಗವಂತನು ಸ್ಪಷ್ಟವಾಗಿ ತನ್ನ ಸೇವೆಯನ್ನು ಕೊಟ್ಟುದೇ ಬಾಹ್ಯಸಂಶ್ಲೇಷಾಪೇಕ್ಷೆಗೆ ಕಾರಣವಾಯಿತು. ಇನ್ನೂ ಇವರ ಆಸೆಯನ್ನು ಹೆಚ್ಚಿಸಿ ಆಮೇಲೆ ಸಂಶ್ಲೇಷಿಸಬೇಕೆಂದು ಭಗವಂತನು ತತ್ಕ್ಷಣ ಇವರಾಸೆಯನ್ನು ನಡೆಸಲಿಲ್ಲ. ನೆನೆಸಿದ ಕ್ಷಣದಲ್ಲೇ ಅವನ ಸಂಶ್ಲೇಷ ದೊರಕದೆ ವಿರಹಿಣಿಯಾದ ನಾಯಕಿಯಾದರು. "ಅವನ ಹೋಲಿಕೆಯುಳ್ಳ ಯಾವುದನ್ನಾದರೂ ನೋಡಿ ಜೀವವನ್ನು ಹಿಡಿದಿರೋಣ"ವೆಂದೂ ತೀರ್ಮಾನಿಸಿದರು. ಅವು ಅವನ ನೆನಪನ್ನು ತಂದು ಕೊಟ್ಟು ಮತ್ತೂ ಹಿಂಸಿಸತೊಡಗಿದುವು. ವಿಶ್ಲೇಷವ್ಯಸನವೇ ಈ ನಾಯಕಿಗೆ ಹಸ್ತಲಾಘವ ಕೊಟ್ಟು ಉದ್ಯಾನದ ಬಳಿಗೊಯ್ಯಿತು. ಅಲ್ಲಿರುವ ಪಕ್ಷಿಗಳನ್ನು

ನೋಡಿದಳು. ಅವುಗಳ ಕೂಗನ್ನು ಕೇಳಿದರು. ಭಗವಂತನ ದಿವ್ಯಮಂಗಳ ವಿಗ್ರಹ, ಅವನ ಮಾತು ಜ್ಞಾಪಕಕ್ಕೆ ಬಂತು. "ನನಗೂ ನಿಮಗೂ ಯಾವ ವಿಧವಾದ ಶತ್ರುತ್ವವೂ ಇಲ್ಲವಲ್ಲಾ! ನೀವೇಕೆ ನನ್ನನ್ನು ಹಿಂಸಿಸುವಿರಿ?" ಎಂದಳು. ಆದರೂ ಅವು ಉತ್ತರ ಕೊಡಲಿಲ್ಲ. ಆಗ ಇವಳು "ಓಹೋ! ತಿಳಿಯಿತು. ನನ್ನನ್ನು ಸಾಯಿಸಬೇಕೆಂದು ನನ್ನಲ್ಲಿ ಕಲೆತಿದ್ದು, ತನ್ನ ವಿರಹ ವನ್ನುಂಟುಮಾಡಿದ. ಅದಕ್ಕೂ ಸಾಯಲಿಲ್ಲ. ಈಗ ತನ್ನನ್ನು ಹೋಲುವ ಪದಾರ್ಥಗಳನ್ನು ತೋರಿಸಿ ನನ್ನನ್ನು ಕೊಲೆ ಮಾಡಬೇಕೆಂದಿರುವನು. ನಿಮಗೆ ಈ ಉದ್ದೇಶವಿರುವ ಪಕ್ಷಕ್ಕೆ ಇಷ್ಟೇಕೆ ಕಷ್ಟಪಡುವಿರಿ? ಇಗೋ! ನನ್ನ ಕಥೆ ಮುಗಿಯಿತು." ಎನ್ನುವಳು. ನಮ್ಮ ವಿಚಾರದಿಂದ ದುಃಖವೇ ಹೊರತು ಮತ್ತೇನಿಲ್ಲ. ಅವನ ವಿಚಾರದಿಂದ ಸುಖವೇ ಹೊರತು ದುಃಖದ ಗೋಜೇ ಇಲ್ಲವೆಂದು ತೀರ್ಮಾನಿಸಿಕೊಂಡರು.

उरुहुमाल् ९. ६.

विश्लेषव्यसनात्पराङ्कुशमुनौ मृत्युप्रतीक्षे तदा
भाग्यादस्य मुनेरुताश्रितनिधेर्विष्णोरुतास्मावशाम् ।
सस्मार प्रथमानुभूतमतुलं भोगं हरेरक्रमं
तेनाप्यस्य सुशीलतामनुभवन्दध्रे मुदा जीवितम् ॥२४०॥

ಈ ರೀತಿ ಆಳ್ವಾರರು ಮಿತಿಮೀರಿದ ವಿಶ್ಲೇಷವ್ಯಸನದಿಂದ ಮೃತ್ಯುವನ್ನೆದುರು ನೋಡುತ್ತಿರಲು, ಏನೂ ಕಾರಣವನ್ನೇ ಊಹಿಸಲಾಗದಂತೆ ಇದ್ದಕ್ಕಿದ್ದಂತೆಯೇ ಇರುತ್ತಿಂಪಿಯುಂಡು ೮. ೭. ದಶಕದಲ್ಲಿಯ ಅನುಭವವು ನೆನಪಿಗೆ ಬಂದು ಜೀವ ಉಳಿಯಿತು. ಇದು ಆಳ್ವಾರರ ಅದೃಷ್ಟವೆನ್ನೋಣವೆ? ಭಗವಂತನ ಅದೃಷ್ಟವೆನ್ನೋಣವೆ? ಅಥವಾ ನಮ್ಮಂತಹವರ ಭಾಗ್ಯೋದಯವೆನ್ನೋಣವೆ? ಈ ರೀತಿ ಪೂರ್ವಾನುಭವವನ್ನು ನೆನೆನೆನೆದು, ಅವನ ಸೌಶೀಲ್ಯ ಗುಣವನ್ನು ಅನುಭವಿಸುತ್ತಾ ಸಂತೋಷದಿಂದ ಪ್ರಾಣವನ್ನು ಧರಿಸಿದರು.

एन्कानलंकाळिवाय् ९. ७.

सन्तोषेऽपि गुणस्मृतेर्भगवतः प्राप्तेरलाभान्मुनिः
क्लिश्यन्कापि वियोगिनी पतिपरा भूत्वा वने प्रान्तगे ।
स्थित्वा पक्षिगणान्व्यसर्जयदयं दूत्येन तत्सन्निधिं
को वा जीवति ते वपुर्गुणगणान्हित्वेति सन्दिश्य सः ॥२४१॥

अपराधसहत्वदर्शनादथ चार्ते परिहारदर्शनात् ।
अथ चाश्रितसामरस्यतो वपुषो भोग्यतया गुणस्य च ॥२४२॥

दूतप्रेषणमकरोच्चतुरो वारान्क्रमेणायम् ।
व्यूहे विभवे परयोरर्चायां चेति च क्रमशः ॥२४३॥

ಆಳ್ವಾರರು ಭಗವಂತನ ಗುಣ ಸ್ಮರಣದಿಂದ ಸಂತೋಷವಿದ್ದರೂ, ಬಾಹ್ಯಾನುಭವವಿಲ್ಲದೆ ಬಹಳ ಕ್ಲೇಶಗೊಂಡು ವಿರಹಿಣಿಯಾದರು. ವಿಶ್ಲೇಷ ವ್ಯಸನವೇ ಕೈಗೊಟ್ಟು ಊರ ಹೊರದೋಟಕ್ಕೆ ತಂದು ನಿಲ್ಲಿಸಿತು. ಆಗ ಅಲ್ಲಿರುವ ಪಕ್ಷಿಗಳನ್ನು ನೋಡಿ, "ನಿನ್ನ ದಿವ್ಯಮಂಗಳವಿಗ್ರಹ, ಗುಣಗಳು ಇವನ್ನು ಅನುಭವಿಸಿದವನು ನಿನ್ನನ್ನು ಅಗಲಿ ಬದುಕುವನೇ? ಎಂದು ಕೇಳಿರಿ." ಎಂದು ಭಗವಂತನಿಗೆ ದೂತ ಪ್ರೇಷಣೆ ಮಾಡುವರು. ಅಂಜಿರೈಯ ೧. ೪. ವೈಹಲ್ ೬. ೧. ಪೊನ್ನುಲಹು ೬. ೮. ಎನ್ಕಾನಲಂ ೯. ೭. ಈ ದಶಕಗಳಲ್ಲಿ, ವ್ಯೂಹ, ವಿಭವ, ಪರ, ಅರ್ಚೆ ಈ ನಾಲ್ಕು ಅವತಾರಗಳಲ್ಲೂ ಕ್ರಮವಾಗಿ ದೂತಪ್ರೇಷಣ ಮಾಡಿ, ಅವನ ಅಪರಾಧ ಸಹತ್ವ, ಆರ್ತ ರಕ್ಷಕತ್ವ, ಆಶ್ರಿತರೊಡನೊಂದಾಗಿರುವಿಕೆ, ದಿವ್ಯಮಂಗಳವಿಗ್ರಹ ಮತ್ತು ಭೋಗ್ಯತೆ ಇವುಗಳನ್ನು ಕೊಂಡಾಡಿದರು.

अरुक्कुंविनै ९. ८.

दूतानां प्रेषणात्तद्गुणगणगणनाच्चित्तनैर्मल्यतोऽपि
श्रीमानागत्य नेता स्थलमभिमतमित्यध्यवस्याथ सूरिः ।

देशं तं प्राप्नुयां किं तदपि मम कदा किं नु पश्येयमेनं
किं वाकुर्यामिति विविधमनस्स्यन्दनान्प्रैरयत्सः ॥२४४॥
प्रति संदिश्य सीता तं मारुतिं भर्तुरन्तिकम् ।
तदागमनपर्यन्तं यादृशी तादृशो ह्ययम् ॥२४५॥

द्वयनिष्ठस्य रुच्यान्तु प्रबलायां मनोरथाः ।
विलम्बकारणाभावादवलम्बा न चान्यथा ॥२४६॥

ದೂತ ಪ್ರೇಷಣದಿಂದಲೂ, ಅವನ ಕಲ್ಯಾಣಗುಣಗಳನ್ನು ಭಾವಿಸುವುದರಿಂದಲೂ, ಮನಃ ಪ್ರಸಾದದಿಂದಲೂ ಕೂಡ, ಆಳ್ವಾರರು "ಶ್ರಿಯಃಪತಿಯಾದ ಭಗವಂತನು ಅವನಿಗೆ ಇಷ್ಟವಾದ 'ತಿರುನಾವಾಯ್' ದಿವ್ಯದೇಶಕ್ಕೆ ನನ್ನನ್ನು ತಾನೇ ಕರೆದೊಯ್ಯುವನು" ಎಂದು ನಿಶ್ಚಯಿಸಿಕೊಂಡರು. ಆದರೆ ಅವನು ತಾನಾಗಿ ಕರೆದೊಯ್ಯುವವರೆಗೂ ತಾಳಲಾರದೆ, "ನಾನು 'ತಿರುನಾವಾಯ್'ಗೆ ಹೋಗಿ ಸೇರುವೆನೆ? ಯಾವಾಗ ಹೋಗುವೆನೋ? ಅಲ್ಲಿಯ ಭಗವಂತನನ್ನು ನೋಡುವೆನೆ? ಅವನಿಗೆ ಸರ್ವವಿಧ ಕೈಂಕರ್ಯಗಳನ್ನೂ ಮಾಡುವೆನೆ? ಇತ್ಯಾದಿ ಮನೋರಥಗಳಿಂದ ಜೀವವನ್ನು ಧರಿಸಿದ್ದರು. ಸೀತಾದೇವಿಯು ಶ್ರೀರಾಮನ ಹತ್ತಿರಕ್ಕೆ ಆಂಜನೇಯನನ್ನು ಕಳುಹಿಸಿದ ಮೇಲೆ ಶ್ರೀರಾಮನು ಬಂದು ರಾವಣವಧಮಾಡಿ ಸಂಶ್ಲೇಷಿಸುವವರೆಗೂ ಧರಿಸಿದ್ದಂತೆ ಇವರೂ ಮನೋರಥಗಳನ್ನು ಭಾವಿಸುತ್ತಾ ಧರಿಸಿದ್ದರು.

ದ್ವಯಾರ್ಥನಿಷ್ಠನಿಗೆ (ಪ್ರಪನ್ನನಿಗೆ) ಫಲಪ್ರಾಪ್ತಿಗೆ ವಿಲಂಬವಾಗಲು ಕಾರಣವಿಲ್ಲ. ಅದರಲ್ಲೂ ಪ್ರಾಪ್ಯರುಚಿ ಪ್ರಬಲವಾಗಿರುವಾಗ ಹೇಳಬೇಕಾದುದೇ ಇಲ್ಲ. ಆದರೆ ಪ್ರಾಪ್ತಿಪರ್ಯಂತವೂ ಮನೋರಥಗಳು ಇವನನ್ನು ಹಿಡಿದು ನಿಲ್ಲಿಸಿರುತ್ತವೆ. ಮಾತ್ತೆ ಸಾವಕಾಶದಿಂದಲ್ಲ.

मल्लिहैकमल् ९. ९.

पत्या भोगाय गत्वा वनमथ रहिता तेन लङ्कावनस्था
रक्षोभिर्बाध्यमाना जनकतनुभवा यादृशं दुःखमाप्ता ।

अप्राप्यैवं सकृष्णानुभवमथ बहिर्बाध्यमानः पदार्थै-
र्गोप्यस्सन्ध्यावियोगव्यसनमिव भजन्नुच्चकैः क्रोशतीह २४७

"ಅತ್ತೆ ಮಾವಂದಿರ ನಿರ್ಬಂಧವಿಲ್ಲದಂತೆ ತನ್ನ ಇಷ್ಟಾನುಸಾರ ಶ್ರೀರಾಮ ಚಂದ್ರನನ್ನು ಚೆನ್ನಾಗಿ ಅನುಭವಿಸಬಹುದು" ಎಂಬ ಆಸೆಯಿಂದ ಅವನ ಜೊತೆಯಲ್ಲಿ ಕಾಡಿಗೆ ಹೋದ ಸೀತಾದೇವಿಯು, ಶ್ರೀರಾಮನನ್ನಗಲಿ ಲಂಕೆಯಲ್ಲಿ ಅಶೋಕವನದಲ್ಲಿದ್ದು ರಾಕ್ಷಸಿಗಳಿಂದ ಹಿಂಸಿಸಲ್ಪಟ್ಟು ಯಾವರೀತಿ ಕಷ್ಟಪಟ್ಟಳೋ.- ಅದೇರೀತಿ ಆಳ್ವಾರರೂ ತಾವು ಭಾವಿಸಿದ ಕೃಷ್ಣಾನುಭವವು ದೊರಕದೆ ಬಾಹ್ಯಪದಾರ್ಥಗಳಿಂದ ಹಿಂಸಿಸಲ್ಪಟ್ಟು, ಹೋ! ಎಂದು ಗೋಳಿಡುವರು.

ಶ್ರೀಕೃಷ್ಣನು ದನಕಾಯಲು ಕಾಡಿಗೆ ಹೋಗಿದ್ದು, ಊರಿಗೆ ಬರಲು ಸ್ವಲ್ಪ ತಡವಾದಾಗ ಆ ಸಂಧ್ಯಾಕಾಲದಲ್ಲಿ ಗೋಕುಲದ ಗೋಪಿಯರೆಲ್ಲಾ ಯಾವ ವ್ಯಸನವನ್ನನುಭವಿಸಿದರೋ, ಅಷ್ಟನ್ನೂ ಇವರೊಬ್ಬರೇ ಈ ದಶಕದಲ್ಲಿ ಅನುಭವಿಸುವರು.

मालैनण्णि ९. १०.

अप्राप्य स्वमनोरथं शठरिपौ क्लिश्यत्यतीवादरात्
विष्णुः प्राह फलं ददाम्यभिमतं देहावसाने तव।
इत्येवं श्रुतवान्पराङ्कुशमुनिर्हृष्टोऽभवत्तत्क्षणे
रामो द्विर्न हि भाषते वच इदं विश्वस्य नैर्भर्यतः ॥२४८॥

ಆಳ್ವಾರರು ತಾವು ಅಪೇಕ್ಷಿಸಿದಂತೆ ಫಲ ದೊರಕದಿರಲು, ಬಹಳ ಕ್ಲೇಶಪಟ್ಟರು. ಇದನ್ನು ನೋಡಿ ಭಗವಂತನು "ಆಳ್ವಾರರೇ! ಆಸೆಪಡುವುದೂ ಫಲ ಲಭಿಸದೆ ಕ್ಲೇಶ ಪಡುವುದೂ ನಿಮಗೆ ತರವಲ್ಲ. ನಿಮ್ಮನ್ನು ಲಭಿಸಲು ಆಸೆ ಪಡುವವನೂ, ನಿಮ್ಮನ್ನು ಲಭಿಸದಿದ್ದರೆ ಕ್ಲೇಶಪಡುವವನೂ ನಾನಲ್ಲವೆ? ನಿಮಗೇನೂ ಕೊರತೆಯಿಲ್ಲ. ನಿಮಗಾಗಿ 'ತಿರುಕ್ಕಣ್ಣಪುರ'ಕ್ಕೆ ಪರಮಪದದಿಂದ ಬಂದು ನೆಲೆಸಿದೇನೆ. ನಿಮ್ಮ ಶರೀರಾವಸಾನದಲ್ಲಿ ನಿಮ್ಮಿಷ್ಟವನ್ನು ಪೂರೈಸಿ ಕೊಡುತ್ತೇನೆ." ಎಂದ. ಈ ಮಾತು ಕೇಳಿ "ಆಹಾ! 'ರಾಮೋ

ದ್ವಿರ್ನಾಭಿಭಾಷತೇ' ಭಗವಂತನು ಎರಡಾಡುವವನಲ್ಲ." ಎಂದು ಅವನ ಮಾತಿನಲ್ಲಿ ವಿಶ್ವಾಸದಿಂದ ಸರ್ವ ಭರವನ್ನೂ ಅವನಲ್ಲೇ ಹಾಕಿ ಆ ಕ್ಷಣದಲ್ಲೇ ಆನಂದಿತರಾದರು.

ताळतामरै १०. १.

एतद्देहावसाने परमपदमहं दास्य इत्येवमुक्तो
देवेनाथं शठारिस्सकलविदमथो सर्वशक्तिं मुरारिम् ।
स्त्वं नेतुं मोहपुर्यां कृतवसतिममुं कालमेघं प्रपन्नो
मार्गे ह्यज्ञातपूर्वे श्रुतिशतकथिते साह्यमाकांक्षमाणः ॥२४९॥

ಭಗವಂತನು "ಆಳ್ವಾರರೇ! ಈ ಶರೀರಾವಸಾನದಲ್ಲಿ ನಿಮಗೆ ಮೋಕ್ಷ ಕೊಡುವೆನು" ಎಂದಾಗ, ಇವರು, "ಅಯ್ಯಾ! ಮುರಾರಿ! ನೀನು ಸರ್ವಜ್ಞ, ಸರ್ವಶಕ್ತ, ನಾನು ಅಜ್ಞ; ನಿನ್ನ ಪರಮಪದಕ್ಕೆ ನನಗೆ ದಾರಿ ಗೊತ್ತಿಲ್ಲ. ಶ್ರುತಿಗಳಲ್ಲಿ ಕೇಳಿ ಬಲ್ಲೆ. ಆದುದರಿಂದ ನೀನೇ ನನಗೆ ಸಹಾಯಕನಾಗಿದ್ದು ದಾರಿ ತೋರಿಸಯ್ಯಾ!" ಎಂದರು. ಆಗ ಭಗವಂತನು "ಆಳ್ವಾರರೇ! ಇಗೋ! ನಿಮ್ಮನ್ನು ಕರೆದೊಯ್ಯಲು 'ತಿರುಮೋಹೂರ್' ನಲ್ಲಿ ಕಾದು ನಿಂತಿದೇನೆ" ಎಂದ. ಆಗ ಅಲ್ಲಿಯ ಕಾಳಮೇಘನೆಂಬ ಭಗವಂತನನ್ನು ಶರಣ ಹೊಂದುವರು.

केडुमिडरायवेल्लाम् १०. २.

जनयति रुचिन्त्वर्चारूपो हरिर्बहुधा स्वयं
भवति च सदोपायस्साध्यं फलञ्च जगत्पतिः ।
वितरति सदा सेवां जन्तोर्जडस्य च तज्जनाः
सरत सपदि श्रीमद्भोगीन्द्रशायिपुरं मुदा ॥२५०॥

उपादिशद्द्वितीयेऽस्मिन्दशके दशमे शते ।
शठारिरुपसंप्राप्तप्राप्तिरित्थं दयानिधिः ॥२५१॥

ಈ ಆಳ್ವಾರರು ತಾವು ಪರಮಪದಕ್ಕೆ ತೆರಳುವಕಾಲ ಸಮೀಪಿಸುತ್ತಿರುವಾಗ ದಾರಿ ತೋರಿಸಲು ಕಾಳಮೇಘನನ್ನು ಸಹಾಯವಾಗಿ ಕೋರಿ ಶರಣ ಹೊಂದಿದರು. ಆದರೆ "ಅರ್ಚಾ ರೂಪದಲ್ಲೇ ನಾನಾವಿಧದಲ್ಲೂ ರುಚಿಯನ್ನುಂಟು ಮಾಡುತ್ತಾ, ತಾನೇ ಸಿದ್ಧೋಪಾಯವೂ ಫಲವೂ ಆಗಿರುವ ಲೋಕೇಶನಾದ ಭಗವಂತನು ಜಡಜಂತುಗಳಿಗೂ ಸದಾ ಸೇವೆಯನ್ನು ಕೊಡುತ್ತಾ, ತಿರುವನಂತಪುರ (ಅನಂತಶಯನ) ದಲ್ಲಿ ನೆಲೆಸಿರುವನು. ಅದೇ ಪ್ರಾಪ್ಯ ಭೂಮಿ; ಪ್ರಾಪ್ಯನೂ ಅವನೇ; ಆದುದರಿಂದ ಒಡನೆಯೇ ಅಲ್ಲಿಗೆ ತೆರಳಿರಿ." ಎಂದು ತಮಗೆ ಪ್ರಾಪ್ತಿ ಸನ್ನಿಹಿತವಾಗಿರುವಾಗಲೂ ದಯೆಯಿಂದ ಪರೋಪದೇಶ ಮಾಡುತ್ತಾರೆ.

वेय्मरुतोळिणै १०. ३.

चिरकालवियोगवासनाबलतश्शिलष्टतनुं बलानुजम् ।
वनमेव गतं विचिन्त्य गोभिर्व्यथिता कापि हि गोपकन्यका ॥२५२॥

विरहव्यसनं सखीमिव स्वां दयितं प्रत्यवदद्यदन्धचित्ता ।
अनुकृत्य तदेव कारिसूनुः कथयत्यत्र विचित्रहार्दभावः ॥२५३॥

प्राप्यनिष्कर्षनिष्कर्षः क्रियते दशकेऽत्र तु ।
व्यावृत्तिरचितः पूर्वमत्राचिद्र्तपरार्थता ॥२५४॥

ಅನಂತಶಯನಕ್ಕೆ ಹೋಗಿ ಅಲ್ಲಿ ಭಗವತ್ಕೈಂಕರ್ಯವನ್ನು ಮಾಡಬೇಕೆಂದು ಭಾವಿಸಿವರು. ಅದು ಆಗಲೇ ಲಭಿಸಲಿಲ್ಲ. ಆಗ ಬಹಳ ಕಾಲದಿಂದಲೂ ವಿಯುಕ್ತರಾಗಿದ್ದ ಸಂಸ್ಕಾರದಿಂಡಲೂ ಅನಾದಿಯಾದ ಅಚಿತ್ಸಂಬಂಧಕ್ಕೂ ಮತ್ತು ಭಗವಂತನ ಸ್ವಾತಂತ್ರ್ಯಕ್ಕೂ ಹೆದರಿ, ಭಾವನಾವಿಶೇಷದಿಂದ ನಾಯಕನೊಡನೆ ಕಲೆತಿದ್ದು ಬಹುದಿನಗಳಿಂದಲೂ ವಿಯೋಗವನ್ನನುಭವಿಸುತ್ತಿರುವ

ಕಾಂತೆಯಾದರು. "ಇವನು ಮೊದಲು ನನ್ನನ್ನಗಲಿ ಹೋಗಿದ್ದ ಪ್ರಭಾತ ಕಾಲ ಪ್ರಾಪ್ತವಾಯಿತು. ಪಕ್ಷಿಗಳೆಲ್ಲಾ ಇಂಪಾದ ಧ್ವನಿ ಗೈಯ್ಯುವುವು. ತುರುಕರುಗಳೆಲ್ಲಾ ಕಾಡಿಗೆ ತೆರಳುತ್ತಿವೆ" ಎಂಬ ಸನ್ನಿವೇಶವನ್ನು ಭಾವಿಸುತ್ತಾ 'ಶ್ರೀಕೃಷ್ಣನು ತನ್ನನ್ನಾಲಿಂಗಿಸಿದ್ದರೂ, ತನ್ನನ್ನಗಲಿ ಕಾಡಿಗೆ ಹೊರಟೇ ಹೋದ; ಇವನು ಹೋದರೆ ಪುನಃ ಬರಲಾರ'ನೆಂದು ಭಾವಿಸಿ, "ನೀನು ಹಸು ಮೇಯಿಸಲು ಹೋಗಬೇಡ. ನಿನ್ನ ವಿಶ್ಲೇಷದಿಂದುಂಟಾದ ನನ್ನ ವ್ಯಸನತೀರುವಂತೆ ನಿನ್ನ ಕೈಯನ್ನು ನನ್ನ ತಲೆಯ ಮೇಲಾಡಿಸು. ಕಾಡಿಗೆ ಹೋದರೆ ಅಪಾಯ ವೊದಗೀತು. ಬೇಡ" ವೆಂದು ವಿಯುಕ್ತೆಯಾದ ಗೋಪಿಯನ್ನನುಕರಿಸಿ ಹೇಳುವರು. ಇಲ್ಲಿಯ ಇವರ ಮನೋಭಾವ ಬಹಳ ವಿಚಿತ್ರವಾದುದು. ಇದುವರೆಗೂ ತನ್ನ ಅಗಲಿಕೆಯ ಕ್ಲೇಶವನ್ನು ಸಖಿಗೆ ಹೇಳುತ್ತಿದ್ದವಳು ಈಗ ತನ್ನನ್ನಾಲಿಂಗಿಸಿರುವ ನಾಯಕನನ್ನೇ ಕುರಿತು ಹೇಳುತ್ತಿರುವಳು. ಕಾಮಿಗಳಿಗೆ ಕಣ್ಣೊಂದಿಗೆ ಮನಸ್ಸೂ ಕುರುಡಲ್ಲವೆ?

'ಎಮ್ಮಾವೀಡು' ಎಂಬ ೨-೮ ನೇ ದಶಕದಲ್ಲಿ ಪ್ರಾಪ್ಯ ನಿಷ್ಕರ್ಷವನ್ನು ಮಾಡಿ, ಅಚೇತನಕ್ಕೂ ಚೇತನಕ್ಕೂ ಇರಬೇಕಾದ ವ್ಯತ್ಯಾಸವನ್ನು ತಿಳಿಸಿದರು. ಇಲ್ಲಿ ಅಚೇತನದಂತೆ ಜೀವಾತ್ಮನು ಪರಾರ್ಥವಾಗಿಯೇ ಇರಬೇಕೆಂ'ದು ಪ್ರಾಪ್ಯ ನಿಷ್ಕರ್ಷದಲ್ಲೂ ನಿಷ್ಕೃಷ್ಟವಾದ ಅಂಶವನ್ನು ತಿಳಿಸುವರು.

शावेतवनेरि १०. ४.

सर्वाद्ये दशके परत्वमुदितं प्राप्यत्वसंसिद्धये
प्राप्योपायतया तु शास्त्रविहिता भक्तिः प्रपत्तिस्तथा ।
अत्रास्मिन्दशके प्रपत्तिरुदिता स्वार्थेन सम्पूरिता
भक्तिश्चोत्तरभाविना च दशकेनेत्याह तादृग्विधा ॥२५५॥

ಈ ರೀತಿ ನಾಯಕನನ್ನು ಕುರಿತು "ನೀನು ಕಾಡಿಗೆ ಹೋಗಬೇಡ; ನಿನ್ನನ್ನಗಲಿರಲಾರೆ." ಎನಲು, ನಾಯಕನು "ಕಾಂತೇ! ನಿನ್ನನ್ನಗಲುವುದಿಲ್ಲ" ವೆಂದು ಭರವಸೆ ಕೊಟ್ಟ. ಆಗ ಸಮಾಹಿತರಾಗಿ ಆನಂದಿತರಾದರು.

ಈಗ ಉಯರ್ವರ ೧. ೧. ರಲ್ಲಿ ಭಗವಂತನ ಪರತ್ವವನ್ನು ಹೇಳಿ, ಅವನೇ ಪ್ರಾಪ್ಯನೆಂದೂ, ಆ ಪ್ರಾಪ್ಯವಸ್ತು ಕೈಗೂಡಲು ಭಕ್ತಿ ಪ್ರಪತ್ತಿಗಳು ಉಪಾಯವೆಂದೂ, ಆ ಭಕ್ತಿ ತ್ರೈವರ್ಣಿಕಾಧಿಕಾರವೆಂದೂ, ಪ್ರಪತ್ತಿ ಸರ್ವಾಧಿಕಾರವೆಂದೂ ತಿಳಿಸಿ, ವೀಡುಮಿರ್ಮುತ್ತವುಂ ೧. ೨. ಪತ್ತುಡೈ ೧. ೩. ರಲ್ಲಿ ತಾವು ಆರಂಭದಲ್ಲಿ ತಿಳಿಸಿದ ಭಕ್ತಿ ಪ್ರಪತ್ತಿಗಳು ಫಲದೊಂದಿಗೆ ಹೊಂದಿಕೊಂಡಿವೆಯೆಂಬ ಅಂಶವನ್ನು ಶಾರ್ವೇತವನೆರಿ ೧೦. ೪. ಮತ್ತು ಕಣ್ಣರ್ಕಳಲಿಣೈ ೧೦.೫. ಈ ಎರಡರಲ್ಲೂ ನಿಗಮಿಸಿ ಅಪ್ಪಣೆ ಕೊಡಿಸುವರು. ಈ ದಶಕದಲ್ಲಿ ಪ್ರಪತ್ತಿಯನ್ನೂ ಮುಂದಿನದರಲ್ಲಿ ಭಕ್ತಿಯನ್ನೂ ನಿರೂಪಿಸುವರು.

கண்ணன்கழலிணை ௧௦. ௫.

भक्तेरालम्बनं तन्मनुमुपदिशतापुष्पपानीयधूपै-
स्तस्यार्चां नामगानं कुरुत सरत तत्पादयोस्सन्निधानम् ।
इत्थं संदिश्य सर्वान्शठरिपुमुनिना स्वोपदेशः पुपूरे
सञ्ज्ञासन्नयात्रेण तु सुकरुणया वीक्ष्य तेषामनर्थम् ॥२५६॥

ಆಳ್ವಾರರು ತಮ್ಮ ಪರಮಪದ ಪ್ರಯಾಣ ಸನ್ನಿಹಿತವಾಗಲು– ಜನಗಳ ಕಷ್ಟಗಳನ್ನು ನೋಡಿ ಸಹಿಸಲಾರದೆ ಪರಮಕೃಪೆಯಿಂದ ಪರೋಪದೇಶ ಮಾಡುತ್ತಾರೆ. ಭಕ್ತಿಯು ಭಗವಂತನ ಪ್ರಾಪ್ತಿಗೆ ಉಪಾಯವೆಂದೂ, ಆ ಭಕ್ತಿಗೆ ಆಲಂಬನವಸ್ತು ನಾರಾಯಣನೆಂದೂ, ಅನುಸಂಧಾನ ಮಾಡಬೇಕಾದ ಮಂತ್ರವಿದೆಂದೂ, ಇದರ ಅರ್ಥಾನುಸಂಧಾನವೇ ಮೋಕ್ಷಸಾಧನವೆಂದೂ ಹೇಳಿದರು. "ಈ ರೀತಿ ಭಕ್ತಿಯನ್ನು ಮಾಡಿ, ತ್ರಿಕರಣಗಳಿಂದಲೂ ಅವನನ್ನಾಶ್ರಯಿಸಿರಿ. ಅವನು ಸುಲಭ. ಲಕ್ಷ್ಮೀವಲ್ಲಭನಾದ್ದರಿಂದ ಸುಖಾರಾಧ್ಯ. ಆಸೆಯಿದ್ದರೆ ಸಾಕು. ಅದೇ ಅವನನ್ನಾಶ್ರಯಿಸಲು ಅಧಿಕಾರ. ಆರಾಧನೆಗೆ ಹೂವು, ನೀರು, ಧೂಪ, ಇವುಗಳೇ ಸಾಕು. ಅವನ ನಾಮ ಸಂಕೀರ್ತನ ಮಾಡಿರಿ. ಎಲ್ಲಾ ವಿರೋಧಿಗಳೂ ತಮ್ಮಷ್ಟಕ್ಕೆ ತಾವೇ ತೊಲಗುವುವು." ಎಂದು ತಮ್ಮ ಪರೋಪದೇಶವನ್ನು ಮುಕ್ತಾಯಗೊಳಿಸುವರು.

अरुळ्पेरुवार् १०. ६.

आरभ्याद्यात्प्रबन्धादिदमवधि शठारातिरूचेऽनुवृत्तिम्
श्रीशस्य स्वेन क्लृप्तां, तदनु हरिकृतां स्वानुवृत्तिं ब्रवीति ।
सर्वेशोऽप्यस्मदिच्छामनुविदधदसौ नेतुकामोत्र वाट्टार्-
क्षेत्रे तद्दास्यदास्यं मदधिककुतुकः पश्य चित्तेत्यवोचत् ॥२५७॥

एतत्पूर्वं पारतन्त्र्यं स्वकीयं स्वेन त्यक्तं त्याजितं तेन चाद्य ।
सर्वेशोऽभूत्पूर्वमद्याश्रितानामायत्तोऽभूत्सोऽपि मायाधवोऽपि ॥२५८॥

ಆಳ್ವಾರರು "ಪೊಯ್ ನಿನ್ನ ಞಾನಂ" ಎಂಬ ತಮ್ಮ ಮೊದಲ ಪ್ರಬಂಧದಿಂದ ಇದುವರೆಗೂ ತಾವು ಭಗವಂತನನ್ನು ಅನುವರ್ತನೆ ಮಾಡಿದ ಕ್ರಮಗಳನ್ನೆಲ್ಲಾ ಹೇಳಿದರು. ಈಗ ಭಗವಂತನು ತಮ್ಮನ್ನೇ ಅನುವರ್ತನ ಮಾಡುತ್ತಿರುವುದನ್ನು ಹೇಳುವರು. "ನನ್ನ ಆಸೆಗಿಂತಲೂ ಅವನ ಆಸೆ ಬಹಳ ಹಿರಿದು. ನನ್ನ ಇಷ್ಟವನ್ನೆಲ್ಲಾ ನಡೆಸಿಕೊಡಲು 'ತಿರುವಾಟ್ಟಾರ್' ಎಂಬ ದಿವ್ಯದೇಶದಲ್ಲಿ ಸಾನ್ನಿಧ್ಯ ಮಾಡಿರುವನು. ಪರಾತ್ಪರವಾದ ವಸ್ತು ಎಷ್ಟು ಸುಲಭನಾಗಿ ಬಿಟ್ಟ. ಬಲ್ಲೆಯಾ? ಲಭಿಸಿದ ಪುರುಷಾರ್ಥ ಎಷ್ಟು ಮಹತ್ತಾದುದು! ನಮ್ಮ ಕೆಲಸ ಕೈಗೂಡಿತಲ್ಲವೆ?" ಎಂದು ತಮ್ಮ ಮನಸ್ಸಿಗೆ ಹೇಳುವರು. ಇದುವರೆಗೂ ಶೇಷತ್ವಕಾಷ್ಠೆಯಿಂದ ತಮ್ಮ ಪಾರತಂತ್ರ್ಯವನ್ನು ತಾವೇ ಬಿಟ್ಟಿದ್ದರು. ಈಗ ಭಗವಂತನು ಇವರ ಪಾರತಂತ್ರ್ಯವನ್ನು ಬಿಡಿಸಿರುವನು. ಇದುವರೆಗೂ ಸರ್ವೇಶ್ವರನು— ಸರ್ವ ಸ್ವತಂತ್ರ; ಸರ್ವ ನಿಯಾಮಕನೆಂದಿದ್ದರು. ಈಗ ಅವನು ಆಶ್ರಿತ ಪರತಂತ್ರನೆಂದೇ ಎಣಿಸಿರುವರು.

शेङ्गोल्कविहाळ् १०. ७.

गाथासहस्रकथनं कपटं विधाय
मां प्राप्य देहमपि मे बुभुजे सुभोग्यम् ।

मोहात्सदेहमपि मां यदि नेष्यतेऽसौ
संसार एव भविता मम सर्वदापि ॥२५९॥
तस्मादमुष्य चरणौ शरणं प्रपद्य
देहाभिमानमदसीयमपाहरिष्ये ।
इत्थं विचिन्त्य मुनिरेष तथैव कृत्वा
शीलेऽस्य मालगत सूरय इत्यवोचत् । ॥२६०॥

"ಭಗವಂತನು ನನ್ನಿಂದ ತಿರುವಾಯ್‌ಮೊಳಿ ಪ್ರಬಂಧವನ್ನು ತಾನು ಕೇಳುವ ನೆಪದಿಂದ ಬಂದು, ನನ್ನನ್ನೇ ಪ್ರಾಪ್ಯನನ್ನಾಗಿ ಭಾವಿಸಿ, ನನ್ನೊಂದಿಗೆ ಚೆನ್ನಾಗಿ ಕಲೆತನು. ನಾನು ನನ್ನ ಶರೀರದಲ್ಲಿ ಆತ್ಮಾಭಿಮಾನವನ್ನು ತೊರೆದರೂ, ನನ್ನ ಆತ್ಮಕ್ಕಿಂತಲೂ ಹೆಚ್ಚಾಗಿ ಭೋಗ್ಯವಾಗಿದೆಯೆಂದು ನನ್ನ ಶರೀರದಲ್ಲಿ ಅಭಿಮಾನ ವಿಶೇಷ ಮಾಡಿರುವನು. ಇವನು ಈ ವ್ಯಾಮೋಹದಿಂದೇನಾದರೂ ನನ್ನ ಈ ಶರೀರವನ್ನು ಬಿಡಲಾರದೆ ಇದರೊಡನೆಯೇ ಮೋಕ್ಷಕ್ಕೆ ಕರೆದುಕೊಂಡು ಹೋಗಿಬಿಟ್ಟರೆ ಏನು ಮಾಡುವುದು? ಪ್ರಕೃತಿಸಂಬಂಧ ನೀಗದಿರುವ ಕಾರಣ ಅಲ್ಲಿಯೂ ಸಂಸಾರವೇ ಆದೀತು! ಆದಕಾರಣ ಇವನಿಗಿರುವ ದೇಹಾತ್ಮಾಭಿಮಾನವನ್ನು ಮೊದಲು ಹೋಗಲಾಡಿಸಬೇಕು." ಎಂದು ಯೋಚಿಸಿ, "ಸ್ವಾಮಿ! ನಿನ್ನನ್ನು ಶರಣ ಹೋಗುವೆನು. ನನ್ನ ದೇಹದಲ್ಲಿರುವ ನಿನ್ನ ಅಭಿಮಾನವನ್ನು ತೊಲಗಿಸಿ ನನ್ನ ಪ್ರಕೃತಿಬಂಧವನ್ನು ಬಿಡಿಸು." ಎಂದು ಪ್ರಾರ್ಥಿಸಿದರು. ಮತ್ತೆ "ಜನಗಳಿರಾ! ಭಗವಂತನು ಎಂತಹ ಆಶ್ರಿತ ಪರತಂತ್ರ! ನೋಡಿದಿರಾ! ಇವನ ಸೌಶೀಲ್ಯ ಗುಣದಲ್ಲಿ ಮುಳುಗಿ ನನ್ನಂತೆ ಪಾಡು ಪಡಬೇಡಿ." ಎಂದು ಪರೋಪದೇಶ ಮಾಡುವರು.

तिरुमालिरुंशोलै १०. ८.

अद्वेषप्रभृतीन्यवासिचरमाण्यन्तश्च कार्याणि मे
सर्वाण्येव निरन्तरायमकरोर्निर्हेतुकं सम्प्रति ।

एवञ्चेद्भगवन्पुरैव किमिदं कार्यं भवान्नाकरो-
त्पृष्टन्त्वेवमधोमुखं हरिममुं दृष्ट्वा मुनिर्हृष्यति ॥२६१॥

ಭಗವಂತನು ತಮ್ಮನ್ನು ಪರಮಪದಕ್ಕೆ ಕರೆದೊಯ್ಯಲು ಬಹಳ ತವಕ ಪಡುತ್ತಿರುವುದನ್ನು ನೋಡಿದರು. ಇದಕ್ಕೇನು ಕಾರಣ? ನನ್ನಲ್ಲಿ ಯಾವ ಯೋಗ್ಯತೆಯೂ ಇಲ್ಲವಲ್ಲಾ! ಎಂದು ಯೋಚಿಸಿದರು. "ಅಯ್ಯಾ! ನನ್ನಲ್ಲಿ ಯಾವ ಯೋಗ್ಯತೆಯೂ ಇಲ್ಲದೆ ಹೇಗೆ ತಾನೆ ಇಂತಹ ಫಲ ಕೊಡಲು ಹವಣಿಸುತ್ತಿರುವೆ?" ಎಂದರು. "ಆಳ್ವಾರರೇ! ತಮ್ಮಲ್ಲಿರುವ ಅದ್ವೇಷ, ಆಭಿಮುಖ್ಯಗಳೇ ಕಾರಣವಲ್ಲವೆ? ಎಂದ. "ನಿನ್ನ ನಿರ್ಹೇತುಕ ಕೃಪೆಯಿಂದಲೇ ಈ ಅದ್ವೇಷಾದಿಗಳನ್ನು ನೀನೇ ಕೊಟ್ಟೆಯಲ್ಲವೆ? ಇಷ್ಟು ದಿವಸವೂ ಸಾವಕಾಶ ಮಾಡಿದುದೇಕೆ? ಮೊದಲೇ ಏಕೆ ಈ ರೀತಿ ನನ್ನನ್ನು ಕಟಾಕ್ಷಿಸಬಾರದಾಗಿತ್ತು?" ಎಂದರು. ಈ ಮಾತು ಕೇಳಿ ಭಗವಂತನು ನಾಚಿಕೊಂಡು ಕಾಲು ಹೆಬ್ಬೆರಳಿನಿಂದ ನೆಲವನ್ನು ಗೀಚಲು ಆರಂಭಿಸಿದ. ಆಳ್ವಾರರು ಇದನ್ನು ನೋಡಿ ಆನಂದಿಸುವರು.

शूळ्विशुम्बु १०. ९.

पन्थानन्त्वर्चिरादिं परमसुखमथो सत्क्रियां तद्गतानां
प्राप्यं वैकुण्ठलोकं तदुपगतजनैस्सत्क्रियां मण्डपञ्च ।
तत्रत्यं वासुदेवं सपरिजनमथो तस्य हर्षं सजर्घि
दृष्ट्वा तद्दर्शितं तन्मुनिरवददिहान्यापदेशात्परार्थे ॥२६२॥

ಪರಮಯೋಗಿಗಳಿಗೆ ಉಂಟಾಗತಕ್ಕ ಪರಭಕ್ತಿಯುಂಟಾಗಿ ಆದರ ಕ್ರಮಗಳನ್ನೆಲ್ಲಾ ಇದುವರೆಗೂ ಆಳ್ವಾರರು ಅನುಭವಿಸಿದರು. ಈಗ ಪರಮಪದದಲ್ಲಿಯೇ ಹೋಗಿ ನಿರ್ಬಾಧಕವಾಗಿ ಭಗವಂತನನ್ನು ಅನುಭವಿಸಬೇಕೆಂದು ಆಸೆ ಪಡುತ್ತಿರುವ ಇವರ ತ್ವರೆಗಿಂತಲೂ ಮಿಗಿಲಾದ ತ್ವರೆಯಿಂದ ಕೂಡಿದ ಭಗವಂತನು— ಸುಖಮಯವಾದ ಪರಮಪದಕ್ಕೆ ಹೋಗುವ ಅರ್ಚಿರಾದಿ ಮಾರ್ಗವನ್ನೂ, ದಾರಿಯಲ್ಲಿ ಹೋಗುವಾಗ ಅಲ್ಲಿರುವವರು ಮಾಡುವ ಸತ್ಕಾರ

ವನ್ನೂ, ಪ್ರಾಪ್ಯವಾದ ವೈಕುಂಠ ಲೋಕವನ್ನೂ, ಅಲ್ಲಿಯವರು ಮಾಡುವ ಸತ್ಕಾರವನ್ನೂ, ದಿವ್ಯಾಸ್ಥಾನ ಮಂಟಪರತ್ನವನ್ನೂ, ಅಲ್ಲಿ ಬಿಜಯ ಮಾಡಿರುವ ಪರವಾಸುದೇವನನ್ನೂ, ಅವನ ಪರಿಜನ ಪರಿಚ್ಛದಾದಿಗಳನ್ನೂ, ಅವನ ಬ್ರಹ್ಮಾನಂದವನ್ನೂ, ಅವನ ಜತೆಯಲ್ಲಿ ಕಲೆತು ತಾವೂ ಅದೇ ಬ್ರಹ್ಮಾನಂದವನ್ನನುಭವಿಸುವುದನ್ನೂ ತೋರಿಸಿಕೊಡಲು, ಅದನ್ನೆಲ್ಲಾ ನೋಡಿ ಆನಂದಿಸಿ, ಅನ್ಯಾಪದೇಶದಿಂದ ಹೇಳುವರು.

मुनियेनान्मुहने १०. १०.

साक्षात्कृत्य परे पदे भगवतो दासैस्समं सूरिभि-
स्स्वस्यावस्थितिमीक्ष्य च प्रकृतिगं स्वं प्राप्य दैन्यं महत् ।
चुक्रोशोच्चतरं हरिं मुनिरयं दावानलालीढवत्
श्रीशोऽप्यार्ततरो न्ययूयुजदमुं स्वाङ्घ्रिद्वये किङ्करम् ॥२६३॥

परभक्तिं परज्ञानं प्रतिपाद्य मुनिः पुरा ।
परमां भक्तिमाचष्टे दशकेऽत्र मुनिस्स्वतः ॥२६४॥

दर्शनेच्छा परा भक्तिः परज्ञानन्तु दर्शनम् ।
परमा भक्तिरुक्ता साऽनुभवेच्छा हरेस्तु या ॥२६५॥

उत्कण्ठया परमया निस्सृतं दशकं मुनेः ।
इदं यो वेत्ति बद्धोऽपि स मुक्तादपि चोत्तमः ॥२६६॥

* * *

इति श्रीमद्द्रमिडोपनिषत्सारसङ्ग्रहस्समाप्तः

श्रीः

ಆಳ್ವಾರರು ತಾವು ಪರಮಪದಕ್ಕೆ ಸೇರಿ, ನಿರತಿಶಯಾನಂದಯುಕ್ತರಾಗಿ ಆ ನಿತ್ಯಮುಕ್ತರೊಡನೆ ಸೇರಿದ ಸ್ಥಿತಿಯು ಮಾನಸಾನುಭವ ಮಾತ್ರವಾಯಿತು. ಅದು ಬಾಹ್ಯ ಸಂಶ್ಲೇಷವಾಗಬೇಕೆಂದು ಆಸೆಪಟ್ಟರು. ದುಃಖಲೇಶವೂ ಇಲ್ಲದಂತೆ ಸುಖಪ್ರಚುರನಾಗಿ ಮೇರುಶಿಖರದಲ್ಲಿ ವಿಹರಿಸುತ್ತಿರುವವನು, ಮೇಲಿಂದ ಪಾತಾಳದಲ್ಲಿ ಬಿದ್ದು ಎಂತಹ ಕಷ್ಟಪಡುವನೋ ಅದೇ ರೀತಿ ಬಾಹ್ಯಸಂಶ್ಲೇಷವಿಲ್ಲದೆ ತಾವು ಕಷ್ಟಪಡಲು ಈ (ಶರೀರ) ಪ್ರಕೃತಿಬದ್ಧರಾಗಿರುವುದೇ ಕಾರಣವೆಂದು ಬಹಳ ಕ್ಲೇಶಪಟ್ಟರು. ಹೀಗೆ ತಾವು ನೆನೆಸಿದ ಕ್ಷಣ ಬಾಹ್ಯಸಂಶ್ಲೇಷ ದೊರೆಯದಿರಲು, ತಾಯಿ ತಂದೆಗಳೆದುರಿಗೇ ಇದ್ದರೂ ಹಸಿವು ಬಾಯಾರಿಕೆಗಳಿಂದ ಹಾಲು ಕುಡಿವ ಹಸುಗೂಸು ಆರ್ತಿಯಿಂದ ಹೇಗೆ ತಾಯಿಯನ್ನು ಕೂಗಿಕೊಂಡು ಅಳುವುದೋ, ಕಾಳ್ಕಿಚ್ಚಿನಲ್ಲಿ ಸಿಕ್ಕಿಬಿದ್ದವನು ಹೇಗೆ ಗಟ್ಟಿಯಾಗಿ ಆರ್ತಧ್ವನಿ ಮಾಡಿ ಕೂಗಿಕೊಳ್ಳುವನೋ ಹಾಗೆಯೇ ಇವರೂ ನಿರ್ದಯರ ಮನಸ್ಸು ಕರಗುವಂತೆಯೂ, ಭಗವಂತನು ತಮ್ಮನ್ನು ರಕ್ಷಿಸಿದ ಹೊರತು ಪರಮಪದದಲ್ಲಿ ನಿಲ್ಲುವುದೇ ಕಷ್ಟವಾಗುವಂತೆಯೂ ಮತ್ತು ನಾಚಿಕೆ ಬಿಟ್ಟು ಇವರೆದುರಿಗೆ ನಿಂತು, "ಆಳ್ವಾರರೇ! ನಿಶ್ಚಯವಾಗಿಯೂ ನಿಮ್ಮನ್ನು ರಕ್ಷಿಸುವೆನು. ಇಗೋ! ನನ್ನ ಪ್ರೇಯಸಿ ಲಕ್ಷ್ಮೀದೇವಿಯ ಮೇಲಾಣೆ!" ಎಂದೆನುವಂತೆಯೂ, ಆರ್ತಧ್ವನಿಯಿಂದ ಕೂಗಿಕೊಂಡು ಮೊರೆಯಿಟ್ಟರು. ಪರಮ ದಯಾಳುವಾದ ಭಗವಂತನು "ಈ ರೀತಿ ಇವರನ್ನು ಕಷ್ಟಪಡಿಸುತ್ತಿರುವೆನಲ್ಲಾ!" ಎಂದು ಆಳ್ವಾರರಿಗಿಂತಲೂ ಮಿಗಿಲಾದ ಆರ್ತಿಯಿಂದ ಲಕ್ಷ್ಮೀಸಮೇತನಾಗಿ ಗರುಡಾರೂಢನಾಗಿ ಇವರಿಷ್ಟದಂತೆ ಸಾಕ್ಷಾತ್ಕಾರಕೊಟ್ಟು, ಇವರ ಪ್ರಕೃತಿಸಂಬಂಧವನ್ನು ನೀಗಿಸಿ, ಇವರಾಸೆ ಪಟ್ಟಂತೆಯೇ ದಾಸರಾದ ನಿತ್ಯಮುಕ್ತರೊಡನೆ ಇವರನ್ನು ಸೇರಿಸಿ, ಇವರ ಆರ್ತಿಯೆಲ್ಲಾ ನೀಗಿ, ಇವರ ಆಸೆಯೆಲ್ಲಾ ಪೂರ್ತಿಯಾಗುವಂತೆಯೂ, ಇವರ ಆಸೆಗಿಂತಲೂ ಮಿಗಿಲಾದ ತನ್ನಾಸೆ ಪೂರ್ತಿಯಾಗುವಂತೆಯೂ ಆಳ್ವಾರರೊಡನೆ ಸಂಶ್ಲೇಷಿಸಿದನು. ಈ ರೀತಿ ಸಂಶ್ಲೇಷಿಸಿ ತನ್ನ ದಾಸ್ಯದಲ್ಲಿ ನಿಯಮಿಸಿಕೊಂಡದ್ದನ್ನು ಅನುಭವಿಸಿ ಅಪ್ಪಣೆಕೊಡಿಸುವರು.

ಈ ರೀತಿ ಆಳ್ವಾರರು ಇದುವರೆಗೂ ಪರಭಕ್ತಿ ಪರಜ್ಞಾನಗಳನ್ನು ವಿವರಿಸಿ ಈ ದಶಕದಲ್ಲಿ ಪರಮಭಕ್ತಿಯನ್ನು ವಿವರಿಸುವರು. ವಸ್ತುವನ್ನು ಕಾಣ

ದಿರುವಾಗ ಕಾಣಬೇಕೆಂಬ ಹಂಬಲ ಪರಭಕ್ತಿಯೆನಿಸುವುದು. ದರ್ಶನವೇ ಪರಜ್ಞಾನ. ಈ ರೀತಿ ಕಂಡವಸ್ತುವನ್ನು ಅನುಭವಿಸಿಯೇ ತೀರಬೇಕೆಂಬ ಇಚ್ಛೆಯೇ ಪರಮಭಕ್ತಿ. ಈ ರೀತಿ ಭಗವಂತನನ್ನು ಅನುಭವಿಸಿದ ಹೊರತು ಆಗುವುದೇ ಇಲ್ಲವೆಂಬ ಪರಮೋತ್ಕಂಠೆಯಿಂದ ಹೊರಟಿರುವ ಆಳ್ವಾರರ ಈ ಶ್ರೀಸೂಕ್ತಿಯನ್ನು ಕಲಿತು ಅನುಭವಿಸಿ ಆನಂದಿಸುವವನು ಸಂಸಾರದಲ್ಲಿದ್ದರೂ ಮುಕ್ತರಿಗಿಂತಲೂ ಮಿಗಿಲಾದವನೆಂದು ಫಲಶ್ರುತಿಯನ್ನು ಅಪ್ಪಣೆ ಕೊಡಿಸಿರುವರು.

इति श्री वालधन्विकुलकलशजलनिधिकौस्तुभानां, यदुगिरिनित्य-
वासरसिकानां, साहित्यरत्न-शास्त्रकविरत्नाद्यनेक-विरुदाङ्कितानां,
साहित्यालङ्कार-सांख्ययोगवेदान्तविदुषां, सांख्यतीर्थानां,
पण्डितरत्न–कुप्पण्णास्वामि-सकाशादधिगत-सकलशास्त्रसाराणां

इलैविल्लि जग्गू वेङ्कटाचार्यस्वामिनां कृतिषु

द्रमिडोपनिषत्सारसङ्ग्रहस्समाप्तः

ಸಾಹಿತ್ಯರತ್ನಾದಿ ಬಿರುದಾಂಕಿತರಾದ
ಇಳೈವಿಲ್ಲಿ ಜಗ್ಗೂ ವೆಂಕಟಾಚಾರ್ಯಸ್ವಾಮಿಗಳವರ ಪುತ್ರರು
ಸಾಹಿತ್ಯ ವೇದಾಂತ ವಿದ್ವಾನ್ **ಜಗ್ಗೂ ಸುದರ್ಶನಾಚಾರ್ಯರು** ರಚಿಸಿದ
ದ್ರಮಿಡೋಪನಿಷತ್ಸಾರಸಂಗ್ರಹ ಕನ್ನಡ ತಾತ್ಪರ್ಯಾನುವಾದವು
ಸಂಪೂರ್ಣಂ

ಶ್ರೀಃ

ಶ್ರೀಮತೇ ಶಠಕೋಪಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ರಮ್ಯಜಾಮಾತೃಮುನಯೇ ನಮಃ

ಶ್ರೀಃ

श्रीः

श्रीमते रामानुजाय नमः श्रीमन्मधुरकवये नमः

कण्णिनुण् शिरुत्ताम्बु

ಕಣ್ಣಿನುಣ್ ಶಿರುತ್ತಾಂಬು

* * *

ಶ್ರೀಃ

कण्णिनुण् शिरुत्तम्बिनाल् १.

दाम्ना ग्रंथिशताचितेन तनुना ह्रस्वेण बद्धस्स्वयं
यो मातुर्वशगो विचित्रचरितस्तस्माच्च मत्स्वामिनः ।
प्राप्यामाक्कुरुकेशपूर्ण इति चेदुच्येत रस्येत त-
त्पीयूषं सततं सवेदविरलं मज्जिह्विकायाः पुनः ॥१॥

ತಾಯಿಯಾದ ಯಶೋದೆಯಿಂದ ನೂರಾರು ಗಂಟುಗಳಿರುವ ಸಣ್ಣನಾಗಿ ಮೋಟಕಾದ ಹಗ್ಗದಿಂದ ಕಟ್ಟಿಹಾಕಲ್ಪಟ್ಟಾಗ ಅವಳಿಗೆ ಅಧೀನನಾಗಿದ್ದು ಆಶ್ಚರ್ಯ ಚರಿತನಾಗಿ ಪರಮ ಸುಲಭನಾದ ಆ ಕೃಷ್ಣಪರಮಾತ್ಮನ ನಾಮಕ್ಕಿಂತಲೂ, ನನಗೆ ಸರ್ವವಿಧಸ್ವಾಮಿಯಾಗಿ ತಿರುಕ್ಕೂರು ಹೂರಿಗೆ ಒಡೆಯರಾಗಿ ನನಗೆ ಪರಮ ಪ್ರಾಪ್ಯರಾದ ನಮ್ಮಾಳ್ವಾರರ "ಕುರುಕಾ ಪೂರ್ಣ" ರೆಂಬ ನಾಮವನ್ನು ಅನುಸಂಧಾನ ಮಾಡಿದರೆ ಸಾಕು. ನನ್ನ ನಾಲಿಗೆಯಿಂದ ಅಮೃತವು ಸ್ರವಿಸುವುದು. ನನ್ನ ನಾಲಿಗೆಗೆ ರುಚಿಸುವುದೂ ಅದೇ ನಾಮವೇ.

नम्मैयाऴ्मिक ४.

सर्वोत्कृष्टगुणाश्चतुश्श्रुतिधराः प्रह्लादसीतादिभि-
स्तुल्या मां गणयन्ति राशिमखिलैः पापैर्मुहुस्सञ्चितम् ।
तस्मान्मातृपितृप्रबोधजनकाचार्यादिकृत्यं स्वतः
कुर्वन्मच्छठतामपोह्य भगवान्पूर्णो ममासीद्गुरुः ॥४॥

ಪ್ರಹ್ಲಾದ ಸೀತಾದಿಗಳಿಗೆ ಸಮಾನರಾಗಿಯೂ, ಸರ್ವಾತ್ಮಗುಣ ಪರಿಪೂರ್ಣರಾಗಿಯೂ, ನಾಲ್ಕುವೇದಗಳನ್ನೂ ಓದಿರುವ ಮಹಾತ್ಮರು ನನ್ನನ್ನು ಸಮಸ್ತ ಪಾಪರಾಶಿಗಳ ಮೂರ್ತಿಯೆಂದೇ ಭಾವಿಸಿರುವರು. ಆದಕಾರಣ ಈ ಕುರುಕಾಪೂರ್ಣರಾದ ನಮ್ಮಾಳ್ವಾರರೇ ತಾಯಿ, ತಂದೆ, ಜ್ಞಾನೋಪದೇಷ್ಟಾ, ಆಚಾರ್ಯರು, ಇವರೆಲ್ಲರ ಕೃತ್ಯಗಳನ್ನೂ ನನ್ನ ವಿಷಯದಲ್ಲಿ ತಾವಾಗಿ ನಿರ್ವಹಿಸುತ್ತಾ, ನನ್ನ ಶಠತ್ವವನ್ನು ತೊಲಗಿಸಿರುವರು. ಇವರೀಗ ನನಗೆ ಪರಮಗುರುಗಳು.

नम्बिनेन् पिरर् ५.

अहरमहमितः प्राक्सर्वदाप्यात्मतत्वं
परमपुरुषभोग्यं योषितश्चार्यवृत्ताः ।
कनकरचितहर्म्यश्रीगुरीपूर्णभक्त-
श्चतुरतर इदानीमेव दासश्च भूतः ॥५॥

ಭಗವದ್ಭಾಗವತ ಶೇಷಭೂತವಾದ ಈ ಆತ್ಮವಸ್ತುವನ್ನು ನನಗೆ ನಾನು ಸ್ವತಂತ್ರನೆಂದು ತಿಳಿದು ಇದುವರೆಗೂ ಆತ್ಮಾಪಹಾರ ಮಾಡಿದ್ದೆ. ಮತ್ತು ಪರದಾರ ನಿರತನಾಗಿದ್ದೆ. ಸ್ವರ್ಣಮಯವಾದ ಮಹಡೀಮನೆಗಳಿಂದ ಕೂಡಿರುವ ತಿರುನಗರಿಗೆ ಸ್ವಾಮಿಯಾದ ನಮ್ಮಾಳ್ವಾರರಿಗೆ ದಾಸನಾದ ಮೇಲೆ— ಈಗಲೀಗ ಚತುರನಾದೆ. ಈಗಲೀಗ ನನ್ನ ದಾಸ್ಯವು ನೆಲೆನಿಂತಿತು.

नाविनाल् २.

स्तुत्वा जिह्विकया सुखं तदखिलं प्राप्तं प्रपन्नश्च त-
त्पादौ भोग्यतमावुपायविधया सत्यं न चान्यत्ततः ।
जाने दैवमनुत्तमं च कुरुकापूर्णप्रबन्धञ्च तं
गायन्गेयमितस्ततस्सुमधुरं तृप्तश्चरामि क्वचित् ॥२॥

ನಮ್ಮಾಳ್ವಾರರ ನಾಮಾಮೃತವನ್ನು ಅನುಸಂಧಾನ ಮಾಡಿ ಆನಂದ ಪರವಶನಾದೆ. ಸತ್ಯವಾಗಿಯೂ, ಭೋಗ್ಯತಮವಾದ ಅವರ ಪಾದಾರವಿಂದ ಗಳನ್ನು ಉಪಾಯಭಾವದಿಂದ ಶರಣ ವರಣ ಮಾಡಿದೇನೆ. ಇವರಿಗಿಂತಲೂ ಬೇರೆ ದೇವರೇ ಇಲ್ಲ. ಎಲ್ಲಕ್ಕೂ ಮಿಗಿಲಾದ ಮಧುರವಾದ ಇವರ ದಿವ್ಯ ಪ್ರಬಂಧಗಳನ್ನು ಹಾಡುತ್ತಾ ತೃಪ್ತನಾಗಿ ಇತ್ತುತ್ತ ತಿರುಗುವೆನು.

तिरुतन्दाहिलुम् ३.

मत्प्राप्याद्विनिवृत्त एव यदि वास्यां तर्हि सूरिप्रियं
श्यामं सुन्दरमाश्रितं कमलया द्रक्ष्याम्यहं तद्वपुः ।
औदार्येण महत्तरस्य कुरुकापूर्णस्य दास्यान्मया
लब्धोऽयं पुरुषार्थ उत्तमतमो दासेन लब्धात्मना ॥३॥

ನನಗೆ ಪರಮ ಪ್ರಾಪ್ಯವಾದ ಚರಮಪರ್ವವಾದ ಆಳ್ವಾರರ ವಿಷಯ ದಿಂದ ಹಿಂತಿರುಗಿದರೂ, ತಿರುಗಬಲ್ಲೆನಾದರೂ, ನಿತ್ಯಸೂರಿಗಳಿಗೂ ಪ್ರೀತಿ ವಿಷ ಯನಾಗಿ ನೀಲಮೇಘ ಶ್ಯಾಮಲನಾಗಿ ಚಲುವನಾದ ಲಕ್ಷ್ಮೀವಲ್ಲಭನನ್ನೂ ಅವನ ದಿವ್ಯ ಮಂಗಳವಿಗ್ರಹವನ್ನೂ ಕಣ್ಣೆದುರಿಗೇ ಕಾಣುತ್ತಿರುವೆನಲ್ಲಾ! ಈ ಉತ್ತಮೋತ್ತಮ ಪುರುಷಾರ್ಥ ಲಭಿಸಿದ್ದು ಹೇಗೆ ಗೊತ್ತೆ? ಆ ಮಹೋದಾರ ರಿಂದ ಕುರುಕಾಪೂರ್ಣರ ದಾಸ್ಯದಿಂದಲೀಗ ಈ ಪುರುಷಾರ್ಥ ಲಭಿಸಿತು. ಈಗ ಲೀಗ ನನ್ನ ಸತ್ತೆಯೂ ಸ್ಥಿರವಾಯಿತು.

इन्नुदोहुम् ६.

अद्यारभ्य सदा विभुर्मम पुनस्स्थित्वैकरूपो दयां
तेने स्वस्य गुणा मम स्तुतिपथं नीता यथा ते तथा ।
शैलोत्सेधगृहाभिरामकुरुकापूर्णः कदाप्यादरा-
न्मां नैव त्यजतीह पश्यत जना लोहः कृतं काञ्चनम् ॥६॥

ನಮ್ಮಾಳ್ವಾರರ ಪಾದಾರವಿಂದಗಳನ್ನಾಶ್ರಯಿಸಿದೆ. ಇದು ಮೊದಲು ಸರ್ವನಿಧಸ್ವಾಮಿಯಾದ ಇವರು, ನನ್ನಲ್ಲಿ ಏಕರೂಪವಾದ ದಯೆಯನ್ನು ತೋರಿರುವರು. ಇವರ ಗುಣಗಳನ್ನು ಪಾಡುವೆನಲ್ಲಾ ! ಇದು ಇವರ ಕೃಪಾ ಕಾರ್ಯವಲ್ಲವೆ? ಬೆಟ್ಟದಂತೆ ಮುಗಿಲು ಮುಟ್ಟುವ ದಿವ್ಯ ಪ್ರಾಸಾದಗಳಿಂದ ಚೆಲುವಾದ ತಿರುನಗರಿಗೆ ಪೂರ್ಣರೆನಿಸಿಕೊಂಡ ನಮ್ಮಾಳ್ವಾರರು. ವಾತ್ಸಲ್ಯ ದಿಂದ ಎಂದೂ ಬಿಡಲೊಲ್ಲೆನೆನ್ನುವರು. ಆಹಾ ! ಕಬ್ಬಿಣವನ್ನು ಚಿನ್ನವನ್ನಾಗಿ ಮಾಡಿದರಲ್ಲಾ !!

कण्डुहोण्डु ७.

दृष्ट्वा मां निधिदर्शमाप्य च तथा श्रीकारिसूनुर्महो-
दारोऽनादिमहार्यमेव करणैः पाप्मानमस्मच्छ्रितम् ।
ज्वालालग्नविशीर्णतूलसदृशं कृत्वा वितेने दयां
जानीयुर्हरितो यथाष्ट च शठारातेर्दयां वच्म्यहम् ॥७॥

ಪರಮೋದಾರರಾದ ನಮ್ಮಾಳ್ವಾರರು ನನ್ನಲ್ಲಿ ಎಂತಹ ದಯೆ ಮಾಡಿ ರುವರು? ಬಲ್ಲಿರಾ! ಪರಮಪಾಪಿಯಾದ ನನ್ನನ್ನು ಕಂಡಾಗಲೇ ನಿಧಿಯನ್ನು ಕಂಡಂತೆ ಪರಮಾನಂದ ಭರಿತರಾದರು. ಅನಾದಿಯಾಗಿ ಅಹಾರ್ಯವಾದ ನನ್ನ ಸಮಸ್ತ ಪಾಪಗಳನ್ನೂ ಉರಿಯಲ್ಲಿ ಹಿಡಿದ ಬಿಡಿಸಿದ ಹತ್ತಿಯಂತೆ ನಿರ್ನಾಮ ಮಾಡಿದರು. ಈ ಶಠಕೋಪರ ಪರಮದಯೆಯನ್ನು ಬಣ್ಣಿಸುವೆನು. ಎಂಟು ದಿಕ್ಕಿನವರೂ ಕೇಳಿ; ಲಾಲಿಸಿ.

अरुळ्कोण्डाडुम् ८.

क्षुपां श्लाघन्ते ये शठरिपुसमास्स्वस्य भगवा-
न्यथा ते मोदेरन्प्रकटयति गीतां स दयया ।
सहस्रं गाधानां सकलजनभोग्यं शठरिपु-
र्जगौ कारुण्यं तत्सकलभुवनेभ्योऽधिकतमम् ॥८॥

ಭಗವಂತನ ಕೃಪೆಯನ್ನು ಕೊಂಡಾಡುವ ಜ್ಞಾನಿಗಳಾದ ನಮ್ಮಾಳ್ವಾರಂತಹವರು ಆನಂದಿಸಿರುವಂತೆ, ಭಗವಂತನು ತನ್ನ ದಯೆಯಿಂದ ಗೀತೆಯನ್ನು ಉಪದೇಶಮಾಡಿದ. ನಮ್ಮಾಳ್ವಾರರು ಸಕಲ ಜನಗಳಿಗೂ ಭೋಗ್ಯತಮವಾದ ತಿರುವಾಯ್ಮೊಳಿ ಸಾಸಿರಪದ್ಯಗಳನ್ನು ಪಾಡಿರುವರಲ್ಲಾ! ಏನು ಕೃಪೆ!! ಇದು ಲೋಕಾತೀತವಾದುದಲ್ಲವೆ?

मिक्कदिवेयर् ९.

दृढानेकश्रुत्यभ्यसितमतवेदान्तरवचो-
रहोर्थं गीत्वा मे हृदि दृढमतानीज्जडतमे ।
हरेः काव्याख्यानौपयिकगुणपूर्णस्य शठजि-
द्गुरोर्मे शेषत्वे भवति हि रतिर्दास्यफलका ॥९॥

ಈ ಶಠಕೋಪರೀಗ ನನಗೆ ಪರಮಗುರುಗಳು. ಭಗವಂತನ ಗುಣಗಾನ ಮಾಡಬೇಕೋ? ಅದು ಇವರಿಗೇ ತಕ್ಕುದು. ಸ್ವತಂತ್ರವಾಗಿ ದೃಢಪ್ರಮಾಣವಾದ ಸಕಲವೇದಗಳನ್ನೂ ಅಭ್ಯಸಿಸಿರುವವರು ತೀರ್ಮಾನಿಸಿರುವ ವೇದಗಳ ಸೂಕ್ಷ್ಮವಾಗಿರಹಸ್ಯವಾದ ಅಂತರಾರ್ಥಗಳನ್ನೂ ಈ ಜಡವಾದ ನನ್ನ ಹೃದಯದಲ್ಲಿ ಸುದೃಢವಾಗಿ ನಿಲ್ಲುವಂತೆ ಪಾಡಿರುವರಲ್ಲಾ! ಇದೇನು ಕೃಪೆ!! ಇವರಲ್ಲಿ ದಾಸನಾದುದಕ್ಕೆ ಇವರ ಕೈಂಕರ್ಯವೇ ನನಗೆ ಪುರುಷಾರ್ಥವಲ್ಲವೆ?

पयनन्नाहितुम् १०.

फलापेक्षां हित्वा नवहितमनस्कान्निजहिते
स्वनुष्ठानात्कुर्वन्सुचरितपरान्दास्यनिपुणान् ।
पिकोद्घुष्टोद्यानोपहितकुरुकापूर्ण ! भवतः
पदद्वन्द्वेऽनर्घे रतिमिह परां साधु कलये ॥१०॥

ಚೇತನರು ತಮಗೆ ಹಿತವಾದುದನ್ನುಪದೇಶಿಸಿದರೆ ಅದನ್ನು ಅಭಿಮುಖ್ಯ ದಿಂದ ಕೇಳದಿದ್ದರೂ, ಪರರಿಂದ ತಮಗೊಂದು ಪ್ರಯೋಜನವನ್ನೂ ಅಪೇಕ್ಷಿಸದೆ, ಅವರೆಲ್ಲರನ್ನೂ ತಮ್ಮ ಸದನುಷ್ಠಾನದಿಂದ ಒಳ್ಳೆಯ ನಡತೆಯುಳ್ಳವರನ್ನಾಗಿಯೂ, ದಾಸ್ಯದಲ್ಲಿ ನಿಷ್ಣಾತರನ್ನಾಗಿಯೂ ಮಾಡಿರುವರಲ್ಲಾ ! ಕೋಗಿಲೆಗಳು ಧ್ವನಿಗೈಯುತ್ತಿರುವ ಉದ್ಯಾನಗಳಿಂದ ಸುತ್ತುವರಿದ ತಿರುನಗರಿಗೆ ಪೂರ್ಣರೆನಿಸಿಕೊಂಡ ಈ ಆಳ್ವಾರರ ಅನರ್ಘವಾದ ಪಾದಾರವಿಂದಗಳಲ್ಲಿ ಭಕ್ತಿ ಮಾಡುವುದೀಗ ಪರಮ ಶ್ರೇಷ್ಠವಾದುದು. ಇದನ್ನೀಗ ಉತ್ತಮವೆಂದೆಣಿಸಿರುವೆನು.

अन्बन्तन्नै ११.

वात्सल्यवार्धि हरिभक्तजनानुविद्ध-
वात्सल्यरम्यकुरुकानगरीसुपूर्णे ।
भक्त्युत्कटेन कविना मधुरेण गीतां
यो विश्वसेद्धरिपदं पदमेव तस्य ॥११॥

ತನ್ನ ಭಕ್ತರಲ್ಲಿ ವಾತ್ಸಲ್ಯಪೂರ್ಣನಾದವನು ಹರಿ. ಆವನ ಭಕ್ತರಲ್ಲಿ ವಾತ್ಸಲ್ಯವುಳ್ಳವರು ನಮ್ಮಾಳ್ವಾರರು. ಅವರ ವಿಷಯದಲ್ಲಿ ಪರಮಭಕ್ತಿಯುಕ್ತರಾಗಿ ಸುಮಧುರವಾಗಿ ಪಾಡಿದ, ಮಧುರಕವಿಯಾಳ್ವಾರರ ಈ ಗೀತವನ್ನು ಯಾರು ನಂಬುವರೋ— ಅವರಿಗೆ ಪರಮಪದ ಮೀಸಲು ; ಅಥವಾ- ಅವರಿರುವ ಸ್ಥಾನವೇ ಪರಮಪದ.

ಶ್ರೀ ಮಧುರಕವಿ ಆಳ್ವಾರರ ತಿರುವಡಿಗಳೇ ಶರಣ

ಶ್ರೀಃ

ಶ್ರೀಃ

ಶ್ರೀಮತೇ ಶಠಕೋಪಾಯ ನಮಃ

ಶ್ರೀ ಮ ತೇ ರಾ ಮಾ ನು ಜಾ ಯ ನ ಮಃ

ಶ್ರೀಮದ್ ದ್ರಮಿಡೋಪನಿಷತ್ಸಾರ ಸಂಗ್ರಹಃ

* * *

ಪ್ರಸನ್ನಕೂಟಸ್ಥಪರಾಂಕುಶಾದೀನ್ಸೂರೀನ್ಗುರೂನ್ನಾಥಯತೀಶಪೂರ್ವಾನ್ ।
ಪ್ರಣಮ್ಯ ಕುರ್ವೇ ದ್ರವಿಡಶ್ರುತೀನಾಂ ಸಾರಾರ್ಥಸಂಕ್ಷೇಪಮಿಹಾದ್ಯ ಪದ್ಯೈಃ ॥

ಉಪೋದ್ಘಾತಸಾರಃ

ಕರ್ತುಶ್ಶಠರಿಪೋಸ್ತಸ್ಯ ಪ್ರಬಂಧಸ್ಯ ಚ ತತ್ಕೃತೌ ।
ಪ್ರತಿಪಾದ್ಯಾರ್ಥಜಾತಸ್ಯ ಮಹಿಮಾತ್ರಾನುವರ್ಣ್ಯತೇ ॥೧॥

ಶ್ರೀಕೃಷ್ಣಪಾದಗುರುಭಿರಾದ್ಯೋಪೋದ್ಘಾತಕೇ ಸ್ಫುಟಮ್ ।
ದ್ವಿತೀಯೇ ತು ದ್ವಯಾರ್ಥತ್ವಂ ; ತೃತೀಯೇ ಭರತಸ್ಯ ಯಾ ॥೨॥

ನಿಷ್ಠಾ ರಾಮೇ ಚತುರ್ಧಾ ಸಾ ಹರೌ ಸೂರೇಃ ಕೃತಿಷ್ವಪಿ ।
ತತ್ರಾದ್ಯಾಯಾಂ ದಶಾ ಸಾ ಹಿ ಯಾ ಮಾತುರ್ವಚನಶ್ರುತೌ ॥

ಚಿತ್ರಕೂಟಪ್ರಯಾಣೇ ಯಾ ಸಾ ದ್ವಿತೀಯಪ್ರಬಂಧಗಾ ।
ನಂದಿಗ್ರಾಮಸ್ಥಿತೌ ಯಾ ತು ಸಾ ತೃತೀಯಕೃತೌ ಮತಾ ॥೩॥

ಪುನರಾಗತ್ಯ ರಾಜ್ಯಸ್ಥೇ ರಾಮೇ ಸಾ ತು ಚತುರ್ಥಗಾ ।
ಉಪೋದ್ಘಾತತ್ರಯೇಪ್ಯೇವಂ ಪ್ರಮೇಯೋರ್ಥೋ ನಿರೂಪಿತಃ

ದಶಾನಾಂ ಶತಕಾನಾಂ ಪ್ರಧಾನಾರ್ಥಾಃ

ಶ್ರೀಭರ್ತುಃ ಕೈಂಕರ್ಯಂ ಪುರುಷಾರ್ಥಸ್ಸ ಚ ಪರಾರ್ಥ ಏವ ಸ್ಯಾತ್ ।
ಹರಿಭಕ್ತಪಾದಸೇವಾ ಪರ್ಯವಸಿತಮೇವ ತಚ್ಚ ನಿಷ್ಕೃಷ್ಟಮ್ ॥೪॥

ಐಶ್ವರ್ಯಂ ಕೈವಲ್ಯಂ ದ್ವಿತಯಂ ತ್ಯಾಜ್ಯಂ ವಿರೋಧಿತ್ವಾತ್ ।
ತಾದೃಗ್ವಿರೋಧನಿರಸನಕಾರೀ ಮಧುಹಾ ಸ ಏವ ಹರಿರೀಶಃ ॥೮॥

ಇತ್ಯಾಹ ಕಾರಿಸೂನುಃ ಕ್ರಮಶೋಽರ್ಥಾನ್ಪಂಚಭಿಶ್ಶತಕೈಃ ।
ಅಥ ಷಷ್ಠೇ ಪ್ರತಿಬಂಧಕನಿರಸನಶೀಲಂ ವೃಣೋತಿ ಶರಣತಯಾ ॥೯॥

ಶರಣವರಣೇ ಕೃತೇಽಪಿ ಶ್ರೀಶೇ ಸ್ವಪ್ರಕೃತಿಬಂಧನಂ ಪಶ್ಯನ್ ।
ಅವಸೀದತಿ ನಿರ್ವೇದಾಚ್ಛಠಕೋಪಸ್ಸಪ್ತಮೇ ಶತಕೇ ॥೧೦॥

ಬಂಧಸ್ಯ ಹೇತುರ್ಮಮತಾ ಸ್ವಬಂಧುಷ್ವಿತ್ಯೇವ ಮತ್ವಾ ಶಠಕೋಪಸೂರಿಃ ।
ತ್ಯಕ್ತ್ವಾಥ ಸಂಗಂ ಸಕಲೇಷು ವಿಷ್ಣೌ ನ್ಯವೇದಯತ್ಸಂಗಹತಿಂ ಸ್ವಕೀಯಾಂ ॥

ಏವಂ ಪ್ರಪನ್ನೇಽಪಿ ಮುನೌ ಶಠಾರೌ ದೃಷ್ಟ್ವಾ ವಿಲಂಬಂ ಬಹು ಶಂಕಮಾನೇ ।
ನಾರಾಯಣೋಽಸ್ಮೀತಿ ನುನೋದ ಶಂಕಾಂ ಶೀಲೇ ನ್ಯಮಜ್ಜನ್ಮುನಿರಸ್ಯ ಹೃಷ್ಟಃ

ಬಾಹ್ಯಾಶ್ಲೇಷತ್ವರಾಂ ದೃಷ್ಟ್ವಾ ಶಠಾರಾತೇಶ್ಶ್ರಿಯಃ ಪತಿಃ ।
ಸ್ವನಿತ್ಯಸೇವಾಂ ಪ್ರದದೌ ಮಾರ್ಗದರ್ಶನಪೂರ್ವಕಮ್ ॥೧೩॥

ಪ್ರಥಮ ಶತಕಾರ್ಥಾಃ

ಪರತ್ವಭಜನೀಯತಾ ಸುಲಭತಾ ಕ್ಷಮಾಶೀಲವಾನ್
ಸುರಾಧಸುಖರೂಪತಾರ್ಜವಗುಣೈಃ ಕ್ರಮಾತ್ಸಂಯುತಃ ।
ಶಠದ್ವಿಷಮುಖೋಜಯತ್ಪ್ರಥಮಕೇ ಶತೇ ಸ್ವಂ ಹರಿಃ
ತಥಾಖಿಲತದಂಗಕೈರ್ವಿಗಳಿತಮೇವ ನಿರ್ಹೇತುಕಂ ॥೧೪॥

ಉಭಯರ್ವಾರ ೧ ಶತಕ ೧ ದಶಕಾರ್ಥಃ

ಸಮಸ್ತಕಲ್ಯಾಣಗುಣಾರ್ಣ ಸ್ವಕೀಯಾರ್ಥ ಸ್ವರೂಪರೂಪೇ ದ್ವಿವಿಧಾಂ ವಿಭೂತಿಂ ।
ಪ್ರದರ್ಶ್ಯ ನಿರ್ಹೇತುಕಮನ್ವಗೃಹ್ಣಾದ್ಯಸ್ತಂ ನಮಸ್ಕೃತ್ಯ ಮನಸ್ಸಜೇವ್ಯಾಃ ॥
ಹೇಯಾಸಹತ್ವಾತ್ಸುಗುಣಾಕರತ್ವಾದ್ವಿಲಕ್ಷಣಂ ಸರ್ವಚಿತೋಽಚಿತಶ್ಚ ।
ಸರ್ವಾಂತರತ್ವಾತ್ಸಕಲಪ್ರವೃತ್ತಿನಿವೃತ್ತಿಸತ್ತಾದಿಷು ಮೂಲಭೂತಮ್ ॥೧೬॥
ಬ್ರಹ್ಮೇಂದ್ರರುದ್ರಾದಿಶರೀರಕತ್ವಾತ್ಸೃಷ್ಟ್ಯಾದಿಕಾರ್ಯಾಣ್ಯಪಿ ಕಾರಯಂತಂ ।
ಅಂಡೇಷ್ವಿವಾಣುಷ್ವಪಿ ಸಂಚರಂತಂ ದೃಢಶ್ರುತಿಪ್ರೋಕ್ತಮಿತೀದೃಶಂ ತಮ್ ॥

ವೀಡುಮಿನ್ ೧. ೨.

ತ್ಯಕ್ತ್ವಾ ಸರ್ವಂ ಭಜತ ಹರಿಮಿತ್ಯೂಚಿವಾನ್ ಕಾರಿಸೂನುಃ
ದೃಷ್ಟ್ವಾನ್ಯೇಷಾಂ ವ್ಯಸನಮಮಿತಂ ದುಸ್ಸಹಂ ಮನ್ಯಮಾನಃ ।
ವಿದ್ಯುಲ್ಲೇಖಾಚಪಲಮಖಿಲಂ ದೇಹಭೋಗ್ಯಾದಿಕಂ ತತ್
ಹಿತ್ವಾ ತಸ್ಮಿನ್ನಹಮಿತಿ ಮಮೇತ್ಯಾದಿ ಬುದ್ಧಿಂ ದಯಾಳುಃ ॥೧೮॥

ಪತ್ತುಡೈ ೧. ೩.

ಪರತ್ವಭಜನೀಯತೇ ಭಗವತಃ ಕ್ರಮಾದ್ಬೋಧಿತೇ
ತಥಾಪಿ ನಹಿ ಯುಜ್ಯತೇ ಭಜನಮೇಷ ದುರ್ದರ್ಶನಃ ।
ಇತೀದಮತಿಶಂಕಿತಂ ಪರಿಹರನ್ ಮುನಿರ್ಬೋಧಯ-
ತ್ಯತೀವ ಸುಲಭಂ ಹರಿಂ ಹ್ಯವತರಂತಮಾತ್ಮೇಚ್ಛಯಾ ॥೧೯॥

ವ್ರಜಭುವಿ ನವನೀತಸ್ತೇಯವಾರ್ತಾ ಪ್ರಸಂಗೇ
ಪ್ರತಿಗೃಹಮುಪವಿದ್ಧೋ ವಲ್ಲವೀಭಿಸ್ಸ್ವಮಂಥೈಃ ।
ಮುಹುರಪಿ ವಿನಿಬದ್ಧೋ ರಜ್ಜುಭಿರ್ನಂದಸೂನುಃ
ಕಿಮು ನ ಸುಲಭ ಏಷೋಽಹ್ಯಸ್ಮದಿಚ್ಛಾನುಸಾರೀ ॥೨೦॥

ಅಂಜಿರೈಯ ೧. ೪.

ಅನನ್ಯಶೇಷತ್ವಮುಖೈಸ್ತು ಷಡ್ಭಿರ್ಗುಣೈಸ್ಸಮಾನೋ ಮುನಿರೇಷ ಲಕ್ಷ್ಮ್ಯಾಃ ।
ವಿಯೋಗಿನೀ ಕಾಚಿದಿಹೈವ ಭೂತ್ವಾ ದೂತಾನ್ಯಕುಂಠಾನ್ ಪ್ರಹಿಣೋತಿ ತಸ್ಮೈ ॥

ದೋಷಾನದೃಷ್ಟ್ವಾ ಮಮ ಸಂಗತೋ ಮಯಾ
ದೃಷ್ಟ್ವಾ ತತಸ್ತ್ವಾನ್ಪ್ರವಿಹಾಯ ಮಾಂ ಗತಃ ।
ವಿಜ್ಞಾಪ್ಯ ತಂ ತಸ್ಯ ಗುಣಂ ಕ್ಷಮಾಭಿಧಂ
ಸಮಾನಯಧ್ವಂ ತಮಿಹೇತಿ ಸಂದಿಶನ್ ॥೨೧॥

ವಳವೇಳುಲಹುಂ ೧. ೫.

ನಿರಸ್ತನಿಖಿಲಾಶುಭಂ ಪರತಮಂ ಗುಣೈಸ್ಸರ್ವಶೋ
ಹರಿಂ ತಮನುಚಿಂತಯನ್ ಸ್ವಮಪಿ ಸರ್ವಹೇಯಾಕರಮ್ ।
ನ ದೂಷಯಿತುಮುತ್ಸಹೇ ತಮಹಮಿತ್ಯಸೌ ಕಾರಿಜೋ
ಜಿಹಾಸುರಭವದ್ಧರಿಂ ತದನು ತೇನ ಸಂಯೋಜಿತಃ ॥೨೨॥

ಪೞಿವದಿಲ್ ೧. ೬.

ಪರತ್ವಭಜನೀಯತಾ ಸುಲಭತಾದಿಪೂರ್ಣೋಽಪ್ಯಸೌ
ಭವೇದ್ಯದಿ ದುರರ್ಚನಃ ಕಥಮಿಮಾಂ ಯುವಾಶ್ರೀಯತಾಮ್ ।
ಇತೀಹ ನಹಿ ಚಿಂತ್ಯತಾಂ ದಲಸುಮಾಂಬುಧೂಮೈರಯಂ
ವಶೀ ಭವತಿ ದರ್ಶಿತೈಸ್ಸಕಲಕಾಮಪೂರ್ಣೋ ಯತಃ ॥೨೪॥

ಪಿರವಿತ್ತುಯರರ ೧. ೭.

ಶ್ರಿಯೋ ಭರ್ತಾ ಶೇಷೀ ಶುಭಗುಣಗಣೈರ್ಮಂಜುಲತಮೋ
ಮಹಾನಂದಸ್ಥಾನಂ ಶ್ರಿತಜನಮಹಾನಂದಜನಕಃ ।
ಅತೋ ವಿಷ್ಣೋಸ್ಸೇವಾ ಪಯ ಇವ ಸಿತಾಯುಕ್ತಮತುಲಮ್
ಸುಖಂ ತಸ್ಮಾತ್ಸರ್ವೇ ಭಜತ ಹರಿಮಿತ್ಯಾಹ ಶಠಜಿತ್ ॥೨೫॥

ತಸ್ಮಾದೈಶ್ವರ್ಯಕೈವಲ್ಯೇ ತ್ಯಕ್ತ್ವಾ ನಶ್ವರದಭ್ರಕೇ ।
ನಿತ್ಯಾಪರಿಚ್ಛಿನ್ನಸುಖಸ್ಸೇವ್ಯೋ ನಾರಾಯಣೋ ಹಿ ವಃ ॥೨೬॥

ಓಡುಂಬುಳ್ಳೇರಿ ೧. ೮.

ತ್ರಿವಿಧಕರಣೈರ್ಭಿನ್ನಾಕಾರಾ ನರಾಃ ಕುಟಿಲಾಸ್ಸ್ಮೃತಾಃ
ತದನುಸರಣಾದ್ದೇವಃ ಶ್ರೀಮಾನ್ ಭವೇದ್ದೃಜುರೇವ ನಃ ।
ತ್ರಿವಿಧಕರಣೈರೇಕಾಕಾರೋ ಋಜುರ್ಹರಿರುಚ್ಯತೇ
ಸ ಇಹ ದಶಕೇ ವಿಷ್ಣೋರ್ದಿವ್ಯೋ ಗುಣಃ ಪ್ರತಿಪಾದ್ಯತೇ ೨೭

ಇವ್ವೈಯುಮವ್ವೈಯುಮ್ ೧. ೯.

ಸರ್ವೇಂದ್ರಿಯೈರವಯವೈಶ್ಚ ಯಥೇಚ್ಛಮೇಷಃ
ಸಂಶ್ಲೇಷಮಾಪ್ಯ ಪುರುಷೇಣ ಪರೇಣ ಹೃಷ್ಯನ್ ।
ಏಕೈಕಥಾ ಹ್ಯನುಭವಂತಿ ಸುದರ್ಶನಾದ್ಯಾ-
ಸ್ತಂ ಸರ್ವಥಾ ಹ್ಯನುಭವಾಮ್ಯಹಮಿತ್ಯವೋಚತ್ ॥೨೮॥

ಪೊರುಮಾನೀಳ್ ೧. ೧೦.

ಸರ್ವಾಂಗಸಂಶ್ಲೇಷಸುಖಂ ಮಹಚ್ಚ ಸ್ವಸ್ಮಿಂಶ್ಚ ತದ್ಧೇತು ದರಿದ್ರತಾಂಚ ।
ಸಮ್ಯಗ್ವಿಚಿಂತ್ಯೇತ್ಥಮುದಾಜಹಾರ ನಿರ್ಹೇತುಕೈವಾಸ್ಯ ದಯಾ ಮುರಾರೇಃ ॥

ವಾಯುಂತಿರ್ೖೆಯುಹಳುಂ ೨. ೧.

ಪರತ್ವಂ ಸೌಲಭ್ಯಂ ವಪುಷಿ ಚ ಗುಣಾರ್ನ್ ವೀಕ್ಷ್ಯ ನಿಖಿಲಾನ್
ಮನೋ ದೃಷ್ಟ್ವಾ ಶೌರೇಃ ಬಾಹ್ಯಾನುಭವಕುತುಕೀ ನಾಲಭತ ತಮ್ |
ತತಃ ಖೇದಾತ್ತಸ್ಮಾತ್ಪತಿವಿರಹಿಣೀ ಕಾಪಿ ತರುಣೀ
ವಿವೇಶೋದ್ಯಾನಂ ತದ್ರಣರಣಕತಸ್ತತ್ರ ಚ ಸತಃ ॥೩೦॥

ಬಕಕುರರಸಮುದ್ರಾನ್ವಾತ ಮೇಘೇಂದುಲೇಖಾ-
ಸ್ತಿಮಿರಜಲಧಿಕುಲ್ಯಾ ದೀಪಕೀಲಾನ್ವಿಲೋಕ್ಯ |
ಸ್ವಮಿವ ಹರಿವಿಯುಕ್ತಾರ್ತ ಮನ್ಯಮಾನಾ ತು ಶೋಕಾತ್
ತ್ಯಜ ಮಮ ಸವಿಧಂ ತ್ವಂ ಮೇತಿ ಕೃಷ್ಣಂ ಯಯಾಚೇ ॥೩೧॥

ತಿಣ್ಣನ್ವೀಡು ೨. ೨.

ಗುಣವದ್ವಸ್ತುವಿಯೋಗಸ್ತನುತೇ ತಾಪಂ ಪ್ರಸಿದ್ಧಮಿದಮ್ |
ಯತ್ಕಿಂಚಿತ್ಸುಖಹೇತೋರ್ವಿಶ್ಲೇಷೋ ವಸ್ತುನಶ್ಚ ತನುತೇ ತಮ್ ೩೨
ಏವಂ ಸ್ಥಿತೇ ಗುಣಾನಾಂ ಕಲ್ಯಾಣಾನಾಂ ನಿಧೇರಸಂಖ್ಯಾನಾಂ |
ಸ್ಮೃತಿಮಾತ್ರಾದಾನಂದಂ ದದತೋಽಮಿತಮಾಶ್ವರಸ್ಯ ಕಿಮು ವಾಚ್ಯಮ್॥

ಸ್ವವಿಶ್ಲೇಷಾದ್ದುಃಖಂ ಮಹದನುಭವಂತಂ ಶಠರಿಪುಂ
ವಿಲೋಕ್ಯಾಯಂ ಶ್ರೀಶಃ ಪರಮಕೃಪಯಾ ದರ್ಶನಮದಾತ್ |
ತತೋ ಹರ್ಷಾದ್ದುಃಖಂ ಕ್ವಚಿದಪಿ ವಿಲೀನಂ ಸಮಯನ್
ನಿದಾನಂ ಶ್ರೀಶೇಽಸ್ಮಿನ್ ಗುಣ ಇತಿ ತಥೈವೇಶ್ವರ ಇತಿ ॥೩೪॥

ಸಶ್ಚಿತ್ಯೈವಂ ಕಾರಿಸೂನುರ್ಜನೇಭ್ಯ-
ಸ್ಸರ್ವೇಶತ್ವಂ ಬೋಧಯತ್ಯತ್ರ ಮಾಸೀ |
ಆದಾವುಕ್ತಂ ತಸ್ಯ ಸರ್ವೇಶ್ವರತ್ವಂ
ಭೂಯಶ್ಶ್ಲೋಕಾತ್ ಪೌನರುಕ್ತ್ಯಂ ಭವೇನ್ನೋ ॥೩೫॥

ಪರತ್ವೇಽಪರತ್ವಂ ಶ್ರುತಿಚ್ಛಾಯಯೋಕ್ತಂ ಪುರಸ್ತಾತ್ಸ್ವದೃಷ್ಟಂ ಶಠದ್ವೇಷಿಣಾಹಿ
ಇದಾನೀಂ ಪುರಾಣೋಕ್ತರೀತ್ಯಾವತಾರೇ ಪರತ್ವಂ ಪರೇಷಾಮುಪಾದಿಕ್ಷದತ್ರ॥

ತಸ್ಯೈಕಂ ಗುಣಮಾದರೇಣ ಸತತಂ ಸಂಭಾವಯನ್ನಪ್ಯಯಂ
ನೋ ತೃಪ್ಯೇತ್ಸ ತಥೈನಮಾಕಲಯಿತುಂ ಶಕ್ತೋ ಹಿ ಸರ್ವೇಶ್ವರಃ|

ಕಿಂಚೇಶೇ ಪುನರುಕ್ತಿರೇವ ನ ಭವೇದ್ಧ್ಯೋಷೋऽತ ಏಕಂ ಸದೋ-
ಪಾಸ್ಯಂ ಪ್ರಾಪ್ಯಮಪೀತಿ ಬೋಧಯತಿ ನಸ್ಸರ್ವಶ್ರುತೀನಾಂ ಶಿರಃ ॥೩೭॥

ಊನಿಲ್‌ವಾಳುಯಿರೇ ೨. ೩.

ಆದ್ಯೇ ದ್ವಿತೀಯಶತಕಸ್ಯ ವಿಯೋಗದುಃಖಂ
ಕಾರೇಸ್ಸುತಸ್ಯ ಭಗವಾನವಲೋಕ್ಯ ಖಿನ್ನಃ।
ತದ್ಧರ್ತುಕಾಮ ಉಪಗಮ್ಯ ದದೌ ಸುಭೋಗಂ
ತಸ್ಯ ಪ್ರಕಾರಮಿಹ ಬೋಧಯತಿ ಸ್ವಚಿತ್ತಮ್ ॥೩೮॥

ವಿಯೋಗದುಃಖಾನುಭವೇ ಸಹಾಯಾ-
ನಾಕಾಂಕ್ಷತಾಯಂ ಕಿಲ ತಿರ್ಯಗಾದೀನ್ ।
ಸಂಶ್ಲೇಷಮೋದಾನುಭವೇ ಸಹಾಯಾ-
ನಾಕಾಂಕ್ಷತೇ ಸೂರಿಜನಾನಿದಾನೀಮ್ ॥೩೯॥

ಮಧ್ಯೇ ಪ್ರಸಂಗಾದೀಶಸ್ಯ ಪರತ್ವಂ ಪ್ರತಿಪಾದಿತಮ್ ।
ಅನ್ವಯಾದ್ವ್ಯತಿರೇಕಾಚ್ಚ ದ್ವಿತೀಯೇ ದಶಕೇ ಪುನಃ ॥೪೦॥

ಆಡಿಯಾಡಿ ೨. ೪.

ಸಕಲವಿಧರಸಾನಾಂ ಭೋಗ್ಯತಾಂ ತತ್ರ ಭೋಕ್ತುಂ
ಭಗವತಿ ಸಹಕಾರಾನತ್ರ ಲೋಕೇ ವಿಚಿನ್ವನ್ ।
ಅಲಭತ ನ ತು ತಸ್ಮಾನ್ನಿತ್ಯಸೂರೀನ್ ಸಹಾಯಾ-
ನಕಲಿತಭವಗಂಧಾನ್ ಕಾರಿಸೂನುರ್ಯಯಾಚೇ ॥೪೧॥

ಪ್ರಕೃತಿನಿಗಳಿತತ್ವಾತ್ತತ್ಕ್ಷಣಂ ತಾನಲಬ್ಧ್ವಾ
ಮಿತಿರಹಿತವಿಷಾದಾತ್ಮಾಪಿ ಭೂತ್ವಾ ವಿಯುಕ್ತಾ ।
ನಿಗದಿತುಮಪಿ ವಾಚಾ ಸ್ವಾಮವಸ್ಥಾಮಶಕ್ತಾ
ಕಥಯತಿ ಭಗವಂತಂ ಮಾತೃವಾಚಾತಿದೈನ್ಯಾತ್ ॥೪೨॥

ವಿಭವಾಲಾಭಾತ್ ಪ್ರಥಮಃ ಪ್ರತಿಕೃತ್ಯನವಾಪ್ತಿತಸ್ತದನು ।
ವಿಶ್ಲೇಷಸ್ತು ತೃತೀಯಸ್ತದೀಯಗೋಷ್ಠ್ಯಾ ಅಲಾಭಾದ್ಧಿ ॥೪೩॥

ಅಂದಾಮುತ್ತಂಬು ೨. ೫.

ಗ್ರಾಹಗ್ರಸ್ತಗಜೇಂದ್ರದುಃಖಸದೃಶಂ ದುಃಖಂ ಮುನೇರ್ವೀಕ್ಷ್ಯ ಸಃ
ಶ್ರೀಮಾನ್ ದಿವ್ಯವಿಭೂಷಣೈಃ ಪ್ರಹರಣೈರ್ದಿವ್ಯಾಂಗಕೈಸ್ಸದ್ಗುಣೈಃ ।
ಆರೂಢೋ ಗರುಡಂ ಸಮೇತ್ಯ ರಭಸಾಲ್ಲಜ್ಜಾವಶಸ್ಸ್ವಂ ಹರಿಃ
ನಿಂದನ್ ಭೋಜಯತಿ ಸ್ಮ ಹರ್ಷವಿವಶಸ್ತಂ ವಕ್ತಿ ಭೋಗಂ ಮುನಿಃ ॥೪೪॥

ವೈಹುಂದಾ ೨. ೬.

ಮತ್ಸಂಶ್ಲೇಷಾಜ್ಜನಿತಾ ಪ್ರೀತಿಃ ಕೃಷ್ಣಸ್ಯ ಮಸ್ತಕಾತಿಗತಾ ।
ಪ್ರವಹತಿ ಮತ್ಸಂಬಂಧಿಷು ನ ತು ಮಯ್ಯೇವೇತಿ ವಕ್ತ್ಯತ್ರ ॥೪೫॥

ಚತುರ್ಥೇ ಜನಿತಂ ದುಃಖಂ ಪರ್ಯಹಾರ್ಷೀತ್ಸ ಪಂಚಮೇ ।
ತತ್ಸಂಶ್ಲೇಷಜ ಆನಂದಷ್ಷಷ್ಠೇ ಕೃಷ್ಣಸ್ಯ ಕಥ್ಯತೇ ॥೪೬॥

ಪ್ರಥಮೇ ಜನಿತಂ ದುಃಖಂ ತೃತೀಯೇ ತ್ವಹರದ್ಧರಿಃ ।
ತತ್ರ ತತ್ಸಂಗಜಂ ಸೌಖ್ಯಂ ಮುನೇರೇವೇತಿ ಕೀರ್ತಿತಮ್ ॥೪೭॥

ಮುನೇಃ ಪ್ರೀತಿರ್ಭಗವತಿ ತದೀಯಾನನುಧಾವತಿ ।
ಪ್ರೀತಿರ್ಭಗವತಶ್ಚಾಪಿ ಮುನಾವನ್ವೇತಿ ತಚ್ಛ್ರಿತಾನ್ ॥೪೮॥

ತತ್ಪ್ರೀತಿರ್ನೈವ ಸಿದ್ಧ್ಯೇತ್ತು ತದೀಯಪ್ರೀತಿಮಂತರಾ ।
ಲೋಕೇ ಶಾಸ್ತ್ರೇಪಿ ಚ ಪ್ರೀತೇಸ್ಸ್ವಭಾವೋಽಯಂ ನಿಗದ್ಯತೇ ॥೪೯॥

ಕೇಶವಂತಮುರ್ ೨. ೭.

ಶತಾರಾತೌ ಪ್ರೀತಿರ್ಭಗವತ ಇಯತ್ತಾ ವಿರಹಿತಾ
ನದೀವೋತ್ಕೂಲಾ ತನ್ಮುನಿಚರಣಸಂಬಂಧಿಜನತಾಮ್ ।
ಸುದೂರಾದನ್ವೇತೀತ್ಯಕಥಯದಥ ದ್ವಾದಶ ಹರೇ-
ಸ್ಸಮಾಖ್ಯಾಸ್ತದ್ವಾಸ್ಯ ಸ್ಥಿರಭವನ ಸಿದ್ಧ್ಯೈ ಮುನಿರಯಂ ॥೫೦॥

ಅಣೈವದು ೨. ೮.

ಜ್ಞಾತ್ವಾ ಶತಾರಿಸ್ಸ್ವಜನೇಷು ಸಂಗಂ ಕೃಷ್ಣಸ್ಯ ಲೋಕಂ ಸ್ವಜನಂ ವಿಧಾತುಂ
ಮೋಕ್ಷಪ್ರದತ್ವಂ ಹ್ಯುಪದಿಶ್ಯ ತಸ್ಯ ಭಜಂತು ಸರ್ವೇ ತಮಿತಿ ಬ್ರವೀತಿ ॥೫೧॥

Funding: IKS/Tattva Heritage. Digitization: Sarayu Trust/eGangotri

ಅದ್ವೇಷಂ ಚಾಭಿಮುಖ್ಯಂ ರುಚಿಮಪಿ ಜನಯಿತ್ವಾತ್ಮನಿ ಶ್ರೀಧರೋ ಮೇ
ಮಯ್ಯನ್ಯವ್ಯಾಪೃತೇಽಪಿ ಸ್ವಯಮಜಹದಿಮಂ ಮಾಂ ಮದೀಯೇಷು ಸಂಗಂ |
ಕೃತ್ವಾ ವ್ಯಾಮುಗ್ಧಚಿತ್ತಃ ಪರಮಮಪಿ ಪದಂ ದಿತ್ಸತಿ ಶ್ರೀಸಹಾಯ-
ಸ್ತಸ್ಮಾದ್ಧ್ಯಾಯಂ ಚ ಸರ್ವೇ ಭಜತ ಹರಿಮಿತಿ ಪ್ರಾಹ ಸರ್ವಾರ್ಥ ಶಠಾರಿಃ ||೫೩||

ಉಪದೇಶೇ ತು ನಿರರ್ಥೇ ತೇಷು ಪ್ರವಣೇಷು ವಿಷಯೇಷು |
ಸ್ವಾನುಭವ ಭ್ರಂಶವಶಾತ್ಖಿದ್ಯನ್ನಿತ್ಯೇವ ಚಿಂತಯಾಮಾಸ ||೫೪||

ಇಮೇ ತು ಸರ್ವೇ ಪ್ರಕೃತೌ ನಿಬದ್ಧಾಃ ಅಹಂ ಚ ತೇಷ್ವನ್ಯತಮಸ್ತಥಾಪಿ |
ಇಯಂ ತು ತಸ್ಯೈವ ಕೃಪಾ ಯದೇನಾನಬೋಧಯಂ ಹರ್ಷಮಿತಿ ಪ್ರಪೇದೇ ||

ಎಮ್ಮಾವೀಡು ೨. ೯.

ತತ್ಸೂರಿದೃಶ್ಯಂ ಪದಮಸ್ಯ ಸೂರೇಃ ಪ್ರದರ್ಶ್ಯ ಚ ಪ್ರಾಹ ಗೃಹಾಣ ಚೇತಿ |
ಯದ್ಯಸ್ಮದರ್ಥಂ ಪ್ರದದಾಸಿ ತನ್ಮೇ ಮಾಭೂತ್ತ್ವದರ್ಥಂ ಯದಿ ತನ್ಮಮಾಸ್ತು||

ಕಾರಿಸೂನುರಿತಿ ಪ್ರಾಪ್ಯೇ ನಿಶ್ಚಕರ್ಷ ಪರಾರ್ಥತಾಂ |
ದ್ವಿತೀಯಶತಕಸ್ಯಾಸ್ಯ ನವಮೇ ದಶಕೇ ಮುನಿಃ ||೫೬||

ಕಿಳರೊಳಿ ೨. ೧೦.

ಪ್ರಾಪ್ಯಂ ನಿಷ್ಕೃಷ್ಯ ಚೈವಂ ಮುನಿಮತಿರಭಸಾತ್ಪ್ರಾರ್ಥಯಾನಂ ಸಪರ್ಯಾಂ
ದೇಹೇನೈವಾಮುನೇತಿ ಪ್ರವಿದಿತಹೃದಯಃ ಪ್ರಾಹ ಶೌರಿಶ್ಶಠಾರಿಮ್ |
ತ್ವತ್ಸೇವಾಯೈ ವಿವಿಕ್ತಂ ಸ್ಥಲಮಿದಮಭಜಂ ಭೋಗ್ಯಭೂತಂ ವನಾದ್ರೇಃ
ಪ್ರಸ್ಥಂ ಸೇವಸ್ವ ಮಾಂ ತ್ವಂ ಭವದಭಿಲಷಿತಂ ಪೂರಿತಂ ಸ್ಯಾದ್ಯಥೇತಿ ||೫೭||

ತಚ್ಛ್ರುತ್ವಾ ತಂ ವನಾದ್ರಿಂ ತದಧಿಪಮಥ ತತ್ಪಾರ್ಶ್ವಗಂ ಶೈಲಮೇವಾ-
ಥಾಧ್ವಾನಂ ತಸ್ಯ ಚಾದ್ರೇರ್ಗಮನವತಿಮಥೋ ಭಾವಯಂಶೋ ಭವಂತಃ |
ಸಿಂಹಾದ್ರಿಸ್ವಾಮಿಪಾದೌ ಪರಿಚರಿತುಮಲಂ ಸಂಭವಂತೀತಿ ಸೂರಿ-
ಸ್ಸರ್ವೇಷಾಮಾನೃಶಂಸ್ಯಾದುಪದಿಶತಿ ಹಿತಂ ಶ್ರೀನಗರ್ಯಾಃ ಪತಿರ್ನಃ ||೫೮||

ಮುಡಿಚ್ಚೋದಿ ೩. ೧.

ವನಗಿರಿಮನುಭೂಯ ಶ್ರೀ ಶಠಾರಿಃ ಪ್ರಹೃಷ್ಯನ್
ಗಿರಿಪರಿಸರರೂಢಂ ಕಲ್ಪವೃಕ್ಷಂ ಸುಶಾಖಮ್ ।
ಕುಸುಮಫಲಸುಪೂರ್ಣಂ ವೀಕ್ಷ್ಯ ತಸ್ಯಾಂಗಭೂಷಾ-
ಸುಘಟಿತತರತಾಂ ತಾಮನ್ವಭೂತ್ ಜ್ಞಾನದೃಷ್ಟ್ಯಾ ॥೯೯॥
ಅತಿಶಯಿತಜ್ಞಾನಾನಾಮಪಿ ದೇವಾನಾಂ ಸುದುರ್ಜ್ಞೇಯಃ ।
ವೃಣುತೇಽಯಂ ತೇನೈಷ ದ್ರಷ್ಟವ್ಯಸ್ಸರ್ವಥಾ ಚೇತಿ ॥೬೦॥

ಮುನ್ನೀರ್ ಞಾಲಂ ೩. ೨.

ಶಠಾರಿಸ್ಸೌಂದರ್ಯಂ ವನಗಿರಿಪತೇರ್ಯಾವದಪಿ ತ-
ದ್ಯಥಾವತ್ ಜ್ಞಾತುಂ ನಾಶಕದಪಿ ತತಃ ಖಿನ್ನಹೃದಯಃ ।
ಮದೀಯಾನಾಂ ದೋಷೋ ಭವತಿ ಕರಣಾನಾಮಿತಿ ಜಗೌ
ಹರಿಸ್ತನ್ನೇತ್ಯುಕ್ತ್ವಾ ವಿಷಯಗತ ಏವೇತಿ ಜಗದೇ ॥೬೧॥
ಕದಾಪ್ಯಸ್ಪೃಷ್ಟಸಂಸಾರಾಸ್ಸೂರಯೋಽಪ್ಯೇವಮೇವ ಹಿ ।
ವ್ಯಾಮುಹ್ಯಂತಿ ನ ತೇ ದೋಷ ಇತಿ ದೇವಸ್ಸಮಾದಧೇ ॥೬೨॥

ಒಳಿವಿಲ್ ಕಾಲಮ್ ೩. ೩.

ಸೃಷ್ಟ್ಯಾದಿ ವ್ಯಾಪೃತೈಸ್ಸ್ವೈರವತರಣಮುಖೈಶ್ಚೇಷ್ಟಿತೈಸ್ತತ್ರ ದಿವ್ಯೈ-
ರೇವಂ ರೂಪೈರುಪಾಂಗೈರ್ವಶಯಿತುಮಿಹ ನಃ ಪರ್ಯಕಾರ್ಷೀತ್ಪ್ರಯತ್ನಾ
ಭ್ರಷ್ಟಸ್ಸರ್ವೇಭ್ಯ ಏಭ್ಯಃ ಪ್ರಕೃತಿನಿಗಳಿತಃ ಕಿಂ ನು ಕುರ್ಯಾಂ ಸಪರ್ಯಾಂ
ನಷ್ಟೋಽಹಂ ಸರ್ವಥೇತಿ ವ್ಯಲಪದತಿಶುಚಾ ಕಾರಿಸೂನುಶ್ಶಠಾರಿಃ ॥೬೩॥
ಅತ್ರಾಹಂ ವೇಂಕಟಾದ್ರೌ ತವ ಸಕಲವಿಧಂ ಕಿಂಕರತ್ವಂ ಗ್ರಹೀತುಂ
ಪೂರ್ವಂ ಸಿದ್ಧೋಽಸ್ಮಿ ಸೇವಾಮಿಹ ಮಮ ತನುತೇ ನಿತ್ಯವರ್ಗೋಽಪಿ ನಿತ್ಯಂ ।
ತಸ್ಮಾದಾಗತ್ಯ ಸೇವಾಮಿಹ ಕುರು ಲಷಿತಾಮಿತ್ಯವೋಚನ್ಮುರಾರಿ-
ಸ್ತಚ್ಛ್ರುತ್ವಾ ತಾಂ ಯಯಾಚೇ ಹ್ಯುಪಧಿವಿರಹಿತಾಂ ನಿತ್ಯಸಿದ್ಧಾಂ ಶಠಾರಿಃ ॥
ದೇಶಕಾಲದಶಾಭಿಶ್ಚಾನವಚ್ಛಿನ್ನಾಮವಿಚ್ಛಿದಾಮ್ ।
ಸೇವಾಂ ಸರ್ವವಿಧಾಂ ಸೂರಿರಾಡಕಾಂಕ್ಷೇ ಮನೋರಥೈಃ ॥೬೪॥

ಪುಹಳುನಲ್ ೩. ೪.

ಸರ್ವಾವಸ್ಥೋಚಿತಾಶೇಷಶೇಷವೃತ್ತಿರತೌ ಮುನೌ ।
ತಸ್ಯಾನುಕೂಲಂ ಸರ್ವಾತ್ಮಭಾವಂ ಪ್ರಾದರ್ಶಯದ್ಧರಿಃ ॥೬೬॥

ಏಕಸ್ಯಾಂ ಹಾರಯಷ್ಟೌ ವಿವಿಧಮಣಿವರಾನ್ಯೋಜಯನ್ ಪೂರುಷೋ ಯ-
ಸ್ತದ್ವತ್ಸೋಽಯಂ ಶಠಾರಿರ್ಹರಿಗುಣತನುಭೂತ್ಯಾಯುಧಾಲಂಕ್ರಿಯಾಶ್ಚ ।
ದೇವೀಸ್ಸೂರೀನ್ ಪದಂ ತತ್ಸಕಲಮಪಿ ಸಮಂ ಯೋಜಯಿತ್ವಾನುಭೂಯ
ಸ್ವಾಂತಸ್ಸಂತೋಷಪೋಷಂ ಕಥಯತಿ ವಚಸಾ ಸ್ವೈರಸಂಮೂರ್ಛಿತೇನ ॥

ಮೋಯ್ಮಾಂಪೂಂಪೊಳಿಲ್ ೩. ೫.

ಸರ್ವಪ್ರಕಾರೈರನುಭೂಯ ಶೌರಿಮಾನಂದದುಗ್ಧಾಂಬುಧಿಮಗ್ನಮೂರ್ತಿಃ ।
ಏವಂ ವಿಧಾನಂದಭುಜಃ ಪ್ರಶಸ್ಯ ತಚ್ಛೂನ್ಯಜಂತೂನ್ವಿನಿನಿಂದ ಸೂರಿಃ ॥೬೮॥

ಶೈಯ್ಯತಾಮರೈ ೩. ೬.

ಪೂರ್ವಂ ವಿನಿಂದ್ಯ ಭಗವದ್ವಿಮುಖಾನ್ ಶಠಾರಿ-
ಸ್ತತ್ರಾಪಿ ಹೇತುಮವಲೋಕ್ಯ ಸುದುರ್ಲಭತ್ವಮ್ ।
ಅರ್ಚಾವತಾರಸುಲಭತ್ವಮಮುಷ್ಯ ತೇಭ್ಯಃ
ಕಾರುಣ್ಯತಸ್ಸಮುಪದಿಶ್ಯ ಪುನರ್ವಿಷಣ್ಣಃ ॥೬೯॥

ಪಯಿಲುಂಶುಡರೊಳಿ ೩. ೭.

ಅರ್ಚಾಸೌಲಭ್ಯಕಾಷ್ಠಾಮುಪದಿಶತಿ ಮುನೌ ಸ್ವಾಂಘ್ರಿರೇಖಾ ಸದೃಕ್ಷಾನ್
ಸಿದ್ಧೋಪಾಯಸ್ವಸೀಮ್ನಸ್ಸ್ವಚರಣಶರಣಾನ್ ದರ್ಶಯಾಮಾಸ ಶೌರಿಃ ।
ತಾನ್ ದೃಷ್ಟ್ವಾ ಜನ್ಮವೃತ್ತಶ್ರುತಮುಖರಹಿತಾನಪ್ಯಯಂ ವಕ್ತಿ ಮಾನ್ಯಾನ್
ಸ್ವಾತ್ಮ್ಯಾಸಂ ತತ್ತದಂಘ್ರಿಪ್ರವಣಜನಗಣಸ್ವೈರಕೃತ್ಯೋಪಯೋಜ್ಯಮ್ ೭೦

ಮುಡಿಯಾನೇ ೩. ೮.

ದುರ್ಭಿಕ್ಷೇಽತ್ಯಂತರಿಕ್ತೋ ಗೃಹಪತಿರಿವ ತೈಃ ಪುತ್ರಕೈಃ ಕ್ರೋಶಮಾನೈ-
ರನ್ಯೋನ್ಯಾಹಾರಲಿಪ್ಸಾಕೃತಮತಿಭಿರಯಂ ಕಾರಿಸೂನುಸ್ಸ್ವಕೀಯೈಃ ।
ಅನ್ಯೋನ್ಯವ್ಯಾಪೃತೀಚ್ಛೈರ್ವಿವಿಧಕರಣಕೈರ್ಭೋಕ್ತುಮಾಕ್ರೋಶತೀಶಂ
ತಾರ್ತೀಯಸ್ಯಾಷ್ಟಮೇಽಸ್ಮಿನ್ ದಶಕ ಅತಿತರಾಮಾಶಯಾ ಪೀಡ್ಯಮಾನಃ ೭೧ .

ಶೋನ್ನಾಲ್ವಿರೋಧಂ ೩. ೯.

ಆಕ್ರೋಶಕಂ ಭಗವತಸ್ಸ್ವಮಿವಾತ್ರ ಲೋಕೇ
ಚಿನ್ವನ್ ಸಹಾಯಮನವಾಪ್ಯ ತದೀಯಹಾನಿಮ್ ।
ಸಮ್ಯಗ್ವಿಚಿಂತ್ಯ ದಯಯಾ ಹಿತಮೇಷ ತೇಭ್ಯಃ
ಪ್ರಾದಿಕ್ಷದಸ್ಮೃತನಿಜವ್ಯಸನಶ್ಶಠಾರಿಃ ॥೭೨॥

ಮರ್ತ್ಯಸ್ಯ ಹೇಯಭರಿತಸ್ಯ ನುತಿಂ ವಿಹಾಯ
ಕಲ್ಯಾಣದಿವ್ಯಗುಣಸಂಘಸುಧಾರ್ಣವಸ್ಯ ।
ಸ್ತೋತ್ರೇ ನಿಯುಜ್ಯ ರಸನಾಂ ಭವತಾಂ ಮುರಾರೇಃ
ಧನ್ಯಾ ಭವಂತು ಸತತಂ ಮನುಜಾ ಭವಂತಃ ॥೭೩॥

ಶನ್ಮಂಪಲಪಲ ೩. ೧೦.

ಸ್ವಸ್ಯೇತರಸ್ತುತಿವಿಧಾವಧಿಕಾರಹಾನಿ-
ಮುಕ್ತ್ವಾಪ್ಯದ್ಯ ವಕ್ತಿ ಭಗವದ್ಗುಣಸತ್ಕವಿತ್ವಮ್ ।
ನಾನಾವತಾರಗುಣಚೇಷ್ಟಿತದೋಷಹಾನಿ-
ಭೂಷಾಯುಧಾಂಗಸುಭಗತ್ವಮುಖೇಷು ಸಮ್ಯಕ್ ॥೭೪॥

ಆಸ್ವಾದ್ಯ ದಗ್ಧನಿಖಿಲಪ್ರತಿಬಂಧಸಂಘಃ
ಕೋನ್ಯೋಽಸ್ತಿ ಮತ್ಸದೃಶ ಇತ್ಯಪಿ ಚಾಹ ಸೂರಿಃ ।
ಏವಂ ತೃತೀಯಶತಕೇ ಕಥಿತೋಽರ್ಥವರ್ಗಃ
ಪೂರ್ಣಃ ಕ್ರಮೇಣ ದಶಭಿರ್ದಶಕೈಃ ಪ್ರತೀತಃ ॥೭೫॥

ಒರುನಾಯಕಮಾಯ್ ೪. ೧.

ರಾಜ್ಯಸ್ವರ್ಗಾದಿಭೋಗೋ ಭಿದುರ ಇತಿ ದೃಢಂ ನಿಶ್ಚಿತಃ ಕೇವಲಾತ್ಮಾ
ಶುದ್ಧೋ ನಿತ್ಯೋಽಪ್ಯಣುತ್ವಾತ್ಪರಿಮಿತಸುಖವಾನ್ ಸೂರಿಭೋಗ್ಯಾತ್ಪರಸ್ಮಾತ್
ತಸ್ಮಾತ್ತೇ ದ್ವೇ ವಿಹಾಯ ದ್ವಯಮನುಕಥಿತಾ ಯಾದವಾದ್ರೀಶಪಾದಾ
ಸ್ಮೃತ್ವಾ ಲಬ್ಧೇಽವಕಾಶೇ ಜನಿಫಲಮತುಲಂ ಪ್ರಾಪ್ನುತೇತ್ಯಾಹ ಸೂರಿಃ ೭೬

ಪಾಲನಾಯ್ ೪. ೨.

ಸ್ವಸ್ಯೋಪದೇಶೇ ವಿಫಲೇ ತ್ರಿವಾರಂ ಸ್ವೀಯಾನುಭೂತೇರ್ವಿಶದತ್ವಹೇತೌ ।
ಹೃಷ್ಯನ್ನಪಿ ಪ್ರಾಕ್ತನವಾಸನಾತಸ್ತಸ್ಯಾಪದಾನಾನಿ ಪುರಾತನಾನಿ ॥೭೭॥

ಅದ್ಯೈವ ಭೋಕ್ತುಮುಪಯುಂಕ್ತ ನ ಚೋಪಲೇಭೇ
ತಸ್ಮಾಚ್ಚ ಕಾಂತವಿಯುತಾ ತರುಣೀ ಬಭೂವ ।
ಮೋಹಂ ಗತಾ ಚ ಜನನೀ ತು ಜಗಾದ ತಸ್ಯಾ-
ಸ್ತಾಂ ತಾಂ ದಶಾಮತಿಶುಚಾ ಪರಿದೂಯಮಾನಾ ॥೭೮॥

ಕೋವೈವಾಯಾಳ್ ೪. ೩.

ಕಾಲಾಂತರೀಯಾಣ್ಯವತಾರವೃತ್ತಾನ್ಯದ್ಯಾನುಭೋಕ್ತುಂ ವ್ಯವಸಾಯಮಸ್ಯ ।
ಜ್ಞಾತ್ವಾ ಹರಿಸ್ತಾದೃಶದುರ್ಲಭತ್ವಾತ್ಪ್ರೀತಿಂ ಸ್ವಕೀಯಾಂ ಪ್ರಕಟೀಚಕಾರ ೭೯

ತತೋಽನುಭೂಯಪ್ರಣಯಿತ್ವಮೇಷ ತದೇವ ವಕ್ತ್ರ್ಯತ್ರ ಮುನಿಸ್ತೃತೀಯೇ ।
ಬಾಲಸ್ತು ಚಂದ್ರಾಹರಣಾಯ ಶೋಚನ್ಯಥಾ ನಿವರ್ತ್ಯೇತ ಫಲಪ್ರದಾನಾತ್ ॥

ತಥಾತ್ಮನಿ ಪ್ರೀತಿಗುಣಾನುಭೂತ್ಯಾ ಸಮಾಹಿತೋಽಭೂನ್ಮುನಿರತ್ರ ಭೂಯಃ ।
ದೃಷ್ಟಂ ಶ್ರುತಂ ವರ್ತ್ಮ ವಚಶ್ಚ ತಸ್ಯ ವಿಸ್ರಂಭಹೇತುರ್ಭವತೀತಿ ಸಿದ್ಧಮ್ ೮೧

ಕಾಲಾಧಿಪಃ ಕಾಲಮಪೋಹ್ಯ ಭೂತಂ ಸದ್ಯಸ್ತನಂ ದರ್ಶಯತಿ ಸ್ಮ ಸರ್ವಂ ।
ಸ್ವೇನಾನುಭೂತಂ ಸಕಲಂ ವ್ಯನಕ್ತಿ ವಾಚಾ ಮುನಿಸ್ವೈರವಿಸಾರಿಣೀನ್ಯಾ ೮೨

ಮಣ್ಣೈಯಿರುಂದು ೪. ೪.

ಉನ್ಮಸ್ತಕಂ ರಸಮುಮುಷ್ಯ ವಿಲೋಕ್ಯ ಶೌರಿ-
ರಾಧಾರಲೋಪ ಭಯತೋ ವಿಮುಖೋ ಬಭೂವ ।
ತಸ್ಮಾದ್ವಿಯುಕ್ತತರುಣಾ ತರುಣೀ ಸ ಭೂತ್ವಾ
ಮೋಹಂ ಗತಾಥ ಜನನೀ ಕಥಯಾಂಬಭೂವ ॥೮೩॥

ಇಯಂ ತನೂಜಾ ಮಮ ಶೌರಿತುಲ್ಯಂ ಭ್ರಾಂತ್ಯಾ ತದೀಯಂ ಚ ತಮೇವ
ಮತ್ವಾ ।
ಅನುವ್ರಜತ್ಯಾಶು ನಿವೃತ್ತಮೋಹಾಽಪ್ಯತೋ ನಿವೃತ್ತಾ ನ ಭವೇದ್ಬತಾಹೋ ॥

ವೀತ್ತಿರುಂದೇಳುಲಹುಂ ೪. ೫.

ಆದ್ಯಪ್ರಬಂಧಪ್ರಾರಂಭಾದದ್ಯಾವಧಿ ಕೃತಾ ಕೃಷಿಃ ।
ಸರ್ವೇಶ್ವರಸ್ಯ ಫಲಿತೇತ್ಯುಚ್ಯತೇ ದಶಕೇಽತ್ರ ತು ॥೮೫॥

ಮುಹುಸ್ಸಂಶ್ಲೇಷವಿಶ್ಲೇಷೈಸ್ತ್ವರಾಮುತ್ಪಾದ್ಯ ಭೂಯಸೀಮ್ ।
ಸಂಪೂರ್ಣಾಂ ಸ್ವಾನುಭೂತಿಂ ಹಿ ದದಾವತ್ರ ಯತೋ ಹರಿಃ ॥೮೬॥

ಯೋ ವಿಯೋಗಾತ್ಸದೃಶಂ ತತ್ಸಂಬಂಧಿ ಚ ವೀಕ್ಷ್ಯ ತಮ್ ।
ಮನ್ಯವಾನಶ್ಯುಶೋಚಾಸೌ ಧನ್ಯಂ ಮನ್ಯೋಽದ್ಯ ವೈ ಮುನಿಃ ೮೭

ಏತದ್ದಶಕಭೋಗಸ್ತು ಸರ್ವಾಂತೇ ನಾಭವತ್ಕೃತಃ ।
ಇತ್ಯಾಹಾತ್ರ ಯತಿಶ್ರೇಷ್ಠೋ ವೇದಾಂತೀ ತು ಮುಹುರ್ಮುಹುಃ ॥

ತೀರ್ಪಾರ್ಯೆಯಾಮಿನಿ ೪. ೬.

ಮಹಾನಂದಾನುಭೂತ್ಯೈವ ನಿರ್ವೃತ್ತಂ ದಶಕಂ ಗತಮ್ ।
ತತ್ಪ್ರತಿದ್ವಂದ್ವಿ ದುಃಖಂ ತು ಕಥ್ಯತೇಽತ್ರ ತಯೋರ್ದ್ವಯೋಃ ॥೮೮॥

ಶಾಸ್ತ್ರಾತ್ಸಂಗತಿರಿತ್ಯೇವ ವಿಚಾರೇ ನೈವ ಸಂಗತಿಃ ।
ಇತ್ಯಾಹ ಯತಿರಾಜಸ್ಯ ಪಾದಚ್ಛಾಯಾ ಗುರುಸ್ಸ್ವಯಮ್ ॥೯೦॥

ಪೂರ್ವಾನುಭೂತೇಸ್ಸರ್ವಸ್ಯಾ ಮಾನಸತ್ವಾದತೃಪ್ತಿತಃ ।
ಆಶಾಸ್ಯ ಬಾಹ್ಯಸಂಶ್ಲೇಷಂ ತದಲಾಭಾಚ್ಚ ದುಃಖಿತಃ ॥೯೧॥

ಕಾಚಿತ್ಸಂಶ್ಲಿಷ್ಟವಿಶ್ಲಿಷ್ಟಾ ಭೂತ್ವಾ ಮೋಹಮುಪಾಗತಾ ।
ತನ್ನಿದಾನಂ ತದಾ ಪ್ರಷ್ಟುಂ ಪೌರನಾರ್ಯಸ್ಸಮಾಗತಾಃ ॥೯೨॥

ತದಾ ವಿಪ್ರಶ್ನಿಕಾ ಕಾಚಿದಾವಿಷ್ಟಾಂ ದೇವತಾಂತರೈಃ ।
ಪ್ರಾಹ ಶ್ರುತ್ವಾ ತು ತತ್ಕೇಚಿದ್ದೇವತಾಂತರಸೇವಕಾಃ ॥೯೩॥

ಚಿಕೀರ್ಷವಃ ಪ್ರತೀಕಾರಂ ಮದ್ಯಮಾಂಸಾದಿಭಿರ್ಗೃಹಮ್ ।
ವೈಷ್ಣವಾನಾಂ ದೂಷಯಿತುಂ ಸಮಯೋಽಯಮಿತಿ ಸ್ಥಿತಾಃ ॥೯೪॥

ತದಾ ತ್ವಸ್ಯಾಸ್ಸಖೀ ಬ್ರೂತೇ ನಾಯಂ ಪರಿಹೃತಿಕ್ರಮಃ ।
ದೇವತಾಂತರಗಂಧೇ ತು ನೈವ ಜೀವೇದಿಯಂ ಪುನಃ (ಧ್ರುವಂ) ॥೯೫॥

ಧೂಳೀಭಿರ್ವೈಷ್ಣವಾಂಘ್ರೀಣಾಂ ಲಿಪ್ಯತಾಂ ತಾಪಶಾಂತಯೇ ।
ಕೀರ್ತ್ಯಂತಾಂ ಹರಿನಾಮಾನಿ ತುಲಸೀ ಕ್ಷಿಪ್ಯತಾಂ ಹೃದಿ ॥೯೭॥
ಅಸ್ಯಾಸ್ಸ್ವಭಾವಸದೃಶಃ ಪ್ರತೀಕಾರೋಽಯಮೇವ ಹಿ ।
ಅನ್ಯಥೇಮಾಂ ನಾಶಯಂತಿ ಭವಂತ್ಯೋ ಗಚ್ಛತೇತಿ ತಾಃ ॥೯೭॥

ಶೀಲಮಿಲ್ಲಾಚ್ಚಿರಿಯೆನ್ ೪. ೭.

ಅತೀತಮೇವ ದಶಕಂ ಶ್ಲಾಘ್ಯಮಾಸೀನ್ಮುನೇರ್ಯತಃ ।
ನಾಜ್ಞಾನಾದ್ದುಃಖಮಲ್ಪಂ ವಾ ಮೋಹಾನ್ಮೋಹೋ ಹಿ ತಾದೃಶಃ ೯೮
ಸಖ್ಯಾ ಪ್ರಸಂಗಾದುಕ್ತಾನಿ ಶ್ರುತ್ವಾ ನಾಮಾನಿ ವೈ ಹರೇಃ ।
ಸೇಚನಾದಮೃತಸ್ಯೇವ ಲಬ್ಧ್ವಾ ಚೈತನ್ಯಮಾತುರಃ ॥೯೯॥
ಉತ್ಕಂಠಯಾ ಸುದೃಢಯಾ ಕ್ರೋಶತ್ಯುಚ್ಚೈಸ್ತಥಾ ಹರಿಮ್ ।
ಯಥಾ ಸ್ವಮಹಿಷೀಸ್ಸೂರೀಂಸ್ತ್ಯಕ್ತ್ವಾ ಸ್ವಂ ಸ್ಥಾನಮುತ್ತಮಮ್ ॥
ಆಧಾವೇದಸ್ಯ ಸವಿಧಂ ಗಜೇಂದ್ರಸ್ಯೇವ ಸನ್ನಿಧಿಮ್ ।
ಆಕ್ರೋಶೋ ಹ್ಯಸ್ಯ ವಿಶ್ಲೇಷೇ ಸೀತಾಕೌಸಲ್ಯಯೋರಿವ ॥೧೦೧॥

ಏರಾಳುಮಿರ್ಕೈಯೋನುಮ್ ೪. ೮.

ಯದಾಕ್ರೋಶಂ ಶ್ರುತ್ವಾ ದ್ರವತಿ ಜಲವಜ್ಜಂತುರಖಿಲ-
ಸ್ತದಾಕ್ರೋಶ್ರುತ್ವಾಪ್ಯಖಿಲಗುಣಪೂರ್ಣೋ ಮಧುರಿಪೌ ।
ಅನಾಗಚ್ಛತ್ಯೇವಂ ಮುನಿರಮನುತ ಸ್ವಂ ಭಗವತ-
ಸ್ತ್ವನಿಷ್ಟಂ ತಸ್ಮಾತ್ ಸ್ವಂ ಮಮ ಭವತು ಮಾ ಸ್ವೀಯಮಪಿ ವಾ ॥೧೦೨॥
ಅಯಂ ಮನೋಗತಸ್ತ್ವರ್ಥೋ ನಿಸ್ಸಸಾರ ಮುಖಾನ್ಮುನೇಃ ।
ಹರೇರಭಿಮತಂ ವಸ್ತು ವಸ್ತ್ವಿತ್ಯೇತೇನ ಗಣ್ಯತೇ ॥೧೦೩॥

ನಣ್ಣಾದಾರ್ ೪. ೯.

ಆತ್ಮಾ ಶರೀರಂ ಚ ತವಾನಭೀಷ್ಟಂ ಮಮಾಪಿ ಮಾಭೂದಿತಿ ಸೂರಿರೂಚೇ ।
ವಿನಾ ತದಿಚ್ಛಾಂ ನಹಿ ವಸ್ತು ನಶ್ಯೇತ್ತತೋ ಹರಿಂ ಪ್ರಾರ್ಥಯತೇ ವಿನಾಶಂ ॥

ವಿಷ್ಣೋರ್ವಿಶ್ಲೇಷದುಃಖಾದ್ಧರಿವಿಮುಖಜನೈಸ್ಸಂಗದುಃಖಂ ಮಹೀಯಃ
ಪಶ್ಯನ್ ಸೂರಿಶ್ಶತಾರಿಃ ಪರಿಹರ ಜಗತೋ ಯಾಚತೇ ಮಾಮಿತೀತಿ ।
ಕೇಚಿತ್, ಕೂರೇಶವರ್ಯಃ ಕಥಯತಿ ನಿಜದುಃಖಾನುಭೂತ್ಯೈ ಸಹಾಯಂ
ಚಿನ್ವನ್ನಪ್ರಾಪ್ಯ ಲೋಕೇ ಸ್ವಸದೃಶಮಥ ತದ್ದುಃಖಭಾರಂ ವಿಚಿಂತ್ಯ ॥೧೦೫॥

ವಿಸ್ಮೃತ್ಯ ಸ್ವಸ್ಯ ದುಃಖಂ ಹರಿಮನುಯುಯುಜೇ ಕಿಂ ತ್ವಮೇತಾನುದಾಸ್ಸೇ
ಸರ್ವಜ್ಞಸ್ಸರ್ವಶಕ್ತಸ್ಸಕಲಪತಿರಸಿ ತ್ವಂ ದಯಾಳುರ್ಹ್ಯಕಸ್ಮಾತ್ ।
ತಸ್ಮಾದುದ್ಧರ್ತುಮರ್ಹಸ್ಯಖಿಲಮಿಮಮಿತಿ ಶ್ರೀಪತಿಃ ಪ್ರಾಹ ಸರ್ವಂ
ಮತ್ಕರ್ತವ್ಯಂ ಯಥಾವತ್ಕೃತಮಥ ಚ ರುಚಿಶ್ಚೇತನಶ್ಚೇದಪೇಕ್ಷ್ಯಾ ॥೧೦೬॥

ಅನ್ಯಥಾ ಪುರುಷಾರ್ಥತ್ವಂ ಮದ್ದತ್ತಸ್ಯ ಕಥಂ ಭವೇತ್ ।
ಪುರುಷೈರರ್ಥ್ಯಮಾನಂ ಹಿ ಪುರುಷಾರ್ಥ ಇತೀರ್ಯತೇ ॥೧೦೭॥

ಇತ್ಯುಕ್ತವತಿ ಸರ್ವೇಶೇ ಪ್ರಾಹ ಸೂರಿಃ ಪುನಸ್ತ್ವಿದಮ್ ।
ಯದ್ಯಸಾಧ್ಯಮಿದಂ ತೇ ಸ್ಯಾದಿತೋ ಮಾಮುದ್ಧರಾಶ್ವಿತಿ ॥೧೦೮॥

ಯದಾ ಜಿಹಾಸಾ ಜಾತಾ ತೇ ಸಂಸಾರಿಷು ತದಾ ಭವಾನ್ ।
ಉದ್ಧೃತೋ ಹಿ ಮಯೇತ್ಯೇವಂ ಹರಿರೂಚೇ ಮುನಿಸ್ತ್ವಿದಮ್ ॥

ಶ್ರುತ್ವಾ ಹೃಷ್ಟೋ ದಧಾರಾಶು ಪ್ರಾಣಾನಪಿ ಕಲೇವರಮ್ ।
ಪ್ರಬಂಧಪೂರಣೇ ಯತ್ನಃ ಫಲಿತೋಽಭೂದ್ರಮಾಪತೇಃ ॥೧೧೦॥

ಓನ್ನುಂತೇವುಮ್ ೪. ೧೦.

ತ್ಯಕ್ತಂ ಸರ್ವೇಶ್ವರೇಣಾಪ್ಯಸುಕರಮಿತಿ ತಂ ಜೀವವರ್ಗಂ ದಯಾತಃ
ಸಂಸಾರಾದುದ್ದಿಧೀರ್ಷುರ್ಮುನಿರಯಮತನೋಚ್ಚೇತಸೀತ್ಥಂ ಮನಸ್ವೀ ।
ಸಂಸಾರೇ ಹೇತುರೇಷಾಮಿತರಭಜನಮಪ್ಯತ್ರ ದೇವೇ ಪರತ್ವ-
ಜ್ಞಾನಾಭಾವಶ್ಚ ತಸ್ಮಾದ್ಧರಿಪರತಮತಾಂ ಬೋಧನೀಯಾ ಮಯೇಮೇ ॥

ಪತ್ಯುಶ್ಶ್ರಿಯಃ ಪರತ್ವಂ ತು ಸರ್ವಸ್ಮಾದಪಿ ದೈವತಾತ್ ।
ಉಪಾದಿಶದಯಂ ಸ್ವೇನ ಸರ್ವೇಭ್ಯಸ್ತುಲ್ಯತಾಂ ದಿಶನ್ ॥೧೧೧॥

ಉಪದಿಶ್ಯ ಪ್ರಥಮತಃ ಪರತ್ವೇ ಪರತಾಂ ಹರೇಃ ।
ತತೋ ವಿಭವಗಾಂ ತಾಂ ತು ವಕ್ತ್ಯತ್ರಾರ್ಚಾಗತಾಂ ತು ತಾವತ್ ॥೧೧೩॥

ಸತ್ತಯಾ ದಶಕಸ್ಯಾಸ್ಯ ಹ್ಯಸ್ಮದೀಯವಶೇ ಸ್ಥಿತಾಃ ।
ಸ್ತ್ರಿಯೋಽಪಿ ದೇವತಾಮನ್ಯಾಂ ಚುಲ್ಲ್ಯರ್ಥದ್ವ್ಯಪದಾಸವಾವತ್ ೧೧೪

